ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evaluation Authority

# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ವಾರ್ಷಿಕ ವರದಿ 2019 - 2020

**ಪರಿಣಾಮಕಾರಿ ಅಭ್ಯಾಸದೊಂದಿಗೆ ಉದ್ದೇಶಿತ ಮತ್ತು ಅಳೆಯಬಹುದಾದ ಫಲಿತಾಂಶಗಳನ್ನು ಒದಗಿಸಿ, ಸಂಪನ್ಮೂಲಗಳ ವಿವೇಕಯುತ ಮತ್ತು ಸೂಕ್ತ ಬಳಕೆಯೊಂದಿಗೆ ನಾಗರಿಕರ ತೃಪ್ತಿಯನ್ನು ಗರಿಷ್ಠಗೊಳಿಸಲು ಸರ್ಕಾರದ ಅಭಿವೃದ್ಧಿ ನೀತಿಗಳು, ಕಾರ್ಯಕ್ರಮಗಳು ಮತ್ತು ಯೋಜನೆಗಳ ಪರಿಣಾಮಕಾರಿ ಹಾಗೂ ಪಾರದರ್ಶಕ ಮೌಲ್ಯಮಾಪನ.**



ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
T.M. VIJAY BHASKAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಮುಕಾ/766/2020

26th ಆಗಸ್ಟ್, 2020



## ಸಂದೇಶ

ವಿಶ್ವಾಸಾರ್ಹ ಮೌಲ್ಯಮಾಪನಗಳು ಸಾಕ್ಷ್ಯಾಧಾರಿತ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಬೆಂಬಲಿಸುವ, ಮೂಲಕ ಸಂಪನ್ಮೂಲದ ಅತ್ಯುತ್ತಮ ಬಳಕೆ ಹಾಗೂ ಸಾಮೂಹಿಕ ಕಲ್ಯಾಣವನ್ನು ಗರಿಷ್ಠಗೊಳಿಸಲು ಇದು ಕೊಡುಗೆಯನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ಕರ್ನಾಟಕವು ಒಂದು ಮುಂಚೂಣಿಯ ಸ್ಥಾನವನ್ನು ಗಳಿಸಿದೆ. ರಾಜ್ಯವು ತನ್ನ ಯೋಜನೆಗಳು ಮತ್ತು ಕಾರ್ಯಕ್ರಮಗಳ ಸ್ವತಂತ್ರ ಮೌಲ್ಯಮಾಪನವನ್ನು ಪಡೆಯಲು, 2000ನೇ ಇಸವಿಯಲ್ಲಿ ಕರ್ನಾಟಕ ಮೌಲ್ಯಮಾಪನ ನೀತಿಯನ್ನು ಅಳವಡಿಸಿಕೊಂಡಿರುತ್ತದೆ ಮತ್ತು 2011ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಪ್ರಾರಂಭಿಸುವ ಮೂಲಕ ಸ್ವತಂತ್ರ ವ್ಯವಸ್ಥೆಯನ್ನು ಸ್ಥಾಪಿಸಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯು ವಿವಿಧ ಸಂಶೋಧನೆ ಮತ್ತು ಮೌಲ್ಯಮಾಪನ ಸಂಸ್ಥೆಗಳಿಂದ ತಜ್ಞರು ಹಾಗೂ ಉನ್ನತ ಆಡಳಿತಗಾರರ ಒಂದು ಗುಂಪಾಗಿದ್ದು, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಮನಾಗಿ ಮೌಲ್ಯಮಾಪನ ಮಾನದಂಡಗಳನ್ನು ಹೆಚ್ಚಿಸಲು ಗುಣಮಟ್ಟದ ಉಪಕ್ರಮಗಳನ್ನು ತೆಗೆದುಕೊಳ್ಳಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಸತತವಾಗಿ ಮಾರ್ಗದರ್ಶನವನ್ನು ನೀಡುತ್ತಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯವೈಖರಿಯನ್ನು ಗಣ್ಯ ಸಂದರ್ಶಕರಾದ ನೀತಿ ಆಯೋಗದ ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಚೇರಿಯ ನಿರ್ದೇಶಕರು, ಮೆಕ್ಸಿಕೊ ಕೊನೆವಾಲ್‌ನ ಡಾ॥ ಗೊನ್ಸಾಲೋ ನೇತೃತ್ವದ ಮೌಲ್ಯಮಾಪನ ತಂಡದವರು ಮತ್ತು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಮತ್ತು ವಿಶ್ವಸಂಸ್ಥೆಯ ಅಂತರ್‌ರಾಷ್ಟ್ರೀಯ ಮಕ್ಕಳ ತುರ್ತುನಿಧಿಯ ಪ್ರತಿನಿಧಿಗಳು ಮೆಚ್ಚಿರುವುದಕ್ಕೆ ನಾನು ಸಂತೋಷಪಡುತ್ತೇನೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯ ಅಧ್ಯಕ್ಷರಾಗಿ, ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕೈಗೊಂಡ ಮೌಲ್ಯಮಾಪನ ಅಧ್ಯಯನಗಳು ಮತ್ತು ಈ ವರದಿಗಳಲ್ಲಿ ನೀಡಲಾದ ಸಲಹೆಗಳನ್ನು ಸಂಬಂಧಿಸಿದ ಇಲಾಖೆಗಳು ಯೋಜನೆ ಅನುಷ್ಠಾನದಲ್ಲಿನ ವಿನ್ಯಾಸಗಳು ಮತ್ತು ವಿಸ್ತರಣೆ ಪ್ರಕ್ರಿಯೆಗಳಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತೊರತರುವಲ್ಲಿ ಉತ್ತಮವಾಗಿ ಸ್ವೀಕರಿಸುತ್ತವೆ ಈ ಬಗ್ಗೆ ನನ್ನ ಮೆಚ್ಚುಗೆಯನ್ನು ದಾಖಲಿಸುತ್ತೇನೆ. ವಿವಿಧ ಸಂಘ ಸಂಸ್ಥೆಗಳ ಜೊತೆಗೆ ಯುವಕರ ಸಾಮರ್ಥ್ಯ ವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿ – 2030 ಇವುಗಳಿಗಾಗಿ ರಾಜ್ಯ ಕಾರ್ಯಸೂಚಿ ಮತ್ತು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನೀಡಿದ ಬೆಂಬಲವು ಶ್ಲಾಘನೀಯವಾಗಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಹೊಸ ಉಪಕ್ರಮವನ್ನು ತೆಗೆದುಕೊಂಡ ಸ್ವತಂತ್ರ ಮೌಲ್ಯಮಾಪನ ಕೈಗೊಳ್ಳುವಲ್ಲಿ ಇನ್ನೂ ಉನ್ನತ ಉತ್ತುಂಗವನ್ನು ತಲುಪಿ ಪರಿಣಾಮಕಾರಿ ಯೋಜನೆಗಳನ್ನು ವಿನ್ಯಾಸಗೊಳಿಸಲು ಹಾಗೂ ಉತ್ತಮ ಆಡಳಿತವನ್ನು ಉತ್ತೇಜಿಸಲು ಸರ್ಕಾರದ ಉಪಕ್ರಮಗಳು ಬೆಂಬಲಿಸಿ ಸುಸ್ಥಿರ ಅಭಿವೃದ್ಧಿ ಗುರಿ – 2030 ರ ಕಾರ್ಯಸೂಚಿಯನ್ನು ಸಾಧಿಸಲು ನೆರವಾಗಬಹುದೆಂದು ನಾನು ಅಪೇಕ್ಷಿಸುತ್ತೇನೆ.

ಟಿ.ಎಂ.ವಿಜಯ್ ಭಾಸ್ಕರ್
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ
ಸಾಮಾನ್ಯ ಆಡಳಿತ ಮಂಡಳಿಯ ಅಧ್ಯಕ್ಷರು

# 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560 001, ದೂರವಾಣಿ ಕಛೇರಿ: +91-80-22252442 / 22253716 ಫ್ಯಾಕ್ಸ್: +91-80-22258913
# 320, 3rd Floor, Vidhana Soudha, Bengaluru - 560 001. Phone. off. +91-80-22252442 / 22253716 Fax: +91-80-22258913
e-mail : cs@karnataka.gov.in

**ಡಾ. ಶಾಲಿನಿ ರಜನೀಶ್,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: acsplanningkar@gmail.com

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರು ಇವರಿಂದ ಸಂದೇಶ**

ಕಾರ್ಯಕ್ರಮದ ಫಲಿತಾಂಶಗಳನ್ನು ಗರಿಷ್ಠಗೊಳಿಸಲು ಸಾಕ್ಷ್ಯಾಧಾರಿತ ನೀತಿಯನ್ನು ರೂಪಿಸಲು ರಾಜ್ಯಕ್ಕೆ ಅನುವು ಮಾಡಿಕೊಟ್ಟ



ತನ್ನ ಕಾರ್ಯಕ್ರಮಗಳು ಮತ್ತು ನೀpತಿಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಕರ್ನಾಟಕ ರಾಜ್ಯವು 2000ರಲ್ಲಿ ಮೌಲ್ಯಮಾಪನ ನೀತಿಯನ್ನು ರೂಪಿಸಿದ್ದು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು 2011ರಲ್ಲಿ ಸ್ಥಾಪಿಸಿದ್ದು, ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿದೆ. ಕಾಲಾನಂತರದಲ್ಲಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದು, ತನ್ನ ಅಸ್ತಿತ್ವವನ್ನು ಪರಿಣಾಮಕಾರಿಯಾಗಿಸಲು ತನ್ನ ಚಟುವಟಿಕೆಗಳನ್ನು ವೈವಿಧ್ಯಗೊಳಿಸಿರುತ್ತದೆ ಮತ್ತು ಮೌಲ್ಯಮಾಪನ ಕ್ಷೇತ್ರದಲ್ಲಿ ಒಂದು ಮಾದರಿಯಾಗಿ ವಿಕಸನಗೊಂಡಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರಾಗಿರುವ ನನಗೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮೌಲ್ಯಮಾಪನ ವರದಿಗಳ ಗುಣಮಟ್ಟವನ್ನು ಸುಧಾರಿಸಲು ಮತ್ತು ಮೌಲ್ಯಮಾಪನ ಅಧ್ಯಯನದಲ್ಲಿ ಶಿಫಾರಸ್ಸುಗಳ ಅನುಷ್ಠಾನಕ್ಕಾಗಿ ಇಲಾಖೆಗಳ ಅನುಸರಣೆಗೆ ಕೈಗೊಂಡಿರುವ ಉಪಕ್ರಮಗಳು ಮತ್ತು ಪ್ರಯತ್ನಗಳ ಬಗ್ಗೆ ಸಂಪೂರ್ಣ ಮೆಚ್ಚುಗೆಯಿದೆ. ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸಲು ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳ ಶಿಕ್ಷಣ ತಜ್ಞರು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಜೊತೆಗೆ ಸಂಬಂಧವನ್ನು ಹೊಂದಿದ್ದಾರೆ. ಪ್ರಾಧಿಕಾರದಲ್ಲಿ ಕೆಲಸದ ಗುಣಮಟ್ಟ ಮತ್ತು ದಕ್ಷತೆಯನ್ನು ಹೆಚ್ಚಿಸಲು ಮಾರ್ಗದರ್ಶನ ಮತ್ತು ತಜ್ಞರ ಸಲಹೆಯನ್ನು ನೀಡುವಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿ ಮತ್ತು ಆಡಳಿತ ಮಂಡಳಿಯು ಸಕ್ರಿಯವಾಗಿರುತ್ತದೆ. ತಾಂತ್ರಿಕ ಸಮಿತಿಯು ದತ್ತಾಂಶ ವಿಶ್ಲೇಷಣೆ ಮತ್ತು ಮೌಲ್ಯಮಾಪನ ವರದಿಗಳಲ್ಲಿನ ವ್ಯಾಖ್ಯಾನಗಳಿಗೆ ಉಪಯುಕ್ತ ಒಳನೋಟಗಳನ್ನು ಒದಗಿಸುತ್ತಿದೆ.

ಮಹತ್ವಾಕಾಂಕ್ಷಿಯ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸಲು, ಅಂತರ್‌ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಹಾಗೂ ಪಬ್ಲಿಕ್ ಅಫೇರ್ಸ್ ಸೆಂಟರ್‌ನೊಂದಿಗೆ ಜ್ಞಾನ ಪಾಲುದಾರಿಕೆಯನ್ನು ನಿರ್ಮಿಸುವುದು, ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರವನ್ನು ಸ್ಥಾಪಿಸಲು ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದೊಂದಿಗೆ ಸಹಭಾಗಿತ್ವ, ಸುಸ್ಥಿರ ಅಭಿವೃದ್ಧಿ ಗುರಿ-2030ರ ಕಾರ್ಯತಂತ್ರದ ದಾಖಲೆ ಮತ್ತು ಕ್ರಿಯಾ ಯೋಜನೆಗಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಯೋಜನಾ ಇಲಾಖೆಗೆ ಅಮೂಲ್ಯವಾದ ಬೆಂಬಲವನ್ನು ನೀಡುತ್ತಿದೆ.

ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮೌಲ್ಯಮಾಪನ ಸಂಸ್ಥೆಗಳೊಂದಿಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಉನ್ನತ ಉತ್ತುಂಗಕ್ಕೆ ಏರುವುದನ್ನು ನಾನು ಎದುರು ನೋಡುತ್ತಿದ್ದೇನೆ. ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರಗಳು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕೈಗೊಂಡ ಅಧ್ಯಯನ ಮತ್ತು ವಿಶ್ಲೇಷಣೆಗಳು ಫಲಿತಾಂಶ ಆಧಾರಿತ ವಿಧಾನದೊಂದಿಗೆ ಇಲಾಖೆಗಳು ತಮ್ಮ ಯೋಜನೆಗಳು ಮತ್ತು ನೀತಿಗಳನ್ನು ತರ್ಕಬದ್ಧಗೊಳಿಸಲು ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ.

ಡಾ.ಶಾಲಿನಿ ರಜನೀಶ್

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

(ISO 9001:2015 ರಿಂದ ಮಾನ್ಯತೆ ಪಡೆದಿದೆ)

# 542, 5ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001

ದೂರವಾಣಿ: 080 - 22353938, 22032561 ಫ್ಯಾಕ್ಸ್: 22283541

ಮಿಂಚಂಚೆ: keagok@karnataka.gov.in; ಜಾಲತಾಣ: kea.karnataka.gov.in

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evaluation Authority

## ಮುಖ್ಯ ಮೌಲ್ಯಮಾಪನ ಅಧಿಕಾರಿಯವರಿಂದ ಸಂದೇಶ



ನವೀನ ಚಟುವಟಿಕೆಗಳು, ಸಂವಹನಗಳು ಮತ್ತು ಸಹಭಾಗಿತ್ವಗಳಿಂದ ತುಂಬಿರುವ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 2019-20ರ ವಾರ್ಷಿಕ ವರದಿಯನ್ನು ಪ್ರಸ್ತುತಪಡಿಸಲು ನನಗೆ ಸಂತೋಷವಾಗುತ್ತಿದೆ. ಸಾಕ್ಷ್ಯಾಧಾರಿತ ನೀತಿಯ ಮೂಲಕ ಕಾರ್ಯಕ್ರಮದ ಫಲಿತಾಂಶಗಳನ್ನು ಗರಿಷ್ಠಗೊಳಿಸಿ ಸರ್ಕಾರದ ಉಪಕ್ರಮಗಳನ್ನು ಬೆಂಬಲಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು 2011 ರಲ್ಲಿ ಸ್ವತಂತ್ರ ಮೌಲ್ಯಮಾಪನ ಸಂಸ್ಥೆಯಾಗಿ ಸ್ಥಾಪಿಸಲಾಗಿರುತ್ತದೆ. ಜಾರಿಯಲ್ಲಿರುವ ಉಪಕ್ರಮಗಳ ಮೂಲಕ, ಹೊಸ ಮಧ್ಯಸ್ಥಗಾರರನ್ನು ತಲುಪಲು ಮತ್ತು ನೀತಿ ಪರಿಣಾಮವನ್ನು ಸಾಧಿಸುವಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಯಶಸ್ವಿಯಾಗಿರುತ್ತದೆ. ಫಲಿತಾಂಶಗಳನ್ನು ಗರಿಷ್ಠಗೊಳಿಸುವ ಸಲುವಾಗಿ ಕಾರ್ಯಕ್ರಮ ವಿನ್ಯಾಸ ಮತ್ತು ಅನುಷ್ಠಾನದಲ್ಲಿ ಮಧ್ಯಾವಧಿ ತಿದ್ದುಪಡಿಗಳನ್ನು ಕೈಗೊಳ್ಳಲು ವಸ್ತುನಿಷ್ಠ, ನಿಷ್ಪಕ್ಷಪಾತ ಕ್ಷೇತ್ರ ಮಟ್ಟದ ಸಾಕ್ಷ್ಯವನ್ನು ಒದಗಿಸಬಲ್ಲ ಯೋಜನೆಗಳು/ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ವಿವಿಧ ಇಲಾಖೆಗಳಿಂದ ನಾವು ಹೆಚ್ಚಾಗಿ ಕೋರಲ್ಪಡುತ್ತಿದ್ದೇವೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದಲೂ 143 ಅಧ್ಯಯನಗಳನ್ನು ಮತ್ತು 2019-20ರಲ್ಲಿ 18 ಅಧ್ಯಯನಗಳನ್ನು ಪೂರ್ಣಗೊಳಿಸಿರುತ್ತದೆ. ಸಾಂಕ್ರಾಮಿಕ ರೋಗದ ಪರಿಸ್ಥಿತಿಯಿಂದ ಮುಕ್ತಾಯದ ತ್ರೈಮಾಸಿಕದಲ್ಲಿ ಈ ವೇಗವು ನಿಧಾನವಾಗಿರುತ್ತದೆ. ವಿವಿಧ ಕ್ಷೇತ್ರ ಇಲಾಖೆಗಳಿಂದ ಮೌಲ್ಯಮಾಪನ ಅಧ್ಯಯನಗಳ ಶಿಫಾರಸ್ಸುಗಳ ಅನುಷ್ಠಾನದ ಮೂಲಕ ಮೌಲ್ಯಮಾಪನಗಳ ಪ್ರಭಾವವನ್ನು ಗಮನಾರ್ಹವಾಗಿ ಅರಿಯಲಾಗಿರುತ್ತದೆ. ನಿಯಮಿತ ಮತ್ತು ವಿಶೇಷ ಇಂಟರ್ನ್‌ಶಿಪ್ ಕಾರ್ಯಕ್ರಮಗಳು ಯುವ ಪ್ರತಿಭೆಗಳಿಂದ ಅಭೂತಪೂರ್ವ ಪ್ರತಿಕ್ರಿಯೆಯನ್ನು ಪಡೆದಿದ್ದು, ಸುಮಾರು 300 ಕ್ಕೂ ಹೆಚ್ಚು ಪ್ರತಿಭಾವಂತರು ಕೋವಿಡ್-19ರ ಸವಾಲುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ವಿವಿಧ ಯೋಜನೆಗಳಲ್ಲಿ ಕಾರ್ಯ

ನಿರ್ವಹಿಸುತ್ತಿದ್ದಾರೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಆರು ರಿಸರ್ಚ್ ಫೆಲೋಗಳನ್ನು, ಒಬ್ಬ ಸಹಾಯಕ ನಿರ್ದೇಶಕ, ನಿರ್ದೇಶಕ (ಮೌಲ್ಯಮಾಪನ) ಮತ್ತು ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ ಇವರನ್ನು ಹೊಂದಿರುತ್ತದೆ. ಇದು ಕೆಲಸದ ದಕ್ಷತೆಯನ್ನು ಗಮನಾರ್ಹವಾಗಿ ಹೆಚ್ಚಿಸಿರುತ್ತದೆ.

ಈ ವರ್ಷದಲ್ಲಿ, ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದಿಂದ ಡಾ. ಎ ಕೆ ಶಿವಕುಮಾರ್, ಡಾ. ಗೊನ್ಜಾಲೋ ಹರ್ನಾಂಡೆಜ್ ಲಿಕೋನಾ- ಓರ್ವ ಮೆಕ್ಸಿಕೋದ ಆರ್ಥಿಕ ತಜ್ಞರು ಮತ್ತು ಬಡತನ ವಿಶ್ಲೇಷಣೆ ಕ್ಷೇತ್ರದಲ್ಲಿ ಪ್ರಖ್ಯಾತ ವಿದ್ವಾಂಸರು ಮತ್ತು ಸಾಮಾಜಿಕ ಅಭಿವೃದ್ಧಿ ನೀತಿಯ ಮೌಲ್ಯಮಾಪನಕ್ಕಾಗಿ ರಾಷ್ಟ್ರೀಯ ಕೌನ್ಸಿಲ್ ನ (CONEVAL) ಸಂಸ್ಥಾಪಕರು ಮತ್ತು ಶ್ರೀ ಅಲೋಕ್ ಮಿಶ್ರಾ ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಛೇರಿಯ (DEMO) ನಿರ್ದೇಶಕರು ಹಾಗೂ ವಿಶ್ವ ಸಂಸ್ಥೆಯ ಅಂತರ್‌ರಾಷ್ಟ್ರೀಯ ಮಕ್ಕಳ ತುರ್ತು ನಿಧಿಯ (UNICEF) ಪ್ರತಿನಿಧಿಗಳು ಇವರೊಂದಿಗೆ ನಡೆಸಿದ ಪರಸ್ಪರ ಸಂವಾದಗಳು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಮೌಲ್ಯಮಾಪನ ದೃಷ್ಟಿಕೋನಗಳು ಮತ್ತು ಪ್ರಕ್ರಿಯೆಗಳನ್ನು ಮರುರೂಪಿಸಲು ಸಹಾಯ ಮಾಡಿರುತ್ತದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ವಿಜಯ್ ಭಾಸ್ಕರ್ ರವರು ಮತ್ತು ಸಾಮಾನ್ಯ ಮಂಡಳಿಯ ಸದಸ್ಯರುಗಳಿಗೆ, ಡಾ. ಶಾಲಿನಿ ರಜನೀಶ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಅಧ್ಯಕ್ಷರು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿ ಮತ್ತು ಸದಸ್ಯರ ಸತತ ಮಾರ್ಗದರ್ಶನ ಹಾಗೂ ಬೆಂಬಲಕ್ಕಾಗಿ ಇವರಿಗೆಲ್ಲಾ ನನ್ನ ಪ್ರಾಮಾಣಿಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮೌಲ್ಯಮಾಪನ ವರದಿಗಳ ಕುರಿತು ಉಪಯುಕ್ತವಾದ ಪ್ರತಿಕ್ರಿಯೆಗಳು ಮತ್ತು ಸಲಹೆಗಳಿಗಾಗಿ ತಾಂತ್ರಿಕ ಸಮಿತಿಯ ಸದಸ್ಯರಿಗೆ ನನ್ನ ಧನ್ಯವಾದಗಳು.

ಅಂತಿಮವಾಗಿ, ನಮ್ಮ ಎಲ್ಲ ಪಾಲುದಾರರಿಗೆ – ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳು, ಸ್ವತಂತ್ರ ಮೌಲ್ಯಮಾಪಕರು ಮತ್ತು ವಿಷಯ ತಜ್ಞರುಗಳು ನಮ್ಮ ಕಾರ್ಯದಲ್ಲಿ ತೀವ್ರ ಆಸಕ್ತಿ ವಹಿಸಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಬದ್ಧ ಸಿಬ್ಬಂದಿಗೆ ವಿಶೇಷ ಮೆಚ್ಚುಗೆಯ ಅಗತ್ಯವಿರುತ್ತದೆ. ಈ ದಾಖಲೆಯ ಪುಟಗಳಲ್ಲಿ ವಿವರಿಸಿರುವಂತೆ ನಮ್ಮ ವೈವಿಧ್ಯಮಯ ಚಟುವಟಿಕೆಗಳು, ಉತ್ತಮ ಆಡಳಿತ ಮತ್ತು ನಾಗರಿಕರ ಕಲ್ಯಾಣವನ್ನು ಉತ್ತೇಜಿಸುವ ಉದ್ದೇಶವನ್ನು ಅನುಸರಿಸುವಲ್ಲಿ ಪ್ರಾಧಿಕಾರದ ಸಮರ್ಪಿತ ಪ್ರಯತ್ನವು ಗೋಚರಿಸಲ್ಪಡುತ್ತದೆ.

Sudarshan G A

ಮುಖ್ಯ ಮೌಲ್ಯಮಾಪನಾಧಿಕಾರಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ಪರಿವಿಡಿ

1. ಪರಿಚಯ ........ 1

2. ದೂರ ದೃಷ್ಟಿಯ ಅಭಿಯಾನ– ಉದ್ದೇಶಗಳು ಮತ್ತು ಚಟುವಟಿಕೆಗಳು ... 5

3. ಸಾಂಸ್ಥಿಕ ನಕ್ಷೆ ಮತ್ತು ಮಾನವ ಸಂಪನ್ಮೂಲ ........ 1

4. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳ ಅವಲೋಕನ 2019–20 ........ 8

5. ಇಂಟರ್ನ್‌ಶಿಪ್ ಕಾರ್ಯಕ್ರಮ ........ 38

6. ಮೌಲ್ಯಮಾಪನ ಅಧ್ಯಯನಗಳು ........ 1

7. ಗುಣಮಟ್ಟದ ಉಪಕ್ರಮಗಳು ........ 1

8. ಮೌಲ್ಯಮಾಪನಗಳ ಪರಿಣಾಮ ........ 1

9. ವಿಸ್ತರಿತ ಚಟುವಟಿಕೆಗಳು........ 1

10. ಅತ್ಯುತ್ತಮ ಅಭ್ಯಾಸಗಳು ........ 1

11. ಅನುಬಂಧ I ........ 1

12. ಅನುಬಂಧ–II ........ 1

# 1. ಪರಿಚಯ

ಮೌಲ್ಯಮಾಪನವು ಉತ್ತಮ ಆಡಳಿತ ಮತ್ತು ಸಾಕ್ಷ್ಯಾಧಾರಿತ ನೀತಿ ನಿರೂಪಣೆಯ ಮೂಲಕ ಆಯವ್ಯಯದ ಫಲಿತಾಂಶಗಳನ್ನು ಗರಿಷ್ಠಗೊಳಿಸಲು ಒಂದು ಪ್ರಮುಖ ಸಾಧನವಾಗಿರುತ್ತದೆ. ಮೌಲ್ಯಮಾಪನವು ಒಂದು ಚಟುವಟಿಕೆ, ಯೋಜನೆ, ಕಾರ್ಯಕ್ರಮ, ಕಾರ್ಯತಂತ್ರ, ನೀತಿ, ವಿಷಯ, ಸಂಗತಿ, ವಲಯ, ಕಾರ್ಯಾಚರಣೆಯ ಕ್ಷೇತ್ರ ಅಥವಾ ಸಾಂಸ್ಥಿಕ ಕಾರ್ಯಕ್ಷಮತೆಯನ್ನು ಸಾಧ್ಯವಾದಷ್ಟು ವ್ಯವಸ್ಥಿತವಾಗಿ ಮತ್ತು ನಿಷ್ಪಕ್ಷಪಾತವಾಗಿ ನಿರ್ಧರಿಸುವ ಸಾಧನವಾಗಿರುತ್ತದೆ. ಪ್ರಸ್ತುತತೆ, ಪರಿಣಾಮಕಾರಿತ್ವ, ದಕ್ಷತೆ, ಪ್ರಭಾವ ಮತ್ತು ಸುಸ್ಥಿರತೆಯಂತಹ ಸೂಕ್ತ ಮಾನದಂಡಗಳನ್ನು ಬಳಸಿಕೊಂಡು ಫಲಿತಾಂಶಗಳ ಸರಪಳಿ, ಪ್ರಕ್ರಿಯೆಗಳು, ಸಂದರ್ಭೋಚಿತ ಅಂಶಗಳು ಮತ್ತು ಕಾರಣಗಳನ್ನು ಪರಿಶೀಲಿಸುವ ಮೂಲಕ ನಿರೀಕ್ಷಿತ ಮತ್ತು ಅನಿರೀಕ್ಷಿತ ಫಲಿತಾಂಶಗಳ ಸಾಧನೆಯ ಮಟ್ಟವನ್ನು ಇದು ವಿಶ್ಲೇಷಿಸುತ್ತದೆ. ಇದು ವಿಶ್ವಸನೀಯ ಮತ್ತು ಉಪಯುಕ್ತ ಸಾಕ್ಷ್ಯಾಧಾರಿತ ಮಾಹಿತಿಯನ್ನು ನೀಡುವ ಮೂಲಕ ಸರ್ಕಾರಿ ಸಂಸ್ಥೆಗಳ ಮತ್ತು ಮಧ್ಯಸ್ಥಗಾರರ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಆವಿಷ್ಕಾರಗಳು, ಶಿಫಾರಸ್ಸುಗಳು ಮತ್ತು ಕಲಿತ ಪಾಠಗಳನ್ನು

ಸಮಯೋಜಿತವಾಗಿ ಸಂಯೋಜಿಸಲು ಅನುವು ಮಾಡಿಕೊಡುತ್ತದೆ. (ವಿಶ್ವಸಂಸ್ಥೆಯ ಮೌಲ್ಯಮಾಪನ ಗುಂಪು–2016)

ಮೌಲ್ಯಮಾಪನದ ಉದ್ದೇಶಗಳು ಹೊಣೆಗಾರಿಕೆ ಮತ್ತು ಕಲಿಕೆಯನ್ನು ಉತ್ತೇಜಿಸುವುದಾಗಿರುತ್ತದೆ. ಮೌಲ್ಯಮಾಪನವು ಉದ್ದೇಶಿತ ಮತ್ತು ಅನುದ್ದೇಶಿತ ಫಲಿತಾಂಶಗಳು ಏಕೆ ಮತ್ತು ಎಷ್ಟರ ಮಟ್ಟಿಗೆ ಸಾಧಿಸಿವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳ ಪರಿಣಾಮಗಳನ್ನು ವಿಶ್ಲೇಷಿಸುವುದಾಗಿರುತ್ತದೆ. ಮೌಲ್ಯಮಾಪನವು ಯೋಜನೆ, ಕಾರ್ಯಕ್ರಮ ರೂಪಿಸುವುದು, ಆಯವ್ಯಯ ತಯಾರಿಕೆ, ಸೂಕ್ತ ಆಯ್ಕೆಗಳ ಅನುಷ್ಠಾನ ಮತ್ತು ವರದಿ ಮಾಡುವಿಕೆ ಹಾಗೂ ಸಾಕ್ಷ್ಯಾಧಾರಿತ ನೀತಿ ನಿರೂಪಣೆ, ಅಭಿವೃದ್ಧಿ ಪರಿಣಾಮಕಾರಿತ್ವ ಮತ್ತು ಸಾಂಸ್ಥಿಕ ಪರಿಣಾಮಕಾರಿತ್ವಕ್ಕೆ ಕೊಡುಗೆ ನೀಡುತ್ತದೆ.

ಕರ್ನಾಟಕವು ರಾಷ್ಟ್ರದಲ್ಲಿ 2000ದ ಇಸವಿಯಲ್ಲಿ ಮೌಲ್ಯಮಾಪನ ನೀತಿಯನ್ನು ವಿಕಸನಗೊಳಿಸಿದ ಮೊದಲ ರಾಜ್ಯಗಳಲ್ಲಿ ಒಂದು ಆಗಿರುತ್ತದೆ. ಮೌಲ್ಯಮಾಪನ ನೀತಿಯ ಪ್ರಮುಖ ಘಟಕಗಳು ಈ ಕೆಳಗಿನಂತಿರುತ್ತವೆ.

- ರೂ. 1 ಕೋಟಿಗಿಂತ ಹೆಚ್ಚಿನ ಹಣ ವಿನಿಯೋಗಿಸಿದ ಯೋಜನೆಗಳನ್ನು ಯೋಜನಾ ಅವಧಿಯಲ್ಲಿ ಕನಿಷ್ಟ ಒಮ್ಮೆಯಾದರೂ ಮೌಲ್ಯಮಾಪನಗೊಳಿಸುವುದು.

- ಕಾರ್ಯಕ್ರಮ/ಯೋಜನೆಯಲ್ಲಿ ಒಟ್ಟು ವಿನಿಯೋಗಿಸಿದ ಹಣದ ಶೇಕಡಾ 1ರಷ್ಟನ್ನು ಯೋಜನೆಯ ಮೌಲ್ಯಮಾಪನ ಉದ್ದೇಶಕ್ಕಾಗಿ ಕಾಯ್ದಿರಿಸುವುದು.
- ಫಲಿತಾಂಶಗಳನ್ನು ಕಾರ್ಯಕ್ರಮ ವಿನ್ಯಾಸ ಮತ್ತು ಅನುಷ್ಠಾನಕ್ಕೆ ಬಳಸುವುದು.
- ಯೋಜನೆಯ ಅವಧಿಯನ್ನು ಮೀರಿದ ನಂತರವೂ ಒಂದು ಕಾರ್ಯಕ್ರಮವನ್ನು ಮುಂದುವರೆಸಲು ಸಮರ್ಥನೆಯನ್ನು ಒದಗಿಸುವುದು.

ಈ ಹಿಂದೆ ಯೋಜನಾ ಇಲಾಖೆಯ ಮೌಲ್ಯಮಾಪನ ವಿಭಾಗವು ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನವನ್ನು ನೋಡಿಕೊಳ್ಳುತ್ತಿತ್ತು. ಯೋಜನೆಗಳು/ಕಾರ್ಯಕ್ರಮಗಳ ಸ್ವತಂತ್ರ ಮೌಲ್ಯಮಾಪನ ವ್ಯವಸ್ಥೆಯ ಅಗತ್ಯತೆಯನ್ನು ಮನಗಂಡ ಸರ್ಕಾರವು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಪಿಡಿ/8/ಇವಿಎನ್ (2)/2011 ಜುಲೈ 11, 2011 ರನ್ವಯ ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಅಡಿಯಲ್ಲಿ ನೋಂದಣಿ ಸಂಖ್ಯೆ: ಡಿಆರ್‌ಬಿ–ಸಿ/ಎಸ್‌ಒಆರ್/140/2011–12, ದಿನಾಂಕ: ಸೆಪ್ಟೆಂಬರ್ 19, 2011 ರನ್ವಯ ಒಂದು ಸಂಘವಾಗಿ ನೋಂದಾಯಿಸಲಾಗಿರುತ್ತದೆ. ಈ ಪ್ರಾಧಿಕಾರವು ಯೋಜನೆ, ಕಾರ್ಯಕ್ರಮ

ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಪರಿಣಾಮ ಕೇಂದ್ರೀಕೃತ ಹಾಗೂ ಫಲಿತಾಂಶ ಆಧಾರಿತ ಅನುಷ್ಠಾನಕ್ಕಾಗಿ ನೀತಿಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳ ಪರಿಣಾಮಕಾರಿ ಯೋಜನೆ, ಸಂಯೋಜನೆ ಮತ್ತು ಉತ್ತಮಗೊಳಿಸುವಿಕೆಯ ಜೊತೆ ಮೇಲ್ವಿಚಾರಣೆ, ಸುಗಮಗೊಳಿಸುವಿಕೆ ಹಾಗೂ ಸಾಮರ್ಥ್ಯ ನಿರ್ಮಾಣದಿಂದ ಎಲ್ಲಾ ಇಲಾಖೆಗಳೊಂದಿಗೆ ಕೈಜೋಡಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಸ್ಥಾಪಿಸಲಾಗಿರುತ್ತದೆ.

# 2. ದೂರ ದೃಷ್ಟಿಯ ಅಭಿಯಾನ– ಉದ್ದೇಶಗಳು ಮತ್ತು ಚಟುವಟಿಕೆಗಳು

## ದೂರ ದೃಷ್ಟಿ

2011ರ ಕರ್ನಾಟಕ ಮೌಲ್ಯಮಾಪನ ನೀತಿಯ ದೃಷ್ಟಿಕೋನವು, ಸರ್ಕಾರದ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳ ಪಾರದರ್ಶಕ, ಪರಿಣಾಮಕಾರಿ ಮತ್ತು ದಕ್ಷ ಮೌಲ್ಯಮಾಪನವನ್ನು ಕೈಗೊಳ್ಳುವುದಾಗಿದ್ದು, ಘಟನೆಗಳ ಸ್ಥಿತಿಯನ್ನು ಮಾನದಂಡವಾಗಿರಿಸಲು, ಅದರ ಸಾರ್ವಜನಿಕ ನೀತಿಗಳನ್ನು ಪರಿಷ್ಕರಿಸಲು ಮತ್ತು ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ವಿನ್ಯಾಸಗೊಳಿಸಲು ಉದ್ದೇಶಿತ ಮತ್ತು ಅಳೆಯಬಹುದಾದ ಫಲಿತಾಂಶಗಳು ಮತ್ತು ನಾಗರಿಕರ ತೃಪ್ತಿಯನ್ನು ಗರಿಷ್ಠಗೊಳಿಸಲು ಸಂಪನ್ಮೂಲಗಳ ವಿವೇಕಯುತ ಮತ್ತು ಸೂಕ್ತ ಬಳಕೆಯ ಒಂದು ಸಾಧನವಾಗಿರುತ್ತದೆ.

## ಮೌಲ್ಯಮಾಪನದ ಅಭಿಯಾನ

ನಿಗದಿತ ದೂರದೃಷ್ಟಿಯನ್ನು ಸಾಧಿಸಲು ಮೌಲ್ಯಮಾಪನದ ತತ್ವಗಳು ಮತ್ತು ಉದ್ದೇಶಗಳಾಗಿ ಈ ಕೆಳಗಿನವುಗಳನ್ನು ರೂಪಿಸಲಾಗಿರುತ್ತದೆ:

- ನೀತಿ ಮತ್ತು ಕಾರ್ಯಕ್ರಮಗಳ ರೂಪಿಸುವಿಕೆ, ಸಂಯೋಜನೆ, ಮೌಲ್ಯಮಾಪನ ಮತ್ತು ಪರಿಷ್ಕರಣೆಯ ಮಾನದಂಡಗಳನ್ನು ಸೂಚಿಸುವುದು.
- ಸಮಯೋಚಿತ, ಉಪಯುಕ್ತ ಮತ್ತು ಜವಾಬ್ದಾರಿಯುತ ಮೌಲ್ಯಮಾಪನವನ್ನು ಸುಲಭಗೊಳಿಸಲು, ಮೇಲ್ವಿಚಾರಣೆ ಮಾಡಲು ಮತ್ತು ಜಾರಿಗೊಳಿಸಲು ಸಾಕಷ್ಟು ಹಣಕಾಸು ಸಂಪನ್ಮೂಲಗಳು ಮತ್ತು ಸೂಕ್ತ ಕಾರ್ಯವಿಧಾನಗಳಿಂದ ಬೆಂಬಲಿತವಾದ ಸಶಕ್ತ ಸಾಧನಗಳನ್ನು ಸಾಂಸ್ಥಿಕಗೊಳಿಸುವುದು.
- ವಿವೇಕಯುತ ನಿರ್ಧಾರ ತೆಗೆದುಕೊಳ್ಳಲು ಮೌಲ್ಯಮಾಪನದ ಫಲಿತಾಂಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸರ್ಕಾರದ ಇಲಾಖೆಗಳೊಳಗೆ ಮತ್ತು ಸ್ವತಂತ್ರ ಮೌಲ್ಯಮಾಪನ ಸಂಸ್ಥೆಗಳ ತಾಂತ್ರಿಕ ಸಾಮರ್ಥ್ಯಗಳನ್ನು ಹೆಚ್ಚಿಸುವುದು.
- ಭಾಗವಹಿಸುವಿಕೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಮೂಲಕ ಮಧ್ಯಸ್ಥಗಾರರ ತೃಪ್ತಿಯನ್ನು ವರ್ಧಿಸುವುದು.

## ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯಚಟುವಟಿಕೆಗಳು:

ಎ) ನೀತಿಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಯೋಜಿಸಿ, ಸಂಯೋಜಿಸಿ ಹಾಗು ಉತ್ತಮಗೊಳಿಸಿ ತನ್ಮೂಲಕ ಇಲಾಖೆಗಳ ಮೇಲ್ವಿಚಾರಣೆ, ಸಾಮರ್ಥ್ಯ ವರ್ಧನೆಗೆ ಕೈ ಜೋಡಿಸುವುದು.

ಬಿ) ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣವಾಗಿ ಯೋಜನೆಯನ್ನು ರೂಪಿಸುವ, ಮೇಲ್ವಿಚಾರಣೆ ಮಾಡುವ ಹಾಗು ಮೌಲ್ಯಮಾಪನ ಕೈಗೊಳ್ಳುವ ಗುರಿಗಳನ್ನು ಸಾಧಿಸಲು ತರಬೇತಿ, ಸಮಾಲೋಚನೆ ಹಾಗು ಬೆಂಬಲ ಚಟುವಟಿಕೆಗಳನ್ನು ಕೈಗೊಳ್ಳುವುದು.

ಸಿ) ಮೌಲ್ಯಮಾಪನ ಅಧ್ಯಯನಗಳ ಎಲ್ಲಾ ಉಲ್ಲೇಖ ನಿಯಮಗಳು, ದತ್ತಾಂಶ ಸಂಗ್ರಹ ಸಾಧನಗಳು, ಮೌಲ್ಯಮಾಪನ ವರದಿಗಳ ದಾಖಲೆಗಳನ್ನು ಇಡುವುದು, ಮೌಲ್ಯಮಾಪನ ಅಧ್ಯಯನಗಳ ಶೋಧನೆಗಳನ್ನು ಪ್ರಸಾರ ಮಾಡುವುದು ಹಾಗೂ

ಮೌಲ್ಯಮಾಪನ ಉತ್ಪತ್ತಿಯ ಬಳಕೆಯನ್ನು ಅನುಸರಿಸುವುದು.

ಡಿ) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರತಿವರ್ಷವೂ ಸರ್ಕಾರಿ ಯೋಜನೆಗಳ/ಕಾರ್ಯಕ್ರಮಗಳ ಕನಿಷ್ಠ 20ರಿಂದ 30 ಪ್ರಮುಖ ಮೌಲ್ಯಮಾಪನಗಳನ್ನು ಕೈಗೊಳ್ಳುವ ಗುರಿಯನ್ನು ಹೊಂದಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ವಾರ್ಷಿಕ ಆಯವ್ಯಯ ರೂ. 10 ಕೋಟಿಗಳನ್ನು ಮೀರಿದ ಪ್ರಮುಖ ಯೋಜನೆಗಳ ಮೌಲ್ಯಮಾಪನವನ್ನು ಕೈಗೊಳ್ಳುತ್ತದೆ. ಇದು ನೀತಿ ನಿರೂಪಣೆಗಾಗಿ ಸಂಶೋಧನಾ ಅಧ್ಯಯನಗಳನ್ನು ಸಹ ಕೈಗೊಳ್ಳುತ್ತದೆ.

# 3. ಸಾಂಸ್ಥಿಕ ನಕ್ಷೆ ಮತ್ತು ಮಾನವ ಸಂಪನ್ಮೂಲ

## ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ರಚನೆ

ಸಾಂಸ್ಥಿಕ ದಕ್ಷತೆಯನ್ನು ಹೆಚ್ಚಿಸಲು ಮತ್ತು ಅದರ ಅಸ್ತಿತ್ವವನ್ನು ಬಿಂಬಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಇತ್ತೀಚೆಗೆ ಅನೇಕ ರಚನಾತ್ಮಕ ಸುಧಾರಣೆಗಳನ್ನು ಪರಿಚಯಿಸಿರುತ್ತದೆ.

## ವಿಭಾಗಗಳು

ಸರ್ಕಾರಗಳ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಪಾರದರ್ಶಕವಾಗಿ ಮತ್ತು ಪರಿಣಾಮಕಾರಿಯಾಗಿ ಮತ್ತು ದಕ್ಷತೆಯಿಂದ ಜಾರಿಗೆ ತರುವುದು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಗುರಿಯಾಗಿರುತ್ತದೆ. ಗುಣಮಟ್ಟದ ಫಲಿತಾಂಶಗಳನ್ನು ಖಚಿತಪಡಿಸಿಕೊಳ್ಳಲು, ಈ ಪ್ರಾಧಿಕಾರವು ನಿರ್ವಹಿಸುವ ಕಾರ್ಯಾಚರಣೆಯ ವಿವಿಧ ಕ್ಷೇತ್ರಗಳತ್ತ ಗಮನಹರಿಸುವ ಅವಶ್ಯಕತೆಯಿರುತ್ತದೆ. ಪ್ರಾಧಿಕಾರದ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ, ಈ ಕೆಳಗಿನ ವಿಭಾಗಗಳನ್ನು ರಚಿಸಬೇಕಾಗಿರುತ್ತದೆ:

1. ಮೌಲ್ಯಮಾಪನ ವಿಭಾಗ

2. ಸಂಗ್ರಹಣೆ ಮತ್ತು ಸಮನ್ವಯ ವಿಭಾಗ
3. ಪ್ರಕಟಣೆ ಮತ್ತು ವಿಸ್ತರಣೆ ವಿಭಾಗ
4. ಸಾಂಖ್ಯಿಕ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗ

ಮೌಲ್ಯಮಾಪನ ವಿಭಾಗವು ಪ್ರಾಥಮಿಕವಾಗಿ ಮೌಲ್ಯಮಾಪನಕ್ಕಾಗಿ ಯೋಜನೆಗಳನ್ನು ಗುರುತಿಸುತ್ತದೆ, ಅವುಗಳನ್ನು ಅನುಮೋದನೆಗಾಗಿ ಆಡಳಿತ ಮಂಡಳಿಯ ಮುಂದೆ ಮಂಡಿಸುತ್ತದೆ, ಸಂಬಂಧಿಸಿದ ಇಲಾಖೆಯಿಂದ ಪರಿಕಲ್ಪನಾ ಟಿಪ್ಪಣಿಯನ್ನು ಪಡೆಯುತ್ತದೆ, ಯೋಜನೆ ಅನುಷ್ಠಾನಗಳ ನೋಡಲ್ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಉಲ್ಲೇಖ ನಿಯಮಗಳನ್ನು ಸಿದ್ಧಪಡಿಸುತ್ತದೆ ಮತ್ತು ತಾಂತ್ರಿಕ ಸಮಿತಿಯಿಂದ ಅನುಮೋದನೆ ಪಡೆಯುವುದಲ್ಲದೇ, ಆಗ್ಗಾಗೆ ಸ್ವೀಕೃತವಾದ ವರದಿಗಳನ್ನು ಪರಿಶೀಲಿಸುತ್ತದೆ.

ಸಂಗ್ರಹಣೆ ಮತ್ತು ಸಮನ್ವಯ ವಿಭಾಗವು ಪ್ರಾಧಿಕಾರದ ಮುಖ್ಯ ಮೌಲ್ಯಮಾಪನಾಧಿಕಾರಿಯವರು ನಿಗದಿಪಡಿಸಿದಂತೆ ಸರಕು ಮತ್ತು ಸೇವೆಗಳನ್ನು ಸಂಗ್ರಹಿಸಲು ಹಾಗೂ ಮೌಲ್ಯಮಾಪನ ವರದಿಗಳ ಸಲ್ಲಿಕೆಯಲ್ಲಿ ಸಂಬಂಧಿಸಿದ ಕ್ಷೇತ್ರ ಇಲಾಖೆಗಳೊಂದಿಗೆ ಮತ್ತು ಮಾನ್ಯತೆ ಪಡೆದ ಸಮಾಲೋಚಕ ಸಂಸ್ಥೆಗಳೊಂದಿಗೆ ಸಮನ್ವಯಿಸಲು ಪ್ರಸ್ತಾವನೆಗಳ ವಿನಂತಿ/ಅಧಿಸೂಚನೆಗಳನ್ನು ಪ್ರಕಟಿಸುತ್ತದೆ.

ಪ್ರಕಟಣೆ ಮತ್ತು ವಿಸ್ತರಣೆ ವಿಭಾಗವು ವಿವಿಧ ಹಂತಗಳಲ್ಲಿ ಮೌಲ್ಯಮಾಪನ ವರದಿಗಳಲ್ಲಿನ ನ್ಯೂನ್ಯತೆಗಳನ್ನು ಗುರುತಿಸಲು ಹೊಂದಿಕೆಯಾಗದಿರುವ ಅಂಶಗಳನ್ನು, ಕೃತಿಚೌರ್ಯವನ್ನು ಕಂಡುಹಿಡಿಯಲು, ಕಾಗುಣಿತ, ವ್ಯಾಕರಣ ಪರಿಶೀಲನೆ, ಪುರಾವೆ ಓದುವಿಕೆ, ಸಂಕಲನ, ಈ ಎಲ್ಲಾ ಅಂಶಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ. ವಿಭಿನ್ನ ಮಧ್ಯಸ್ಥಗಾರರ ಸಾಮರ್ಥ್ಯ ವೃದ್ಧಿಗೆ ತರಬೇತಿ ನೀಡುವುದು ಮತ್ತು ಅನುವಾದ ಮತ್ತು ಸಂಬಂಧಿತ ಇತರ ಕೆಲಸಗಳನ್ನು ನಿರ್ವಹಿಸುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳನ್ನು ಪ್ರಸಾರ ಮಾಡಲು ಕರಪತ್ರಗಳು, ಕೈಪಿಡಿಗಳು, ಸುದ್ದಿ ಪತ್ರಗಳು, ಕಿರು ಹೊತ್ತಿಗೆಗಳನ್ನು ಹೊರತರುವ ಉದ್ದೇಶವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಹೊಂದಿರುತ್ತದೆ.

ಸಾಂಖ್ಯಿಕ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗವು ಸಮಾಲೋಚಕ ಸಂಸ್ಥೆಗಳು ಸಂಗ್ರಹಿಸಿದ ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳನ್ನು ಪರಿಶೀಲಿಸಿ, ವಿಶ್ಲೇಷಿಸಿ ಮತ್ತು ವಿಮರ್ಶಿಸುತ್ತದೆ, ತಂತ್ರಜ್ಞಾನದ ಆಯ್ಕೆಗಳನ್ನು ಅನ್ವೇಷಿಸಿ, ದತ್ತಾಂಶಗಳ ವಿಶ್ಲೇಷಣೆ, ಜಾಲತಾಣದ ಪೋರ್ಟಲ್, ಮೊಬೈಲ್ ಅಪ್ಲಿಕೇಷನ್ ಇತ್ಯಾದಿಗಳನ್ನು ನಿರ್ವಹಿಸುತ್ತದೆ ಹಾಗೂ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಲ್ಲಾ

ಸಂಬಂಧಿತ ದತ್ತಾಂಶ ಮತ್ತು ಮೌಲ್ಯಮಾಪನ ವರದಿಗಳನ್ನು ಪ್ರಾಧಿಕಾರದ ಜಾಲತಾಣಕ್ಕೆ ಅಪ್‌ಲೋಡ್ ಮಾಡುತ್ತದೆ.


ಅರ್ಹ ಸಿಬ್ಬಂದಿಯನ್ನು ನೇಮಿಸುವ ಮೂಲಕ ಈ ವಿಭಾಗಗಳ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಲಾಗಿರುತ್ತದೆ. ಜಾಹೀರಾತು ಮತ್ತು ಆಯ್ಕೆ ಪ್ರಕ್ರಿಯೆಯ ಮೂಲಕ 2020 ರ ಜನವರಿಯಲ್ಲಿ ಈ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಲು 6 ಸಂಶೋಧನಾ ಸಹೋದ್ಯೋಗಿಗಳು ಮತ್ತು ಒಬ್ಬ ಸಹಾಯಕ ನಿರ್ದೇಶಕರನ್ನು ಆಯ್ಕೆ ಮಾಡಲಾಗಿರುತ್ತದೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನಾ ಸಂಸ್ಥೆಯ ಡಾ.ಎ.ವಿ.ಮಂಜುನಾಥ್ ಅವರನ್ನು ನಿರ್ದೇಶಕ(ಮೌಲ್ಯಮಾಪನ)ರಾಗಿ ನಿಯೋಜನೆಯ ಮೇಲೆ ನಿಯೋಜಿಸಲಾಗಿರುತ್ತದೆ.

## ಮಾನವ ಸಂಪನ್ಮೂಲಗಳು

| ಕ್ರ.ಸಂ. | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ಕರ್ತವ್ಯದಲ್ಲಿರುವವರು | ಖಾಲಿ |
|---|---|---|---|---|
| 1 | ಮುಖ್ಯ ಮೌಲ್ಯಮಾಪನಾಧಿಕಾರಿ | 1 | 1 | 0 |
| 2 | ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ | 1 | 1 | 0 |

| | | | | |
|---|---|---|---|---|
| 3 | ನಿರ್ದೇಶಕರು–ಮೌಲ್ಯಮಾಪನ | 5 | 2 | 3 |
| 4 | ಸಹ ನಿರ್ದೇಶಕರು | 5 | 2 | 3 |
| 5 | ಸಂಶೋಧನಾ ಸಹೋದ್ಯೋಗಿಗಳು | 10 | 6 | 4 |
| 6 | ವೆಬ್ ಮತ್ತು ಮಾಹಿತಿ ನಿರ್ವಹಣಾ ವ್ಯವಸ್ಥಾಪಕ | 1 | 1 | 0 |
| 7 | ಆಡಳಿತಾಧಿಕಾರಿ | 1 | 0 | 1 |
| 8 | ಲೆಕ್ಕಾಧಿಕಾರಿ | 1 | 1 | 0 |
| 9 | ಕಚೇರಿ ಸಹಾಯಕರು | 5 | 4 | 1 |
| 10 | ಆಪ್ತ ಕಾರ್ಯದರ್ಶಿ | 2 | 2 | 0 |
| 11 | ಡಿಟಿಪಿ ಆಪರೇಟರ್ | 1 | 1 | 0 |
| 12 | ವಾಹನ ಚಾಲಕರು | 2 | 1 | 1 |
| 13 | ಅಟೆಂಡರ್‌ಗಳು | 5 | 5 | 0 |
| | **ಒಟ್ಟು** | **40** | **27** | **13** |

# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಂಘಟನಾ ನಕ್ಷೆ



# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ

## ಚಟುವಟಿಕೆಗಳ ಅವಲೋಕನ 2019–20

## ಘಟನೆಗಳ ಕ್ಯಾಲೆಂಡರ್ 2019–20

| ಕ್ರ. ಸಂ. | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳು | ತಿಂಗಳುಗಳು (ಏಪ್ರಿಲ್ 19– ಮಾರ್ಚ್ 20) | | | | | | | | | | | |
|---|---|---|---|---|---|---|---|---|---|---|---|---|---|
| | | 4 | 5 | 6 | 7 | 8 | 9 | 10 | 11 | 12 | 1 | 2 | 3 |
| 1 | ಇಲಾಖೆಗಳಿಂದ ಪ್ರಸ್ತಾವನೆಗಳನ್ನು ಪಡೆಯುವುದು | | | | | | | | | | | | |
| 2 | ಶಾಸನಬದ್ಧ ಲೆಕ್ಕ ಪರಿಶೋಧನೆ | | | | | | | | | | | | |
| 3 | ಆಡಳಿತ ಮಂಡಳಿ ಸಭೆ | | | | | | | | | | | | |
| 4 | ತಾಂತ್ರಿಕ ಸಮಿತಿ ಸಭೆ | | | | | | | | | | | | |
| 5 | ಎಂಪನೆಲ್‌ಮೆಂಟ್ ಸಮಿತಿ ಸಭೆ | | | | | | | | | | | | |
| 6 | ಉಲ್ಲೇಖ ನಿಯಮಗಳನ್ನು ಸಿದ್ಧಪಡಿಸುವುದು | | | | | | | | | | | | |
| 7 | ಸಾಮಾನ್ಯ ಮಂಡಳಿ ಸಭೆ | | | | | | | | | | | | |
| 8 | ತರಬೇತಿ ಮತ್ತು ಕಾರ್ಯಾಗಾರ | | | | | | | | | | | | |
| 9 | ಪ್ರಸ್ತಾವನೆಗಾಗಿ ವಿನಂತಿಯನ್ನು ಆಹ್ವಾನಿಸುವುದು, ಟೆಂಡರ್ ದಾಖಲೆಗಳನ್ನು ಮೌಲ್ಯಮಾಪನ ಮಾಡುವುದು | | | | | | | | | | | | |
| 10 | ಸಿಬ್ಬಂದಿಗಳನ್ನು ಮತ್ತು ಕಲಿಕಾ ಸಿಬ್ಬಂದಿ ಮತ್ತು ಇಂಟರ್ನ್‌ಶಿಪ್ ನೇಮಿಸಿಕೊಳ್ಳಲು ಜಾಹೀರಾತು ನೀಡುವುದು | | | | | | | | | | | | |
| 11 | ಪ್ರಾರಂಭಿಕ ವರದಿ, ಕ್ಷೇತ್ರ ಭೇಟಿಗಳು, ಕರಡು ಮೌಲ್ಯಮಾಪನ ವರದಿ, ಅಂತಿಮ ವರದಿಗಳ ಕುರಿತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಕಾರ್ಯನಿರ್ವಹಣೆ ಮೇಲೆ ಮಾಸಿಕ ಮೇಲ್ವಿಚಾರಣೆ ಮಾಡುವುದು | | | | | | | | | | | | |

# 4. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳ ಅವಲೋಕನ 2019–20

| ಸಭೆಗಳ ಹೆಸರು | ಸಭೆಯು ಜರುಗಿದ ದಿನಾಂಕ |
|---|---|
| ವಿಶೇಷ ಸಾಮಾನ್ಯ ಮಂಡಳಿ | 05–02–2020 |
| 6 ನೇ ಸಾಮಾನ್ಯ ಮಂಡಳಿ | 05–02–2020 |
| | |
| 18 ನೇ ಆಡಳಿತ ಮಂಡಳಿ | 16–05–2019 |
| 19 ನೇ ಆಡಳಿತ ಮಂಡಳಿ | 03–08–2019 |
| 20 ನೇ ಆಡಳಿತ ಮಂಡಳಿ | 03–12–2019 |
| 21 ನೇ ಆಡಳಿತ ಮಂಡಳಿ | ಏಪ್ರಿಲ್ 2020 |
| | |
| 43 ನೇ ತಾಂತ್ರಿಕ ಸಮಿತಿ | 12/04/2019 |
| 44 ನೇ ತಾಂತ್ರಿಕ ಸಮಿತಿ | 17/07/2019 |
| 45 ನೇ ತಾಂತ್ರಿಕ ಸಮಿತಿ | 10/10/2019 |
| 46 ನೇ ತಾಂತ್ರಿಕ ಸಮಿತಿ | 20/02/2020 |
| 47 ನೇ ತಾಂತ್ರಿಕ ಸಮಿತಿ | 02/04/2020 |

ಪ್ರಮುಖ ಸಭೆಗಳು ಮತ್ತು ತೀರ್ಮಾನಗಳು

2020ರ ಫೆಬ್ರವರಿ–5 ರಂದು ಜರುಗಿದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯ 6ನೇ ಸಭೆ

I. ಸಾಮಾನ್ಯ ಮಂಡಳಿಯ 5ನೇ ಸಭೆಯ ನಡವಳಿಗಳ ದೃಢೀಕರಣ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವಾರ್ಷಿಕ ವರದಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ 18ನೇ ಸಭೆಯಲ್ಲಿ ಅಂಗೀಕರಿಸಲ್ಪಟ್ಟ, 2018–19ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭಿಸಿದ ಚಟುವಟಿಕೆಗಳನ್ನು ಒಳಗೊಂಡಿರುವ ವಾರ್ಷಿಕ ವರದಿಯನ್ನು ಸಾಮಾನ್ಯ ಮಂಡಳಿಯ ಮುಂದೆ ಮಂಡಿಸಲಾಯಿತು. ಹೊಸ ಉಪಕ್ರಮಗಳತ್ತ ಗಮನ ಹರಿಸಲಾಗಿರುತ್ತದೆ.

ಹೊಸ ಉಪಕ್ರಮಗಳು

- ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮ. ಈ ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕೆ 16 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, 5 ವಿದ್ಯಾರ್ಥಿಗಳು ಯೋಜನೆಯ ವರದಿಯನ್ನು

ಪೂರ್ಣಗೊಳಿಸಿ ಸಲ್ಲಿಸಿದ್ದಾರೆ. 3 ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಪೂರ್ಣಗೊಂಡ ಪ್ರಮಾಣಪತ್ರ ನೀಡಲಾಗಿರುತ್ತದೆ.

- ರಾಜ್ಯದ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನೆ ಮತ್ತು ಮೌಲ್ಯಮಾಪನ–ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ

ಮಾರ್ಗಸೂಚಿಗಳನ್ನು ತಯಾರಿಸಲಾಗುತ್ತದೆ ಮತ್ತು ಕೆಳಗೆ ನಮೂದಿಸಲಾದ ವಿಶ್ವವಿದ್ಯಾಲಯಗಳೊಂದಿಗೆ 3 ಅಧ್ಯಯನಗಳನ್ನು ಪ್ರಾರಂಭಿಸಲಾಗುತ್ತದೆ:

1. ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ
2. ಹಾಸ್ ಸ್ಕೂಲ್ ಆಫ್ ಬ್ಯುಸಿನೆಸ್, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿ
3. ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಬದಲಾವಣೆಗಳನ್ನು ಕಲ್ಪಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕೈಪಿಡಿಗಳ ಪರಿಷ್ಕರಣೆ. ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಗಿರುತ್ತದೆ:

| ಕ್ರ. ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಅಧ್ಯಕ್ಷರು |
| 2 | ಅಪರ ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರಿಂದ ನಾಮನಿರ್ದೇಶಿತರು | ಸದಸ್ಯರು |
| 4 | ಸರ್ಕಾರದ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರಿಂದ ನಾಮನಿರ್ದೇಶಿತರು | ಸದಸ್ಯರು |
| 5 | ಸರ್ಕಾರದ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಇವರಿಂದ ನಾಮನಿರ್ದೇಶಿತರು | ಸದಸ್ಯರು |
| 6 | ಸರ್ಕಾರದ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆ ಇವರಿಂದ ನಾಮನಿರ್ದೇಶಿತರು | ಸದಸ್ಯರು |

| | | |
|---|---|---|
| 7 | ಆಡಳಿತಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿ |
| 8 | ವಿಷಯ ತಜ್ಞರು | ಸದಸ್ಯರು |

ಕೆಳಗಿನವುಗಳ ಕುರಿತು ನೀತಿ ಒಳಹರಿವು ನೀಡಲು ತಜ್ಞರ ಉಪ ಸಮಿತಿಗಳು:

- ರಾಜ್ಯದ ಒಟ್ಟು ಆಂತರಿಕ ಉತ್ಪನ್ನ, ಶಿಕ್ಷಣ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಕರ್ನಾಟಕದ ನೆಮ್ಮದಿ ಸೂಚ್ಯಂಕದ ಅಂದಾಜು.
- ಅಪರ ಮುಖ್ಯ ಮೌಲ್ಯಮಾಪನಾಧಿಕಾರಿಗಳು, ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಂಶೋಧನಾ ಸಹೋದ್ಯೋಗಿಗಳು ಇವರನ್ನು ನೇಮಕ ಮಾಡುವ ಮೂಲಕ ಸಾಕಷ್ಟು ಮಾನವ ಸಂಪನ್ಮೂಲ ಆಧಾರದೊಂದಿಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಬಲಪಡಿಸುವುದು.
- ವಿಶೇಷ ಅಭಿವೃದ್ಧಿ ಗುರಿಗಳ ರಾಜ್ಯ ವರದಿ, ಮಹತ್ವಾಕಾಂಕ್ಷೆಯ ಜಿಲ್ಲಾ ಕಾರ್ಯಕ್ರಮ ಮತ್ತು ನೀತಿ ಆಯೋಗ ಮತ್ತು ದತ್ತಾಂಶ ವಿಶ್ಲೇಷಣೆಯ ಹೊಸ ಉಪಕ್ರಮಗಳನ್ನು ತಯಾರಿಸಲು ಯೋಜನಾ ಇಲಾಖೆಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಭಾಗವಹಿಸುವಿಕೆ ಮತ್ತು ಬೆಂಬಲ ನೀಡುವುದು.

## II. **2018–19ರ** ಲೆಕ್ಕಪರಿಶೋಧಕರ ವರದಿ

ಸಿಎಜಿಯಿಂದ ಮಾನ್ಯತೆ ಪಡೆದ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯಾದ ಮೆಸರ್ಸ್ ಎಂಕೆಪಿಎಸ್ ಮತ್ತು ಅಸೋಸಿಯೇಟ್ಸ್, ಬೆಂಗಳೂರು ಇವರು ಸಿದ್ಧಪಡಿಸಿದ ಮತ್ತು ಲೆಕ್ಕಪರಿಶೋಧನೆ ಮಾಡಿದ 2018–19ರ ಹಣಕಾಸು ವರ್ಷದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಮಂಡಳಿಯ ಮುಂದೆ ಮಂಡಿಸಲಾಯಿತು. ಆಡಳಿತ ಮಂಡಳಿಯು ತನ್ನ 18ನೇ ಸಭೆಯಲ್ಲಿ 2018–19ನೇ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಅನುಮೋದಿಸಿದೆ ಎಂದು ತಿಳಿಸಲಾಯಿತು. ಸಾಮಾನ್ಯ ಮಂಡಳಿಯು ಈ ಲೆಕ್ಕಪರಿಶೋಧನೆ ವರದಿಯನ್ನು ಪರಿಶೀಲಿಸಿ ಅನುಮೋದಿಸಿರುತ್ತದೆ.

## III. **2020–21ರ** ಆಯವ್ಯಯ ಅಂದಾಜು

2020–21ರ ಹಣಕಾಸು ವರ್ಷದ ಆಯವ್ಯಯ ಅಂದಾಜುಗಳನ್ನು ಸಾಮಾನ್ಯ ಮಂಡಳಿಯ ಮುಂದೆ ಮಂಡಿಸಲಾಯಿತು. ಚರ್ಚೆಯ ನಂತರ, ಸಾಮಾನ್ಯ ಮಂಡಳಿಯು 2020–21ರ ಹಣಕಾಸು

ವರ್ಷದ ಒಟ್ಟು ಆಯವ್ಯಯ ಅಂದಾಜನ್ನು ಗಮನಿಸಿ ರೂ. 2661.66304 ಲಕ್ಷಗಳನ್ನು ಅನುಮೋದಿಸಿರುತ್ತದೆ.

IV. ಮೌಲ್ಯಮಾಪನ ಅಧ್ಯಯನಗಳ ಮೇಲಿನ ವರದಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಾರಂಭವಾದಾಗಿನಿಂದ ಇದುವರೆಗೆ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಮೂಲಕ 137 ಮೌಲ್ಯಮಾಪನ ಅಧ್ಯಯನಗಳನ್ನು ನಡೆಸಿರುತ್ತದೆ. ಈ ಅಧ್ಯಯನಗಳು ಮಹಿಳೆಯರ ಸಮಸ್ಯೆಗಳು, ಕೃಷಿ, ಜೀವನೋಪಾಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಕೇಂದ್ರೀಕರಿಸಿರುತ್ತವೆ. ಇತ್ತೀಚಿನ ವರ್ಷಗಳಲ್ಲಿ ಮಾನವ ಅಭಿವೃದ್ಧಿಯನ್ನು ಉತ್ತೇಜಿಸುವ ಯೋಜನೆಗಳ ಮೌಲ್ಯಮಾಪನದ ಮೇಲೆ ಗಮನ ಕೇಂದ್ರೀಕರಿಸಲಾಗಿದೆ.

2019–20ರ ಅವಧಿಯಲ್ಲಿನ ಅಧ್ಯಯನಗಳ ವಿವರಗಳು ಹೀಗಿವೆ:

| ಮೌಲ್ಯಮಾಪನ ಅಧ್ಯಯನಗಳು | |
|---|---|
| ಸಂಪೂರ್ಣಗೊಂಡಿರುವ ಅಧ್ಯಯನಗಳು | 18 |
| ನಡೆಯುತ್ತಿರುವ ಅಧ್ಯಯನಗಳು | 64 |
| ಪ್ರಾರಂಭಿಸಿರುವ ಅಧ್ಯಯನಗಳು | 38 |

ಇಲಾಖೆಯಿಂದ ದತ್ತಾಂಶವನ್ನು ನೀಡಲು ವಿಳಂಬವಾಗಿದ್ದರಿಂದ ನಿಗದಿತ ಸಮಯಕ್ಕೆ ಮೌಲ್ಯಮಾಪನ ಅಧ್ಯಯನಗಳನ್ನು ಪೂರ್ಣಗೊಳಿಸಲು ವಿಳಂಬವಾಗಿದೆ ಎಂದು ಸಾಮಾನ್ಯ ಮಂಡಳಿಯ ಮುಂದೆ ಮಂಡಿಸಲಾಗಿರುತ್ತದೆ.

ಸಾಮಾನ್ಯ ಮಂಡಳಿಯು ಮೇಲ್ಕಂಡಂತೆ ಪ್ರಗತಿಯಲ್ಲಿರುವ ಅಧ್ಯಯನಗಳನ್ನು ಗಮನಿಸಿದ್ದು, ಮೌಲ್ಯಮಾಪನಗಳನ್ನು ಕೈಗೊಳ್ಳುವಲ್ಲಿ ರಾಜ್ಯ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಸಹಯೋಗವನ್ನು ಶ್ಲಾಘಿಸಿರುತ್ತದೆ.

ಸಂಬಂಧಿಸಿದ ಇಲಾಖೆಯಿಂದ ದತ್ತಾಂಶವನ್ನು ನೀಡಲು ವಿಳಂಬವಾದ ಕಾರಣ 12 ಅಧ್ಯಯನಗಳು ವಿಳಂಬವಾಗಿರುವುದನ್ನು ಗಮನಿಸಲಾಗಿರುತ್ತದೆ. ಸರಾಸರಿ 6 ತಿಂಗಳೊಳಗೆ ವರದಿಗಳನ್ನು ಅಂತಿಮಗೊಳಿಸಬೇಕಾಗಿದ್ದು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯಮಾಪನ ಅಧಿಕಾರಿಯವರು ನಡೆಸಿದ ಪತ್ರ ವ್ಯವಹಾರಗಳ ಹೊರತಾಗಿಯೂ, ಮತ್ತು ಕೆಡಿಪಿ ಸಭೆಗಳಲ್ಲಿ ವಿಮರ್ಶೆ ಮಾಡಿದ್ದರೂ ಸಹಾ ಸಂಬಂಧಿಸಿದ ಇಲಾಖೆಗಳಿಂದ ದತ್ತಾಂಶವನ್ನು ಪಡೆಯಲು ಅಧ್ಯಯನ ಅವಧಿಯ ಶೇ.50 ರಷ್ಟು ಸಮಯ ವೆಚ್ಚ ಮಾಡಲಾಗಿದೆ.

ಆದ್ದರಿಂದ, ಅಧ್ಯಯನಕ್ಕೆ ಪ್ರಸ್ತಾವನೆಯನ್ನು ನೀಡುವ ಸಮಯದಲ್ಲಿ ದತ್ತಾಂಶವನ್ನು ನೀಡಲು ಮತ್ತು ಸ್ಥಳೀಯ ಮಟ್ಟದಲ್ಲಿ ಕ್ಷೇತ್ರಕಾರ್ಯಕ್ಕೆ ಅಗತ್ಯವಾದ ಬೆಂಬಲವನ್ನು ನೀಡಲು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರಿಂದ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಲು ತೀರ್ಮಾನಿಸಲಾಯಿತು. ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ದತ್ತಾಂಶವನ್ನು ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮಕ್ಕೆ (KODI)ನೀಡುವಂತೆ ಇಲಾಖೆಗಳಿಗೆ ಸೂಚನೆ ನೀಡಬೇಕೆಂದು ಮತ್ತು ಇದನ್ನು ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮದಿಂದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪಡೆಯಬೇಕೆಂದು ಸೂಚಿಸಿರುತ್ತಾರೆ.

V. ಮೌಲ್ಯಮಾಪನ ವರದಿಗಳ ಬಗ್ಗೆ ಕ್ರಮ ಕೈಗೊಂಡ ವರದಿಗಳು

ದಿನಾಂಕ: 03–08–2019ರಂದು ಜರುಗಿದ 19ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದ ಪ್ರಕಾರ, ಮೌಲ್ಯಮಾಪನ ಅಧ್ಯಯನಗಳ ಕುರಿತು ಕ್ರಮ ಕೈಗೊಂಡ ವರದಿಗಳನ್ನು ಪರಿಶೀಲಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ. ಪಿಡಿ 66 ಪಿಎಸ್‌ಡಿ 2019, ದಿನಾಂಕ: 06–09–2019ರನ್ವಯ ರಚಿಸಲಾಗಿರುತ್ತದೆ.

ಈ ಸಮಿತಿಯ ಮೊದಲ ಸಭೆಯು ದಿನಾಂಕ: 13–09–2019 ರಂದು ನಡೆದಿರುತ್ತದೆ ಮತ್ತು ಇಲಾಖೆಗಳಿಂದ ಕೈಗೊಳ್ಳಲಾದ ಕ್ರಮಗಳ ಬಗ್ಗೆ ಈ ಸಭೆಯಲ್ಲಿ ಪರಿಶೀಲಿಸಲಾಯಿತು. 91 ಅಧ್ಯಯನಗಳಿಗೆ ಕ್ರಮ ಕೈಗೊಂಡ ವರದಿಗಳನ್ನು ಸ್ವೀಕರಿಸಲಾಗಿದೆ. ಕ್ರಮ ಕೈಗೊಂಡ ವರದಿಗಳನ್ನು ಸಲ್ಲಿಸದ ಇಲಾಖೆಗಳಿಗೆ ಮೌಲ್ಯಮಾಪನ ಅಧ್ಯಯನಗಳ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಲು ತಿಳಿಸಲಾಗಿದೆ.

*ತೀರ್ಮಾನ*

ಸಾಮಾನ್ಯ ಮಂಡಳಿಯು ಇದನ್ನು ಗಮನಿಸಿದ್ದು, ಕ್ರಮ ಕೈಗೊಂಡ ವರದಿಗಳನ್ನು ತ್ವರಿತವಾಗಿ ಸಲ್ಲಿಸಲು ಇಲಾಖೆಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರಿಂದ ಪತ್ರವನ್ನು ಕಳುಹಿಸಲು ಸೂಚಿಸಿರುತ್ತದೆ.

ವರದಿಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಮತ್ತು ಸುಧಾರಿಸಲು ಹೆಚ್ಚುವರಿ ಮಧ್ಯಸ್ಥಿಕೆಗಳು

ಗುಣಮಟ್ಟದ ವರ್ಧನೆಗಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಿಂದ ಕೈಗೊಂಡ ಹೆಚ್ಚುವರಿ ಮಧ್ಯಸ್ಥಿಕೆಗಳನ್ನು ಸಾಮಾನ್ಯ ಮಂಡಳಿಯ ಮುಂದೆ ಮಂಡಿಸಲಾಗಿರುತ್ತದೆ.

1. ಅಧ್ಯಯನಕ್ಕಾಗಿ ಉತ್ತಮ ಗುಣಮಟ್ಟದ ಸಂಸ್ಥೆಗಳನ್ನು ಪಡೆಯಲು ಪ್ರಸ್ತಾವನೆಗಾಗಿ ವಿನಂತಿಯ ದಾಖಲೆಗಳಲ್ಲಿ ಬದಲಾವಣೆಗಳು.
2. ಅಧ್ಯಯನಗಳ ವಿವಿಧ ಹಂತಗಳಲ್ಲಿ ಮಾರ್ಗದರ್ಶನ ಪಡೆಯಲು ತಜ್ಞರು.
3. ಅಧ್ಯಯನಗಳು ಪ್ರಾರಂಭವಾಗುವ ಮೊದಲು ಮೌಲ್ಯಮಾಪನ ಸಮಾಲೋಚಕ ಸಂಸ್ಥೆ ಮತ್ತು ಇಲಾಖೆಯೊಂದಿಗೆ ಪ್ರಾಥಮಿಕ ಸಭೆಗಳು.
4. ಅಧ್ಯಯನದ ವಿವಿಧ ಹಂತಗಳಲ್ಲಿ ವಿಮರ್ಶೆ ಸಭೆಗಳನ್ನು ಸಮಾಲೋಚಕ ಸಂಸ್ಥೆಗಳು ಮತ್ತು ಸಂಬಂಧಿತ ಇಲಾಖೆಗಳೊಂದಿಗೆ ನಡೆಸುವುದು.

5. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಂದೆ ಪ್ರಾರಂಭಿಕ ವರದಿ, ಮಧ್ಯಂತರ ವರದಿ ಮತ್ತು ಕರಡು ಮೌಲ್ಯಮಾಪನ ವರದಿಯ ಪ್ರಸ್ತುತಿ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮುಂದಿನ ವರ್ಷದ ಕ್ರಿಯಾ ಯೋಜನೆಯ ಬಗ್ಗೆಯೂ ಸದಸ್ಯರಿಗೆ ಮಾಹಿತಿ ನೀಡಿರುತ್ತದೆ.

- ವಾರ್ಷಿಕ ರೂ.100 ಕೋಟಿಗಿಂತ ಹೆಚ್ಚಿನ ಹಣ ವಿನಿಯೋಗ ಹೊಂದಿರುವ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳ ಹಾಗೂ ಜನಸಾಮಾನ್ಯರೆಡೆಗೆ ಗಮನ ಹರಿಸುವ ಯೋಜನೆಗಳ ಮೌಲ್ಯಮಾಪನ ಮಾಡುವುದು.
- ಪರಸ್ಪರ ಲಾಭಕ್ಕಾಗಿ ಶೈಕ್ಷಣಿಕ ಕ್ಷೇತ್ರ ಮತ್ತು ಸರ್ಕಾರವನ್ನು ಸಾಮಾನ್ಯ ವೇದಿಕೆಯಲ್ಲಿ ತರಲು ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಸಹಯೋಗದೊಂದಿಗೆ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳುವುದು.
- ಇಲಾಖೆಗಳು ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸಲು ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮೌಲ್ಯಮಾಪನ ಅಧ್ಯಯನಗಳ ಗುಣಮಟ್ಟವನ್ನು ಸುಧಾರಿಸುವುದು.

- ಯುವ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ಹೆಚ್ಚಿಸಲು ಆಂತರಿಕ ಅಧ್ಯಯನಗಳನ್ನು ಕೈಗೊಳ್ಳುವುದು.
- ಯುವ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರ ಸಾಮರ್ಥ್ಯ ವೃದ್ಧಿಗಾಗಿ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಬಲಪಡಿಸುವುದು.
- ಸಾಕ್ಷಾಧಾರಿತ ನೀತಿಗಾಗಿ ವೈಜ್ಞಾನಿಕ ಫಲಿತಾಂಶಗಳನ್ನು ಸೆಳೆಯಲು ಮೌಲ್ಯಮಾಪನ ಅಧ್ಯಯನ ಮತ್ತು ದತ್ತಾಂಶ ವಿಶ್ಲೇಷಣೆಗಳಲ್ಲಿ ದ್ವಿತೀಯ ಮತ್ತು ಪ್ರಾಥಮಿಕ ದತ್ತಾಂಶವನ್ನು ಸಂಯೋಜಿಸಲು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮ (KODI), ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ (CODR) ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರಗಳೊಂದಿಗೆ (SDGCC) ಕೈಜೋಡಿಸುವುದು.
- ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಗಾಗಿ ಉತ್ಪನ್ನ – ಫಲಿತಾಂಶ ವಿಶ್ಲೇಷಿತ ಚೌಕಟ್ಟಿನ ದಾಖಲೆಯನ್ನು ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.

ಸಾಮಾನ್ಯ ಮಂಡಳಿಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಉಪಕ್ರಮಗಳನ್ನು ಶ್ಲಾಘಿಸಿರುತ್ತದೆ ಮತ್ತು ಮುಂದಿನ ಕ್ರಿಯಾ ಯೋಜನೆಯನ್ನು ಗಮನಿಸಿರುತ್ತದೆ. ಅಧ್ಯಯನದ ಪ್ರಸ್ತಾವನೆಗಳನ್ನು ಕಳುಹಿಸಲು ಎಲ್ಲಾ ಇಲಾಖೆಗಳಿಗೆ ಪತ್ರಗಳನ್ನು ಕಳುಹಿಸುವಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ತಿಳಿಸುತ್ತಾ ಇಲಾಖೆಯಲ್ಲಿ ನಿಧಿ ಲಭ್ಯವಿಲ್ಲದಿದ್ದರೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅನುದಾನದಲ್ಲಿ ಅಧ್ಯಯನವನ್ನು ಕೈಗೊಳ್ಳಬಹುದು ಎಂದು ತಿಳಿಸಲಾಯಿತು.

## 18, 19 ಮತ್ತು 20ನೇ ಆಡಳಿತ ಮಂಡಳಿ ಸಭೆಗಳಲ್ಲಿ ಅನುಮೋದಿಸಲಾಗಿರುವ ಪ್ರಮುಖ ನಿರ್ಧಾರಗಳು

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕದ ಆಡಳಿತ ಮಂಡಳಿಯ 18, 19 ಮತ್ತು 20 ನೇ ಸಭೆಗಳು ಕ್ರಮವಾಗಿ 16–05–2019, 03–08–2019 ಮತ್ತು ಮಾರ್ಚ್ 2020 ರಂದು ಜರುಗಿರುತ್ತವೆ. ಈ ಸಭೆಗಳಲ್ಲಿ ನೀಡಲಾಗಿರುವ ಪ್ರಮುಖ ಅನುಮೋದನೆಗಳು:

## *18ನೇ ಆಡಳಿತ ಮಂಡಳಿಯ ಸಭೆ*

1. ಭಾರತೀಯ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳ ಮೂಲಕ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸಲು ರೂಪಿಸಲಾದ ಮಾರ್ಗಸೂಚಿಗಳಿಗೆ ಅನುಮೋದನೆ.
2. ಆರ್ಥಿಕ ಪ್ರಸ್ತಾವನೆಯ ಕೋಷ್ಟಕ 4 ಬಿ ಯಲ್ಲಿ ನೀಡಲಾಗಿರುವ ಎಲ್ಲಾ ಒಂಬತ್ತು ಮಾನದಂಡಗಳಿಗೆ ಮೌಲ್ಯಮಾಪನ ಸಮಾಲೋಚನಾ ಸಂಸ್ಥೆಯು ಹಣಕಾಸಿನ ವೆಚ್ಚವನ್ನು ಕಡ್ಡಾಯವಾಗಿ ನಮೂದಿಸಬೇಕು ಎಂಬ ಷರತ್ತುಗಳನ್ನು ಒಳಗೊಂಡ ಪ್ರಸ್ತಾವನೆ ವಿನಂತಿಯ ಪರಿಷ್ಕರಣೆಗೆ ಅನುಮೋದನೆ ಮತ್ತು ಅಧ್ಯಯನಕ್ಕಾಗಿ ಪ್ರಸ್ತಾಪಿಸಲಾದ ಮೌಲ್ಯಮಾಪನ ತಂಡದಲ್ಲಿ ಸದಸ್ಯನಾಗಿ ಒಬ್ಬ ಕನ್ನಡ ಭಾಷಾಂತರಕಾರನ ಕಡ್ಡಾಯ ಸೇರ್ಪಡೆ.
3. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದೊಂದಿಗೆ ಈ ಕೆಳಗಿನ 5 ಸಮಾಲೋಚಕ ಸಂಸ್ಥೆಗಳನ್ನು ಮತ್ತು ಇಬ್ಬರು ಸ್ವತಂತ್ರ ಮೌಲ್ಯಮಾಪಕರನ್ನು ಪಟ್ಟಿಯಲ್ಲಿ ಸೇರಿಸಲು ಅನುಮೋದನೆ.

ಏಪ್ರಿಲ್ 2019 ರಿಂದ ಮಾರ್ಚ್ 2020 ರವರೆಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದೊಂದಿಗೆ ಪಟ್ಟಿಯಲ್ಲಿ ಸೇರಿಸಲಾದ ಸಮಾಲೋಚಕ ಸಂಸ್ಥೆಗಳು ಮತ್ತು ಸ್ವತಂತ್ರ ಮೌಲ್ಯಮಾಪಕರ ಪಟ್ಟಿ

| ಕ್ರ. ಸಂ. | ಸಮಾಲೋಚಕ ಸಂಸ್ಥೆಯ ಹೆಸರು |
|---|---|
| 1 | ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸೆಂಟರ್, ಜೆಎಂಜೆ ಎಜುಕೇಶನ್ ಸೊಸೈಟಿಯ ಆಚಾರ್ಯ ಇನ್ಸಿಟ್ಯೂಟ್ ಆಫ್ ಗ್ರಾಜುಯೇಟ್ ಸ್ಟಡೀಸ್– ಬೆಂಗಳೂರು |
| 2 | ಪೀಸ್‌ಫುಲ್ ಲಿವಿಂಗ್ ವಿತ್ ಯುನಿಫೈಡ್ ಸಲ್ಯುಷನ್ಸ್– ಬೆಂಗಳೂರು |
| 3 | ಕ್ರಿಸಿಲ್ ರಿಸ್ಕ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಸಲ್ಯುಷನ್ಸ್ ಲಿಮಿಟೆಡ್–ಮುಂಬಯಿ |
| 4 | ರಿಸರ್ಚ್ ಅಂಡ್ ಕನ್ಸಲ್ಟಿಂಗ್– ಬೆಂಗಳೂರು |
| 5 | ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಆಡಿಟರ್– ಬೆಂಗಳೂರು |

| ಕ್ರ. ಸಂ. | ಸ್ವತಂತ್ರ ಮೌಲ್ಯಮಾಪಕರ ಹೆಸರು |
|---|---|
| 1 | ಕೆ.ರಾಜೇಂದ್ರ ಪ್ರಸಾದ್ |
| 2 | ಡಾ.ಸುಬ್ರಮಣಿಯನ್ ಕೆ.ವಿ. |

4. ಮೌಲ್ಯಮಾಪನ ಅಧ್ಯಯನಗಳನ್ನು ನಡೆಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ನಡುವಿನ ಸಹಯೋಗ ಪ್ರಸ್ತಾವನೆ ಅನುಮೋದನೆ.
5. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿನ ನಿರ್ದೇಶಕರು ಮತ್ತು ಸಹ ನಿರ್ದೇಶಕರು (ಸಂಗ್ರಹಣೆ ಮತ್ತು ಸಮನ್ವಯ ವಿಭಾಗ), ನಿರ್ದೇಶಕರು ಮತ್ತು ಸಹ ನಿರ್ದೇಶಕರು (ಮೌಲ್ಯಮಾಪನ ವಿಭಾಗ) ಮತ್ತು ನಿರ್ದೇಶಕರು ಮತ್ತು ಸಹ ನಿರ್ದೇಶಕರು (ಪ್ರಕಟಣೆ ಮತ್ತು ಸಾಂಖ್ಯಿಕ ವಿಭಾಗ) ಮತ್ತು ರಿಸರ್ಚ್ ಫೆಲೋಗಳ ಹುದ್ದೆಗಳಿಗೆ ನೇಮಕಾತಿಗಾಗಿ ಅನುಮೋದನೆ.

## *19ನೇ ಆಡಳಿತ ಮಂಡಳಿಯ ಸಭೆ*

1) 18ನೇ ಆಡಳಿತ ಮಂಡಳಿಯಲ್ಲಿ ದೊರೆತ ಅನುಮೋದನೆಯಂತೆ ಹುದ್ದೆಗಳನ್ನು ಪ್ರಾರಂಭಿಸಲು ಮತ್ತು ಭರ್ತಿ ಮಾಡಲು ನಿರ್ದೇಶನಗಳು ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳಿಗೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುವ ಸಿಬ್ಬಂದಿಗಳ ವೇತನ ಶ್ರೇಣಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಪಿಡಿಎಸ್ 36 ಪಿಎಸ್‌ಡಿ

2019, ದಿನಾಂಕ:04–07–2019 ರ ಪ್ರಕಾರ ಪಾವತಿಸಲು ಅನುಮೋದನೆ.

2) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿರುವ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹತಾ ಮಾನದಂಡಗಳ ಪರಿಷ್ಕರಣೆಯನ್ನು ಅನುಮೋದಿಸಲಾಗಿದೆ.

3) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಹುದ್ದೆಗಳ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಹಾಗೂ ಆರ್ಟಿಕಲ್ 371 ಜೆ ಅಡಿಯಲ್ಲಿ ಹುದ್ದೆಗಳ ಮೀಸಲಾತಿಗೆ ಅನುಮೋದಿಸಲಾಗಿದೆ.

4) ಎಫ್‌ಡಿ 03 ಟಿಎಫ್‌ಪಿ 2018 ದಿನಾಂಕ: 14–05–2018ರನ್ವಯ ತಿದ್ದುಪಡಿ ಮಾಡಿದಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳಿಗೆ ಆಡಳಿತ ಮತ್ತು ಹಣಕಾಸು ಅಧಿಕಾರಗಳ ಆರ್ಥಿಕ ಪ್ರತ್ಯಾಯೋಜನೆಯ ಪರಿಷ್ಕರಣೆಯನ್ನು ಅನುಮೋದಿಸಲಾಗಿದೆ.

5) ಡಾ. ಛಾಯಾ ಕೆ ದೇಗಾಂವಕರ್ ಅವರ ನೇಮಕಾತಿಯನ್ನು ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿಯಾಗಿ ರೂ.1,50,000 ಗೌರವ ಧನದೊಂದಿಗೆ 3 ವರ್ಷಗಳ ಅವಧಿಗೆ 5% ವಾರ್ಷಿಕ ಹೆಚ್ಚಳದೊಂದಿಗೆ ಅನುಮೋದಿಸಲಾಗಿದೆ.

6) ಪ್ರಸ್ತುತ ನಿರ್ಬಂಧಿತ ಆಡಳಿತ ಮಂಡಳಿಯ ಸದಸ್ಯರಲ್ಲದ ನಿರ್ದೇಶಕರು (ಎಡಿಬಿ)ರವರ ಸ್ಥಾನದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತಾಧಿಕಾರಿ ಅವರನ್ನು ಗೌರವ ಖಜಾಂಚಿಯಾಗಿ ನೇಮಕ ಮಾಡಲು ಅನುಮೋದನೆ ನೀಡಲಾಗಿದೆ.

7) ಪ್ರಸ್ತುತ ಅಸ್ತಿತ್ವದಲ್ಲಿರುವ ಮೆಮೋರಾಂಡಮ್ ಆಫ್ ಅಸೋಸಿಯೇಷನ್‌ನ ಪ್ಯಾರಾ 6ನ್ನು ಬದಲಾಯಿಸಲು ಅನುಮೋದಿಸಲಾಗಿದೆ.

8) ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ನಿಯಮಗಳಡಿ ನಿಯಮ 4 ರ ಮಾರ್ಪಾಡು ಅನುಮೋದಿಸಲಾಗಿದೆ.

9) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಅಧಿನಿಯಮದ (KTPP) ಗುಣಮಟ್ಟದ ವೆಚ್ಚ ಆಧಾರಿತ ಆಯ್ಕೆಯ (QCBS) ವಿಧಾನದ ಅಡಿಯಲ್ಲಿ ಐದು ಯೋಜನೆಗಳ ಪ್ರಸ್ತಾವನಾ ವಿನಂತಿಗೆ ಕರೆ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ.

10) ಕ್ಷೇತ್ರ ಇಲಾಖೆಯಿಂದ ಕ್ರಮ ಕೈಗೊಂಡ ವರದಿಗಳನ್ನು ಪರಿಶೀಲಿಸಲು ಮತ್ತು ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡಲು ಸಮಿತಿಯೊಂದನ್ನು ರಚಿಸಲು ಅನುಮೋದಿಸಲಾಗಿದೆ.

## *20ನೇ ಆಡಳಿತ ಮಂಡಳಿಯ ಸಭೆ*

ಆಡಳಿತ ಮಂಡಳಿಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಹುದ್ದೆಗಳಿಗೆ ಮಾಡಿದ ಆಯ್ಕೆಯನ್ನು ಗಮನಿಸಿ ಅನುಮೋದಿಸಿರುತ್ತದೆ ಮತ್ತು ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡುವಂತೆ ನಿರ್ದೇಶಿಸಿರುತ್ತದೆ. ನೇಮಕಾತಿಗಾಗಿ ಕರಡು ನಿಯಮಗಳು ಮತ್ತು ಷರತ್ತುಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಕಾಲಕಳೆದಂತೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಹೆಚ್ಚಿನ ಸಂಖ್ಯೆಯ ವಿವಿಧ ರೀತಿಯ ಅಧ್ಯಯನಗಳನ್ನು ಕೈಗೊಳ್ಳುತ್ತಿದೆ ಮತ್ತು ಈ ಅಧ್ಯಯನಗಳ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಅವಶ್ಯಕವಾಗಿದೆ. ಅಲ್ಲದೆ ವರದಿಗಳ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಪ್ರಕ್ರಿಯೆಯನ್ನು ತಿಳಿದುಕೊಳ್ಳಲು, ಮಧ್ಯಂತರ ವರದಿಗಳನ್ನು ಪಡೆಯಬೇಕಾಗಿರುತ್ತದೆ. ಈ ಸಂದರ್ಭದಲ್ಲಿ, ಪ್ರಸ್ತಾವನಾ ವಿನಂತಿ ಮತ್ತು ಗುತ್ತಿಗೆ ಒಪ್ಪಂದದಲ್ಲಿ ಬದಲಾವಣೆಗಳನ್ನು ಸೇರಿಸಬೇಕಾಗಿರುತ್ತದೆ. ಆದ್ದರಿಂದ ವಿವಿಧ ಚಟುವಟಿಕೆಗಳು ಮತ್ತು ಪಾವತಿ ವೇಳಾಪಟ್ಟಿಯನ್ನು ತಿಳುವಳಿಕೆ ಪತ್ರದ ನಂತರ (MOU) 10%, ಪ್ರಾರಂಭಿಕ ವರದಿಯ ಅನುಮೋದನೆಯ ನಂತರ 30%, ಕರಡು ಮೌಲ್ಯಮಾಪನ ವರದಿಯ ಅನುಮೋದನೆಯ ನಂತರ 50% ಮತ್ತು ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿದ ನಂತರ 10% ಅಂತಿಮ

ಕಂತು ಎಂದು ನಿಗದಿಪಡಿಸಲು ಪ್ರಸ್ತಾವನೆ ವಿನಂತಿಯ ಟೆಂಡರ್ ಡಾಕ್ಯುಮೆಂಟ್‌ಗೆ ತಿದ್ದುಪಡಿ ಕೋರಲಾಗಿದೆ. ಮೇಲಿನ ಪ್ರಮುಖ ಬದಲಾವಣೆಗಳಿಗೆ ಆಡಳಿತ ಮಂಡಳಿಯು ಅನುಮೋದಿಸಿರುತ್ತದೆ.

ಜಾಲತಾಣದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಡೊಮೇನ್ನನ್ನು kea.karnataka.gov.in **ನಿಂದ** kmea.karnataka.gov.in ಎಂದು ಬದಲಾಯಿಸಲು ಆಡಳಿತ ಮಂಡಳಿ ಅನುಮೋದನೆ ನೀಡಿರುತ್ತದೆ.

## ಮೌಲ್ಯಮಾಪನದಲ್ಲಿ ಇತ್ತೀಚಿನ ವಿಧಾನಗಳು ಮತ್ತು ತಂತ್ರಗಳನ್ನು ಕುರಿತು

## ಆಗಸ್ಟ್ 19, 2019 ರಂದು ಜರುಗಿದ ಕಾರ್ಯಾಗಾರದ ವರದಿ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪುರಾವೆ ಆಧಾರಿತ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ರೂಪಿಸುವಲ್ಲಿ ಸರ್ಕಾರಕ್ಕೆ



ಅನುಕೂಲವಾಗುವಂತೆ ಗುಣಮಟ್ಟದ ಮೌಲ್ಯಮಾಪನ ವರದಿಗಳನ್ನು ತಯಾರಿಸಲು – ಸಂಸ್ಥೆಗಳು ಮತ್ತು ಸರ್ಕಾರಿ ಇಲಾಖೆಗಳು ಈ ಎರಡೂ

ಮಧ್ಯಸ್ಥಗಾರರ ಸಾಮರ್ಥ್ಯ ವರ್ಧನೆಯ ಒಂದು ಆಶಯ ಹೊಂದಿದೆ. ಸಮಾಲೋಚಕ ಸಂಸ್ಥೆಗಳ ಕೌಶಲ್ಯವನ್ನು ಹೆಚ್ಚಿಸಲು ಕಾರ್ಯಾಗಾರವನ್ನು ಆಗಸ್ಟ್ 19, 2019 ರಂದು ಏರ್ಪಡಿಸಲಾಗಿದ್ದು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯದ ಡಾ. ಅಬ್ದುಲ್ ಅಜೀಜ್, ಸೆಂಟರ್ ಫಾರ್ ಬಜೆಟ್ ಮತ್ತು ಪಾಲಿಸಿ ಸ್ಟಡೀಸ್ ನ ಡಾ. ಜ್ಯೋತ್ಸ್ನಾ ಝಾ ಮತ್ತು ಡಾ. ಮಾಧೇಶ್ವರನ್, ಪ್ರೊಫೆಸರ್ ಮತ್ತು ಮುಖ್ಯಸ್ಥರು, ಸೆಂಟರ್ ಫಾರ್ ಎಕನಾಮಿಕ್ಸ್ ಅಂಡ್ ಪಾಲಿಸಿ, ಇನ್ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್, ಬೆಂಗಳೂರು ಇವರು ಕಾರ್ಯಾಗಾರದ ಪ್ರಮುಖ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.



ಮೌಲ್ಯಮಾಪನ ಅಧ್ಯಯನಗಳ ಪ್ರಧಾನ ಶೋಧಕರು, ಸಮಾಲೋಚಕ ಸಂಸ್ಥೆಗಳ ಪ್ರತಿನಿಧಿಗಳು, ಸ್ವತಂತ್ರ ಮೌಲ್ಯಮಾಪಕರು, ಯೋಜನಾ ಇಲಾಖೆಯ ಅಧಿಕಾರಿಗಳು ಮತ್ತು ಆಹ್ವಾನಿತರು ಸೇರಿ ಒಟ್ಟು 70 ಜನ ಈ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತಾರೆ.

ಉದ್ಘಾಟನಾ ಅಧಿವೇಶನವು ಶ್ರೀ ಸುದರ್ಶನ್ ಜಿ.ಎ, ಭಾ.ಅ.ಸೇ, ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರ



ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಗಿ ಇವರು ಡಾ. ಶಾಲಿನಿ ರಜನೀಶ್, ಐ.ಎ.ಎಸ್. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ವಿಷಯ ತಜ್ಞರು ಮತ್ತು ಭಾಗವಹಿಸಿದ ಎಲ್ಲರನ್ನೂ ಸ್ವಾಗತಿಸಿದರು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿಯಾದ ಡಾ. ಛಾಯಾ ಕೆ. ದೇಗಾಂವಕರ್ ರವರು ಕಾರ್ಯಾಗಾರದ ಉದ್ದೇಶಗಳು ಮತ್ತು ಚರ್ಚೆಗಳ ಬಗ್ಗೆ ವಿವರಿಸಿದರು.

ಕಾರ್ಯಾಗಾರವನ್ನು ಪ್ರೊ. ಅಬ್ದುಲ್ ಅಜೀಜ್ ಉದ್ಘಾಟಿಸಿ ಮಾತನಾಡುತ್ತಾ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ಹಾಗೂ ಅನುಷ್ಠಾನದಷ್ಟೇ ಅವುಗಳ ಮೌಲ್ಯಮಾಪನವೂ ಮಹತ್ವದಾಗಿದ್ದು, ಈ ರೀತಿಯ



ಸಾಮರ್ಥ್ಯವೃದ್ಧಿ ಕಾರ್ಯಾಗಾರಗಳ ಅಗತ್ಯತೆ ಮತ್ತು ಉಪಯುಕ್ತತೆಯನ್ನು ಒತ್ತಿ ಹೇಳಿದರು. ಇದು ಸತ್ಯಶೋಧನೆ ಮತ್ತು ಅಭಿಪ್ರಾಯಗಳನ್ನು ಹಾಗೂ

ಕಾರ್ಯಕ್ರಮದ ಫಲಿತಾಂಶಗಳನ್ನು ಗರಿಷ್ಠಗೊಳಿಸಲು ಮಧ್ಯಾವಧಿಯಲ್ಲಿನ ತಿದ್ದುಪಡಿಗಳಿಗೆ ಅವಕಾಶ ನೀಡುತ್ತದೆ ಎಂದು ತಿಳಿಸಿದರು. ಮೊದಲ ಅಧಿವೇಶನದಲ್ಲಿ, ಸಂಪನ್ಮೂಲ ವ್ಯಕ್ತಿ, ಅನುಭವಿ ಸಾಮಾಜಿಕ ವಿಜ್ಞಾನಿ ಮತ್ತು ದತ್ತಾಂಶ ವಿಶ್ಲೇಷಕರಾದ, ಪ್ರೊ. ಅಜೀಜ್ ರವರು ಯೋಜನೆಯ ಸಾಮಾಜಿಕ–ಆರ್ಥಿಕ ದತ್ತಾಂಶಗಳ ವಿಶ್ಲೇಷಣೆ ತೀರ್ಮಾನಗಳ ಬಗ್ಗೆ ಅತಿ ಉಪಯುಕ್ತ ಒಳನೋಟಗಳನ್ನು ನೀಡಿದರು. ಸಾಹಿತ್ಯದ ಸಿದ್ಧಾಂತಗಳು ಮತ್ತು ವಿಮರ್ಶೆಯ ಆಧಾರದ ಮೇಲೆ, ಅಧ್ಯಯನದಲ್ಲಿ ನಿರ್ಣಾಯಕ ಅಸ್ಥಿರತೆಗಳನ್ನು ಗುರುತಿಸಲು ವಿಶ್ಲೇಷಣಾತ್ಮಕ ಚೌಕಟ್ಟನ್ನು ಅಭಿವೃದ್ಧಿ ಪಡಿಸಬೇಕು, ಪರಸ್ಪರ ನಿಕಟತೆ ಮತ್ತು ಹಿಂಜರಿತದ ವಿಶ್ಲೇಷಣೆಯ ಮೂಲಕ ಸಂಬಂಧವನ್ನು ಹೆಚ್ಚು ವೈಜ್ಞಾನಿಕವಾಗಿ ಹೊರ ತರಬೇಕು ಮತ್ತು ಇದರ ಫಲಿತಾಂಶಗಳನ್ನು ನೀತಿ ಸಲಹೆಗಳನ್ನು ನೀಡಲು ಬಳಸಬೇಕು ಎಂದು ಅವರು ಸಲಹೆ ನೀಡಿದರು.

ಡಾ. ಜ್ಯೋತ್ಸ್ನಾ ಝಾ ಇವರು ಮೌಲ್ಯಮಾಪನ ಅಧ್ಯಯನದಲ್ಲಿನ



ವಿಧಾನಗಳು ಮತ್ತು ತಂತ್ರಗಳ ಆಯ್ಕೆಯ ನಿರ್ಣಾಯಕ ಸಮಸ್ಯೆಯ ಬಗ್ಗೆ ಉದಾಹರಣೆಗಳೊಂದಿಗೆ ಮತ್ತು ಪ್ರತ್ಯಕ್ಷ ತರಬೇತಿಯೊಂದಿಗೆ ಭಾಗವಹಿಸಿದವರ ಜೊತೆ ಚರ್ಚಿಸಿದರು. ವಿವಿಧ ರೀತಿಯ ಮೌಲ್ಯಮಾಪನ ಅಧ್ಯಯನಗಳಿಗೆ ವಿಭಿನ್ನ ವಿಧಾನಗಳು, ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆಯ

ವಿಧಾನಗಳ ಆಯ್ಕೆ ಮತ್ತು ಪರಿಮಾಣಾತ್ಮಕ ಮತ್ತು ಗುಣಾತ್ಮಕ ದತ್ತಾಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅವರು ವಿವರವಾಗಿ ಪ್ರಸ್ತುತಪಡಿಸಿದರು. ಅನ್ವಯಿಸಿದ ಮೌಲ್ಯಮಾಪನ ವಿಧಾನದಿಂದ ಏನಾಯಿತು, ಹಾಗಾಗಲು ಏನು ಕಾರಣವಾಯಿತು ಈ ಎಲ್ಲಾ ಪ್ರಕ್ರಿಯೆ ಮತ್ತು ಪರಿಣಾಮಗಳನ್ನು ಅದು ಒಳಗೊಂಡಿದೆಯೆ ಎಂಬುದನ್ನು ಹೊರತರಲು ಸಾಧ್ಯವಾಗಬೇಕು. ವಿಧಾನದ ಆಯ್ಕೆಯು ಅಧ್ಯಯನದ ಸ್ವರೂಪ, ಕಾರ್ಯಸಾಧ್ಯತೆ, ಸಮಯದ ನಿರ್ಬಂಧ, ಹಣಕಾಸು ಸಂಪನ್ಮೂಲಗಳು, ಸಂಶೋಧನಾ ತಂಡದ ಸಾಮರ್ಥ್ಯ, ದತ್ತಾಂಶದ ಲಭ್ಯತೆ ಇತ್ಯಾದಿಗಳಿಂದ ಮಾರ್ಗದರ್ಶಿಸಲ್ಪಡುವಂತಿರಬೇಕು ಎಂದು ವಿವರಿಸಿದರು.

ಪ್ರೊ. ಮಾಧೇಸ್ವರನ್ ರವರು ಮೌಲ್ಯಮಾಪನ ಕ್ಷೇತ್ರದಲ್ಲಿ ಇತ್ತೀಚಿನ ಪ್ರವೃತ್ತಿಗಳ ಕುರಿತು ಉಪನ್ಯಾಸ ನೀಡಿದರು. ಮೌಲ್ಯಮಾಪನವು ಸಂಯೋಜನೆ ಮತ್ತು ಮೌಲ್ಯಮಾಪನ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಅನುಷ್ಠಾನಾಧಾರಿತ ವಿಧಾನಗಳಿಂದ ಹೊಸ



ಫಲಿತಾಂಶಗಳಾಧಾರಿತ ವಿಧಾನಗಳೆಡೆ ಚಲನೆಯನ್ನೊಳಗೊಂಡು ವಿಕಸನಗೊಂಡಿದೆ. ಅಂತೆಯೇ ಫಲಿತಾಂಶಧಾರಿತ ಸಂಯೋಜನೆ ಮತ್ತು ಮೌಲ್ಯಮಾಪನ ಚೌಕಟ್ಟನ್ನು ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು 10 ಹಂತಗಳನ್ನು ಅವರು ಪ್ರಸ್ತುತ ಪಡಿಸಿದರು. ಈ ಫಲಿತಾಂಶ ಆಧಾರಿತ

ಸಂಯೋಜನೆ ಮತ್ತು ಮೌಲ್ಯಮಾಪನ ಚೌಕಟ್ಟಿನ ಮೂಲ ಅಂಶಗಳು ಒಳಹರಿವುಗಳು, ಚಟುವಟಿಕೆಗಳು, ಉತ್ಪನ್ನಗಳು, ಫಲಿತಾಂಶಗಳು ಮತ್ತು ಪರಿಣಾಮ(ಗುರಿ)ಗಳಾಗಿದ್ದು, ಈ ಸನ್ನಿವೇಶದಲ್ಲಿ ಸಾಮರ್ಥ್ಯದ ಬೀಜ ಹಾಗು ಸಾಮರ್ಥ್ಯದ ತಿರುಳು ಮತ್ತು ಫಲಿತಾಂಶಾಧಾರಿತ ಸಂಯೋಜನೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲು ಸಾಮರ್ಥ್ಯವರ್ಧನೆಯ ತುರ್ತಿನ ಬಗ್ಗೆಯೂ ಅವರು ವಿವರಿಸಿದರು.

ಭೋಜನ ವಿರಾಮದ ನಂತರದ ಅಧಿವೇಶನದಲ್ಲಿ IIರಲ್ಲಿ, ಡಾ. ಶಾಲಿನಿ



ರಜನೀಶ್, ಭಾ.ಆ.ಸೇ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಕಾರ್ಯಾಗಾರದಲ್ಲಿ ಭಾಗವಹಿಸಿದವರನ್ನು ಉದ್ದೇಶಿಸಿ ಮಾತನಾಡಿದರು. ಮೌಲ್ಯಮಾಪನ ಅಧ್ಯಯನಗಳು ಸ್ಥೂಲ–ಸೂಕ್ಷ್ಮ ಚೌಕಟ್ಟಿನಲ್ಲಿ ಫಲಿತಾಂಶಗಳನ್ನು ವಿಶ್ಲೇಷಿಸಬೇಕು ಮತ್ತು ಯೋಜನೆಯ ಉದ್ದೇಶಗಳು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯತ್ತ ಫಲಿತಾಂಶಗಳನ್ನು ಕೇಂದ್ರೀಕರಿಸಿ ಪರಿಣಾಮವನ್ನು ಹೊರತರಬೇಕು ಎಂದು ಅವರು ಸೂಕ್ತವಾಗಿ ಸಲಹೆಯನ್ನು ನೀಡಿದರು. ಈ

ಶಿಫಾರಸ್ಸುಗಳು ನಿರ್ದಿಷ್ಟವಾಗಿರಬೇಕು, ಸಾಕ್ಷ್ಯಾಧಾರಗಳನ್ನು ಆಧರಿಸಿರಬೇಕು ಮತ್ತು ನೀತಿ ಮಾರ್ಗಸೂಚಿಗಳು, ಅನುಷ್ಠಾನ ಪ್ರಕ್ರಿಯೆ ಇತ್ಯಾದಿಗಳಲ್ಲಿ ಅಗತ್ಯತೆಗಳೇನಾದರೂ ಇದ್ದಲ್ಲಿ ಅವುಗಳನ್ನು ಹೊರತರಬೇಕು. ಮಹಿಳೆಯರ ವೇತನರಹಿತ ಕೆಲಸ ಕಾರ್ಯಗಳ ಉದಾಹರಣೆಯನ್ನು ಉಲ್ಲೇಖಿಸಿ, ಕ್ಷೇತ್ರ ನೈಜತೆಗಳನ್ನು ಹೊರತರುವಲ್ಲಿ ಮತ್ತು ಗೋಚರ ಮತ್ತು ಅಗೋಚರ ಮೌಲ್ಯವರ್ಧನೆಯ ಅಂದಾಜು ಮಾಡುವಲ್ಲಿ ನವೀನ ವಿಧಾನಗಳನ್ನು ಬಳಸಬೇಕಾಗುತ್ತದೆ ಎಂದು ಅವರು ತಿಳಿಸಿದರು. ಫಲಿತಾಂಶ ಮತ್ತು ಪರಿಣಾಮದ ದೃಷ್ಟಿಯಿಂದ ಕಾರ್ಯಕ್ರಮಗಳು / ಯೋಜನೆಗಳ ವಿನ್ಯಾಸವಾಗಬೇಕು ಮತ್ತು ನವೀನ ಕಾರ್ಯತಂತ್ರಗಳ ಅಳವಡಿಸುವಿಕೆಯು ಸುಸ್ಥಿರ ಅಭಿವೃದ್ಧಿಯ ಗುರಿಗಳು–2030ನ್ನು ಸಾಧಿಸುವಲ್ಲಿ ಬಹು ದೂರ ಸಾಗುತ್ತದೆ ಎಂದು ತಿಳಿಸಿದರು

ಡಾ. ಛಾಯಾ ಕೆ. ದೇಗಾಂವ್ಕರ್, ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರು ಮೌಲ್ಯಮಾಪನ ವಿಧಾನದಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಪ್ರಸ್ತುತ ಪಡಿಸುತ್ತಾ, ಸಮಲೋಚಕ ಸಂಸ್ಥೆಗಳಿಗೆ



ಬದಲಾವಣೆಯ ಸಿದ್ಧಾಂತ, ಮೌಲ್ಯಮಾಪನ ಮ್ಯಾಟ್ರಿಕ್ಸ್, ದತ್ತಾಂಶ

ವಿಶ್ಲೇಷಣೆ ತಂತ್ರಗಳು, ಫಲಿತಾಂಶ– ಪರಿಣಾಮ ಚೌಕಟ್ಟಿನಲ್ಲಿ ಶೋಧನೆಗಳ ಚರ್ಚೆ ಮತ್ತು ವರದಿ ಪ್ರಸ್ತುತಿಯ ರಚನೆ ಮುಂತಾದ ಅಧ್ಯಯನದ ವಿವಿಧ ಅಂಶಗಳನ್ನು ಒಳಗೊಂಡಂತೆ, ಮೌಲ್ಯಮಾಪನ ವರದಿಗಳ ಗುಣಮಟ್ಟವನ್ನು ಹೆಚ್ಚಿಸಲು ಅನೇಕ ಸಲಹೆಗಳನ್ನು ನೀಡಿದರು.

ಶ್ರೀಮತಿ ಜ್ಯೋತಿ ಎಸ್ ಜೆನ್ನಿ, ಸಹ ನಿರ್ದೇಶಕರು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರು ಪ್ರಾಥಮಿಕ ಮತ್ತು ದ್ವಿತೀಯ ದತ್ತಾಂಶಗಳ ಸಂಗ್ರಹ, ಮಾದರಿಗಳಲ್ಲಿನ ಸಮಸ್ಯೆಗಳು ಮತ್ತು ಅಧ್ಯಯನ ವರದಿಗಳಲ್ಲಿನ ಕೋಷ್ಟಕಗಳು ಮತ್ತು ರೇಖಾಚಿತ್ರಗಳಲ್ಲಿ ದತ್ತಾಂಶಗಳನ್ನು ಪ್ರತಿನಿಧಿಸುವ ಬಗ್ಗೆ ವಿವರಿಸಿದರು. ಶ್ರೀ ಎಸ್. ದಿನೇಶ, ಸಮಾಲೋಚಕ (ಅನುವಾದ ಮತ್ತು ತರಬೇತಿ), ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರು ಅಧ್ಯಯನ ವರದಿಗಳ ಕನ್ನಡ ಅನುವಾದದ ಬಗ್ಗೆ ವಿಮರ್ಶಾತ್ಮಕ ಒಳನೋಟಗಳನ್ನು ನೀಡಿದರು. ಶ್ರೀಮತಿ. ಎನ್ ಭವ್ಯ, ವೆಬ್ ಮ್ಯಾನೇಜರ್, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಇವರು ಮೌಲ್ಯಮಾಪನ ಅಧ್ಯಯನ ವರದಿಗಳ ಹೊದಿಕೆ ಪುಟಗಳು, ಒಳಗಿನ ಪುಟಗಳು ಮತ್ತು ಮುದ್ರಣವನ್ನು ಸಿದ್ಧಪಡಿಸುವಾಗ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳು ಅನುಸರಿಸಬೇಕಾದ ಸಾಮಾನ್ಯ ಸೂಚನೆಗಳ ಬಗ್ಗೆ ತಿಳಿಸಿದರು.

ಅಧಿವೇಶನದ ಕೊನೆಯಲ್ಲಿ, ಭಾಗವಹಿಸಿದವರಿಗೆ ಕಾರ್ಯಾಗಾರದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ವ್ಯಕ್ತಪಡಿಸಲು ಪ್ರತಿಕ್ರಿಯೆಯ

ನಮೂನೆಗಳನ್ನು ನೀಡಲಾಯಿತು. ಭಾಗವಹಿಸಿದ ಕೆಲವರು ಕೆಲವು ಪ್ರಶ್ನೆಗಳನ್ನು ಕೇಳಿದಾಗ ಇವುಗಳನ್ನು ಚರ್ಚಿಸಿ ಸ್ಪಷ್ಟಪಡಿಸಲಾಯಿತು. ಸ್ವೀಕರಿಸಿದ ಅಭಿಪ್ರಾಯಗಳು ಶೇಕಡ 90 ಕ್ಕಿಂತ ಹೆಚ್ಚಿನ ಭಾಗವಹಿಸಿದವರು, ಈ ಕಾರ್ಯಾಗಾರವನ್ನು ಏರ್ಪಡಿಸಿದ್ದಕ್ಕೆ ತೃಪ್ತಿ ಹೊಂದಿರುವುದನ್ನು ಮತ್ತು ಜ್ಞಾನ ಗಳಿಕೆಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ ಎಂಬುದಾಗಿ ಸೂಚಿಸುತ್ತವೆ.

## 5. ಇಂಟರ್ನ್‌ಶಿಪ್ ಕಾರ್ಯಕ್ರಮ

ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಎಲ್ಲಾ ಇಲಾಖೆಗಳಲ್ಲಿ ವ್ಯಾಪಕ ವ್ಯಾಪ್ತಿಯೊಂದಿಗೆ ಮರುವಿನ್ಯಾಸಗೊಳಿಸಲಾಗಿದ್ದು, ಹೊಸ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ ಮತ್ತು ಇದನ್ನು 2019 ರ ಜನವರಿಯಿಂದ ಕಾರ್ಯರೂಪಕ್ಕೆ ತರಲಾಗಿರುತ್ತದೆ.

### ಕಾರ್ಯಕ್ರಮದ ಉದ್ದೇಶಗಳು

- ಯುವ ಶೈಕ್ಷಣಿಕ ಪ್ರತಿಭೆಗಳನ್ನು ಪರಸ್ಪರ ಲಾಭಕ್ಕಾಗಿ ಕರ್ನಾಟಕ ಸರ್ಕಾರದೊಂದಿಗೆ ಸಂಯೋಜಿಸಲು ಅವಕಾಶ ಕಲ್ಪಿಸುವುದು.
- ಇಂಟರ್ನಿಗಳನ್ನು ಸರ್ಕಾರದ ಇಲಾಖೆಗಳು ಹಾಗೂ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯ ವೈಖರಿ ಹಾಗೂ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಲ್ಪಾವಧಿಗೆ ತೊಡಗಿಸಿ ತನ್ಮೂಲಕ ಯುವ ವಿದ್ಯಾರ್ಥಿಗಳು ಹಾಗೂ ಸಂಶೋದಕರ ಸಾಮರ್ಥ್ಯ ವರ್ಧಿಸುವುದು.

- ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಮರುವಿನ್ಯಾಸಗೊಳಿಸಲು ಮತ್ತು ಸೇವಾ ವಿತರಣೆಯನ್ನು ಸುಧಾರಿಸಲು ಹೊಸ ಆಲೋಚನೆಗಳು ಮತ್ತು ಆವಿಷ್ಕಾರಗಳನ್ನು ತರಲು 'ಇಂಟರ್ನಿಗಳನ್ನು' ಪ್ರಚೋದಿಸುವುದು.
- ಕರ್ನಾಟಕ ಸರ್ಕಾರದಲ್ಲಿ ಅದರ ಕಾರ್ಯವೈಖರಿ ಮತ್ತು ಅಭಿವೃದ್ಧಿ ನೀತಿ ವಿಷಯಗಳ ಬಗ್ಗೆ ತಿಳಿಯಲು ಮತ್ತು ಪ್ರಾಯೋಗಿಕ ವಿಶ್ಲೇಷಣೆ, ಸಂಕ್ಷಿಪ್ತ ವರದಿಗಳು, ನೀತಿ ಪತ್ರಿಕೆಗಳು ಮುಂತಾದ ನೀತಿ ಒಳಹರಿವುಗಳನ್ನು ತಯಾರಿಸುವುದರ ಮೂಲಕ ನೀತಿ ರೂಪಣೆಗೆ ಕೊಡುಗೆ ನೀಡುವ ಅವಕಾಶವನ್ನು ಇಂಟರ್ನಿಗಳಿಗೆ ಒದಗಿಸುವುದು.
- ಇದು ವಿದ್ಯಾರ್ಥಿಗಳಿಗೆ ಅವರ ಭವಿಷ್ಯದ ಹಿತಾಸಕ್ತಿಗಳನ್ನು ಉತ್ತೇಜಿಸುವ ಅನುಭವದ ಸೇರ್ಪಡೆಯಾಗಿದೆ.
- ಇದು ವೇತನರಹಿತ ಇಂಟರ್ನ್‌ಶಿಪ್ ಆಗಿರುತ್ತದೆ ಮತ್ತು ಇಂಟರ್ನ್‌ಶಿಪ್ ಅವಧಿಯು ಆರು ವಾರಗಳಿಂದ ಎರಡು ತಿಂಗಳವರೆಗೆ ಇರುತ್ತದೆ.
- ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸುವುದು ಮತ್ತು ಆಯ್ಕೆ ಪ್ರಕ್ರಿಯೆಯು ನಡೆಯುತ್ತದೆ.

## ಕಾರ್ಯಕ್ರಮ ಅನುಷ್ಠಾನ

- ಕರ್ನಾಟಕ ಸರ್ಕಾರದ ಕ್ಷೇತ್ರ ಇಲಾಖೆಗಳು, ನಿಗಮಗಳು, ಮಂಡಳಿಗಳು, ಸಂಸ್ಥೆಗಳು, ಪ್ರಾಧಿಕಾರಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿರುತ್ತದೆ.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಸಂಘಟಿಸಲು ಮತ್ತು ಕಾರ್ಯಗತಗೊಳಿಸಲು ನೋಡಲ್ ಏಜೆನ್ಸಿಯಾಗಿರುತ್ತದೆ.
- ಆಯಾ ಇಲಾಖೆಯಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕೆ ಸಂಬಂಧಿತ ಇಲಾಖೆಯ ಕಾರ್ಯದರ್ಶಿ ನೋಡಲ್ ಅಧಿಕಾರಿ ಆಗಿರುತ್ತಾರೆ.
- ಈ ಕಾರ್ಯಕ್ರಮವು ಭಾರತದ ಅಥವಾ ವಿದೇಶದಲ್ಲಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆಯಲ್ಲಿ ದಾಖಲಾದ ಸ್ನಾತಕೋತ್ತರ ಅಥವಾ ಸಂಶೋಧನಾ ವಿದ್ವಾಂಸರನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಜಿಲ್ಲಾಹಂತದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ಗಳ ಕಚೇರಿಗಳಲ್ಲಿ 'ಇಂಟರ್ನಿಗಳಾಗಿ' ತೊಡಗಿಸಿಕೊಳ್ಳಬಯಸುತ್ತದೆ.
- ಈ 'ಇಂಟರ್ನಿಗಳು' ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ತೊಡಗಿಸಿಕೊಂಡು ಪ್ರಾಯೋಗಿಕ ಸಂಗ್ರಹಣೆ

ಮತ್ತು ಆಂತರಿಕ ಮತ್ತು ಇತರ ಮಾಹಿತಿಯ ಸಂಯೋಜನೆ ಮೂಲಕ ಇಲಾಖೆಗಳೊಳಗಿನ ವಿಶ್ಲೇಷಣೆಯ ಪ್ರಕ್ರಿಯೆಯನ್ನು ಪೂರೈಸುತ್ತಾರೆ.

- ಇಂಟರ್ನ್‌ಶಿಪ್ ಪ್ರಮಾಣಪತ್ರವನ್ನು ನೀಡಲು ಯೋಜನೆಯನ್ನು ಸಂಬಂಧಿತ ಇಲಾಖೆ ಮತ್ತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಮಾಣೀಕರಿಸಿರುತ್ತದೆ.

## ಇಂಟರ್ನ್‌ಗಳು ಕೈಗೆತ್ತಿಕೊಂಡ ಕೆಲವು ಯೋಜನೆಗಳು

- ಉದ್ಯೋಗದ ಮೂಲಕ ಕರ್ನಾಟಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ –1 ಬಡತನವನ್ನು ಕೊನೆಗೊಳಿಸುವುದು –ನಿಖಿಲಾ ವಿಜಯ್
- ಕರ್ನಾಟಕ ರಾಜ್ಯದಲ್ಲಿ ಮಧ್ಯಾಹ್ನ ಉಪಾಹಾರದ ಯೋಜನೆ– ಅಭಿಷೇಕ್. ಎಸ್.
- ಚಿಲ್ಲರೆ ವಹಿವಾಟು ಕ್ಷೇತ್ರದಲ್ಲಿ ಮಹಿಳೆಯರು: ಬೆಂಗಳೂರಿನಲ್ಲಿ ಆಯ್ದ ಮಾಲ್‌ಗಳ ಅಧ್ಯಯನ– ಕಾರ್ತಿಕ್ ಮತ್ತು ವಿಂಧ್ಯ
- ಕರ್ನಾಟಕದಲ್ಲಿ ಸಂಕಷ್ಟದಲ್ಲಿರುವ ಮಹಿಳೆಯರ ಪುನರ್ವಸತಿ ಕೇಂದ್ರಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನ–

ಬೆಂಗಳೂರು ನಗರದ ಒಂದು ಪ್ರಕರಣದ ಅಧ್ಯಯನ–
ಅನ್ನಪೂರ್ಣಂ. ಕೆ

**ಕರ್ನಾಟಕ ಸರ್ಕಾರದಲ್ಲಿ ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕಾಗಿ ವಿಶೇಷ ಕರೆ.**

ದತ್ತಾಂಶ ವಿಶ್ಲೇಷಣೆ ಮತ್ತು ಪುರಾವೆ ಆಧಾರಿತ ನೀತಿ ಒಳಹರಿವುಗಳಿಗೆ ಬೆಂಬಲ ನೀಡುವ ಮೂಲಕ ಕೊವಿಡ್–19ರ ಸಂದರ್ಭದಲ್ಲಿ ಕರ್ನಾಟಕದಲ್ಲಿ ಉದ್ಭವಿಸಿದ ಸಮಸ್ಯೆಗಳು ಮತ್ತು ಸವಾಲುಗಳನ್ನು ನಿಭಾಯಿಸಲು ಯುವ ಸ್ನಾತಕೋತ್ತರ ವಿದ್ಯಾರ್ಥಿಗಳು/ಸಂಶೋಧನಾ ವಿದ್ವಾಂಸರನ್ನು ಸರ್ಕಾರದೊಂದಿಗೆ ಇಂಟರ್ನ್‌ಗಳಾಗಿ ಕೆಲಸ ಮಾಡಲು ಆಹ್ವಾನಿಸುತ್ತಾ ಕರ್ನಾಟಕ ಸರ್ಕಾರವು ಇಂಟರ್ನ್‌ಶಿಪ್‌ಗಾಗಿ ವಿಶೇಷ ಕರೆ ನೀಡಿರುತ್ತದೆ. ಸಮಾಜದ ಮತ್ತು ಆರ್ಥಿಕತೆಯ ಚೇತರಿಕೆಯ ಉದಾತ್ತ ಕಾರಣಕ್ಕೆ ಕೊಡುಗೆ ನೀಡಲು ಮತ್ತು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಸಾಧಿಸಲು ಯುವ ಮನಸ್ಸುಗಳು, ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಇದು ಒಂದು ಅವಕಾಶವಾಗಿರುತ್ತದೆ. ಅಭಿವೃದ್ಧಿ ಅಧ್ಯಯನಗಳು /ನಿರ್ವಹಣೆ /ದತ್ತಾಂಶ ವಿಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆ / ಆರೋಗ್ಯ ನಿರ್ವಹಣೆ/ ಸಾಮಾಜಿಕ ಅಂಕಿಅಂಶಗಳು /ಅನ್ವಯಿಕ ಅಂಕಿಅಂಶಗಳು /ಅರ್ಥಶಾಸ್ತ್ರ ಮತ್ತು ಇತರೆ

ಸಂಬಂಧಿತ ಅಧ್ಯಯನಗಳಲ್ಲಿ ಉತ್ತಮ ಶೈಕ್ಷಣಿಕ ದಾಖಲೆಯ ಹಿನ್ನೆಲೆವುಳ್ಳ ವಿದ್ಯಾರ್ಥಿಗಳನ್ನು ಇದಕ್ಕಾಗಿ ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿರುತ್ತದೆ. ಇಂಟರ್ನ್‌ಶಿಪ್ ವೇತನರಹಿತ ಆಧಾರದಲ್ಲಿರುತ್ತದೆ. ಆದರೂ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಸರ್ಕಾರದ ಅಧಿಕಾರಿಗಳು/ ಪ್ರಖ್ಯಾತ ಸಂಶೋಧಕರು ಮತ್ತು ಶಿಕ್ಷಣ ತಜ್ಞರುಗಳೊಂದಿಗೆ ಕೆಲಸ ಮಾಡಲು ಅವಕಾಶವಿರುತ್ತದೆ. ಅವರು ಆರರಿಂದ ಎಂಟು ವಾರಗಳವರೆಗೆ ಅವರಿಗೆ ನೀಡಲಾದ ನಿಯೋಜನೆಯಲ್ಲಿ ಆನ್‌ಲೈನ್ ಮೂಲಕ ಕೆಲಸ ಮಾಡುತ್ತಿದ್ದಾರೆ. ಅವರ ಅಮೂಲ್ಯ ಕೊಡುಗೆಗಾಗಿ ಅವರಿಗೆ ಪ್ರಮಾಣಪತ್ರ ನೀಡಲಾಗುವುದು. ಈ ಕಾರ್ಯಕ್ರಮವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಂಯೋಜಿಸಿರುತ್ತದೆ.

ಇದಕ್ಕಾಗಿ ಸುಮಾರು 460 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ ಮತ್ತು ಈ ಅಭ್ಯರ್ಥಿಗಳನ್ನು ವಿವಿಧ ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಪರಿಚಯಿಸಲಾಗಿರುತ್ತದೆ ಹಾಗೂ 2020ರ ಮೇ–ಜೂನ್ ಅವಧಿಯಲ್ಲಿ ಅಂತರ್ಜಾಲದಲ್ಲಿ ವಿಚಾರಸಂಕಿರಣಗಳನ್ನು ಆಯೋಜಿಸುವ ಮೂಲಕ ಕೋವಿಡ್–19ರ ಸಂದರ್ಭದಲ್ಲಿ ಅವುಗಳನ್ನು ಸಾಧಿಸುವ ಗುರಿ ಮತ್ತು ಕಾರ್ಯತಂತ್ರಗಳನ್ನು ಪರಿಚಯಿಸಲಾಗಿರುತ್ತದೆ. ಅವರು ವಿವಿಧ ಕ್ಷೇತ್ರಗಳ


ತಜ್ಞರೊಂದಿಗೆ ಸಂವಹನ ನಡೆಸಿರುತ್ತಾರೆ. ಅವರು ಪ್ರಸ್ತುತ ವಿವಿಧ ಇಲಾಖೆಗಳಲ್ಲಿ ವಿವಿಧ ಯೋಜನೆಗಳಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

# 6. ಮೌಲ್ಯಮಾಪನ ಅಧ್ಯಯನಗಳು

## ಆರಂಭದಿಂದ ಕೈಗೊಂಡ ಮೌಲ್ಯಮಾಪನ ಅಧ್ಯಯನಗಳು

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನಡೆಸಿದ ಅಧ್ಯಯನಗಳ ಕುರಿತಾದ ರೇಖಾಚಿತ್ರವು 2011–12ರಲ್ಲಿ 3 ಅಧ್ಯಯನಗಳಿಂದ 2019–20ರಲ್ಲಿ 18 ಅಧ್ಯಯನಗಳಿಗೆ ಏರುತ್ತಿರುವ ಪ್ರವೃತ್ತಿಯನ್ನು ತೋರಿಸುತ್ತಿದೆ. ದತ್ತಾಂಶವನ್ನು ಪಡೆಯುವಲ್ಲಿನ ವಿಳಂಬ ಮತ್ತು ಹಲವಾರು ಹಂತಗಳಲ್ಲಿನ ಗುಣಮಟ್ಟದ ತಪಾಸಣೆಯು ವರ್ಷಗಳಲ್ಲಿ ಅಧ್ಯಯನಗಳ ಸಂಖ್ಯೆಯಲ್ಲಿ ಶೀಘ್ರ ಹೆಚ್ಚಳಕ್ಕೆ ತಡೆಯನ್ನು ನೀಡಿರುತ್ತದೆ. ಪ್ರಸ್ತುತ 54 ಅಧ್ಯಯನಗಳು ನಡೆಯುತ್ತಿದ್ದು, ವಿವಿಧ ಹಂತದ ಪ್ರಗತಿಯಲ್ಲಿವೆ.

| ವರ್ಷ | ಅಧ್ಯಯನಗಳ ಸಂಖ್ಯೆ |
|---|---|
| 2011-12 | 3 |
| 2012-13 | 17 |
| 2013-14 | 16 |
| 2014-15 | 14 |
| 2015-16 | 10 |
| 2016-17 | 30 |
| 2017-18 | 23 |
| 2018-19 | 13 |
| 2019-20 | 18 |
| **ಒಟ್ಟು** | **144** |


ಅಧ್ಯಯನಗಳ ಸಂಖ್ಯೆ
35
30
25
20
15
10
5
0
2011-12
2012-13
2013-14
2014-15
2015-16
2016-17
2017-18
2018-19
2019-20

# 2019–20ರ ಅವಧಿಯಲ್ಲಿ ನಡೆಸಿದ ಅಧ್ಯಯನಗಳ ನೋಟಗಳು

## ಕರ್ನಾಟಕ ರಾಜ್ಯದಲ್ಲಿ 2017–18ರ ಅವಧಿಯಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಏಜನ್ಸಿ (ATMA) ಯೋಜನೆಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ – ಭಾಗ –1 ಮತ್ತು 11

ವಿಸ್ತರಣೆ ಮತ್ತು ಅಭಿವೃದ್ಧಿಯಲ್ಲಿ ದಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಹೊರ ತರಲು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ವಿಸ್ತರಣಾ ಕಾರ್ಯಕ್ರಮಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಕೃಷಿ ತಂತ್ರಜ್ಞಾನ



ನಿರ್ವಹಣಾ ಏಜನ್ಸಿಯು ಒಂದು ವ್ಯವಸ್ಥೆಯಾಗಿರುತ್ತದೆ. ಕೃಷಿ ತಂತ್ರಜ್ಞಾನ ನಿರ್ವಹಣಾ ಏಜನ್ಸಿ ಯೋಜನೆಯು ಪ್ರದರ್ಶನಗಳು, ಕ್ಷೇತ್ರ ಭೇಟಿಗಳು, ತರಬೇತಿಗಳು, ಪ್ರಾಯೋಗಿಕ ಭೇಟಿಗಳು, ರೈತ ಗೋಷ್ಠಿಗಳು, ಫಾರ್ಮ್ ಶಾಲೆಗಳು ಮುಂತಾದ ಸುಧಾರಿತ ವಿಸ್ತರಣಾ ಚಟುವಟಿಕೆಗಳಿಗೆ ಕಾರಣವಾಗಿದ್ದು, ಸುಸ್ಥಿರತೆ ಮತ್ತು ಆರ್ಥಿಕ ಪ್ರಯೋಜನಗಳಲ್ಲಿನ ಸುಧಾರಣೆಯೊಂದಿಗೆ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಸಮುದಾಯದ ಗಣನೀಯ ಸಾಮರ್ಥ್ಯ ವೃದ್ಧಿಗೆ ಕಾರಣವಾಗಿರುತ್ತದೆ. ಹೆಚ್ಚಿನ ಜಿಲ್ಲೆಗಳಲ್ಲಿ, ನವಣೆ, ಸಾಮೆ, ಹಾರಕ, ಮುಂತಾದ ಸಿರಿಧಾನ್ಯಗಳನ್ನು ಪರಿಚಯಿಸಲು ಅದು ಪ್ರಯತ್ನಿಸಿದ್ದು, ಪೌಷ್ಠಿಕಾಂಶದ ಸುರಕ್ಷತೆಯ ಜೊತೆಗೆ ಬರವನ್ನು ತಪ್ಪಿಸಲು/ ತಗ್ಗಿಸಲು ಆಹಾರ ಸುರಕ್ಷತಾ ಕ್ರಮಗಳನ್ನು ಹೊಂದಿರುತ್ತದೆ. ಕೃಷಿ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಮೀನುಗಾರಿಕೆ ಹಾಗೂ ಅರಣ್ಯವಲಯವನ್ನು ಒಳಗೊಂಡಿರುವ ಸುಮಾರು 129 ಯಶೋಗಾಥೆಗಳನ್ನು ಸಿದ್ಧಪಡಿಸಲಾಗಿರುತ್ತದೆ. ಯಶೋಗಾಥೆಗಳಿಂದ ಕಂಡುಬಂದಂತೆ, ಸಮಗ್ರ ಕೃಷಿ ವ್ಯವಸ್ಥೆಯ ತಂತ್ರಜ್ಞಾನವು ರೈತರ ಆದಾಯವನ್ನು ಸುಸ್ಥಿರ ರೀತಿಯಲ್ಲಿ ಉತ್ಪಾದಿಸುವಲ್ಲಿ ಯಶಸ್ವಿಯಾಗಿರುತ್ತದೆ.



ಬೆಂಗಳೂರು ಮತ್ತು ಕಲಬುರಗಿ ಕಂದಾಯ ವಿಭಾಗಗಳಿಗೆ ಹೋಲಿಸಿದರೆ ಬೆಳಗಾವಿ ಮತ್ತು ಮೈಸೂರು ಕಂದಾಯ ವಿಭಾಗಗಳ ಒಟ್ಟಾರೆ ಕಾರ್ಯಕ್ಷಮತೆಯು ಸಾಕಷ್ಟು ಉತ್ತಮವಾಗಿದೆ. ಹೆಚ್ಚಿನ ಕಾರ್ಯಕ್ಷಮತೆಯ ಜಿಲ್ಲೆಗಳು ಭಾಗ 1ರಲ್ಲಿ ಹಾಗೂ ಕಡಿಮೆ ಕಾರ್ಯಕ್ಷಮತೆ ಜಿಲ್ಲೆಗಳು ಭಾಗ 11ರಲ್ಲಿ ಹೆಚ್ಚಾಗಿ ಇರುತ್ತವೆ (ಬೆಂಗಳೂರು ಮತ್ತು ಕಲಬುರಗಿ ಕಂದಾಯ ವಿಭಾಗಗಳು). ಇದು ಹೆಚ್ಚಿನ ಪ್ರದೇಶವು ಮಳೆ ಬೀಳುವ

ಪ್ರದೇಶದಲ್ಲಿರುವ ಕಾರಣದಿಂದಿರಬಹುದು. ಅನೇಕ ಜಿಲ್ಲೆಗಳಲ್ಲಿ ಕ್ಷೇತ್ರ ಕಾರ್ಯನಿರ್ವಹಣೆ ಮತ್ತು ದಾಖಲಾತಿ ಉತ್ತಮವಾಗಿದೆ. ಕೆಲವು ಪ್ರಮುಖ ಶಿಫಾರಸ್ಸುಗಳೆಂದರೆ: ಕೃಷಿ ಬೆಳೆಗಳು, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಪಶುಸಂಗೋಪನೆ ಇತ್ಯಾದಿಗಳ ಉತ್ಪಾದಕತೆಯ ವರ್ಧನೆಗೆ ಸಂಬಂಧಿಸಿದಂತೆ ಒಣ ಭೂಮಿ ತಂತ್ರಜ್ಞಾನವನ್ನು ಬಲಪಡಿಸುವ ಅವಶ್ಯಕತೆಯು ಸಂಬಂಧಿಸಿದ ಇಲಾಖೆಗಳಿಗೆ ಅನುದಾನವನ್ನು ಸಕಾಲಿಕವಾಗಿ ಬಿಡುಗಡೆ ಮಾಡುವುದನ್ನು ಖಚಿತಪಡಿಸುತ್ತದೆ. ದಾಖಲೆಗಳ ಪ್ರಕ್ರಿಯೆಗಾಗಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯ ಸಿಬ್ಬಂದಿಗಳ ಸಾಮರ್ಥ್ಯ ವೃದ್ಧಿಪಡಿಸಿ ಅವರಿಗೆ ಪ್ರೋತ್ಸಾಹ ಧನಗಳನ್ನು ಸಾಂಸ್ಥಿಕಗೊಳಿಸಬೇಕಾಗಿರುತ್ತದೆ. ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯ ಅಡಿಯಲ್ಲಿ ಮಹಿಳೆಯರಲ್ಲದೆ ಹೆಚ್ಚಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ರೈತರಿಗೆ ಸ್ಥಳಾವಕಾಶ ಕಲ್ಪಿಸಲು ಬಹುತೇಕ ಜಿಲ್ಲೆಗಳಲ್ಲಿ ರೈತ ಕೊಡುಗೆಗಳನ್ನು ಬಲಪಡಿಸುವ ಅಗತ್ಯವಿದೆ, ವಿಶೇಷವಾಗಿ ಪ್ರದರ್ಶನಗಳಿಗಾಗಿ ಮತ್ತು ಕ್ಷೇತ್ರ ಮಟ್ಟದಲ್ಲಿ ತಂತ್ರಜ್ಞಾನಗಳ ವರ್ಗಾವಣೆಯನ್ನು ತಲುಪಿಸಲು ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯ ಸಿಬ್ಬಂದಿಗೆ ಸ್ವಾಯತ್ತತೆ ಅಗತ್ಯವಿದೆ.

## ಕರ್ನಾಟಕದಲ್ಲಿ ಸ್ವ ಸಹಾಯ ಗುಂಪುಗಳ ಮೇಲೆ ಅನಾಣ್ಯೀಕರಣದ ಪರಿಣಾಮಗಳ ಮೌಲ್ಯಮಾಪನ

2016ರ ನವೆಂಬರ್ 8 ರಂದು ಕರೆನ್ಸಿಯ ಅನಾಣ್ಯೀಕರಣದ ಪರಿಣಾಮ ಮತ್ತು ನಂತರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಸ್ವಸಹಾಯ ಗುಂಪುಗಳ ಮೇಲೆ ಉಂಟಾದ



ದ್ರವ್ಯತೆಯ ಬಿಕ್ಕಟ್ಟಿನ ಪರಿಣಾಮವನ್ನು ನಿರ್ಣಯಿಸಲು ಈ ಅಧ್ಯಯನವನ್ನು ಪ್ರಾರಂಭಿಸಲಾಯಿತು. ಅಧ್ಯಯನದ ಆವಿಷ್ಕಾರಗಳು ಕರ್ನಾಟಕ ರಾಜ್ಯದ ಬೆಂಗಳೂರು ನಗರ ಮತ್ತು ಕಲಬುರಗಿ ಈ ಎರಡು ಜಿಲ್ಲೆಗಳ 111 ಸ್ವಸಹಾಯ ಗುಂಪುಗಳ ಶ್ರೇಣೀಕೃತ ಯಾದೃಚ್ಛಿಕ ಮಾದರಿಯನ್ನು ಆಧರಿಸಿವೆ. ನಗದು ಬಿಕ್ಕಟ್ಟಿನಿಂದಾಗಿ ತಮ್ಮ ವಹಿವಾಟುಗಳನ್ನು ನಿಷ್ಕ್ರಿಯತೆಗೆ ತಳ್ಳಿದ ಕಾರಣ ಅನಾಣ್ಯೀಕರಣವು ಉತ್ತಮವಾಗಿಲ್ಲ ಎಂದು ಮಹಿಳಾ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಹಣಪಾವತಿ ಮತ್ತು ಗೃಹೋಪಯೋಗಿ ಖರೀದಿಗಳನ್ನು ಮುಂದೂಡಬೇಕಾಯಿತು. ಬೆಂಗಳೂರು ನಗರ ಜಿಲ್ಲೆಗಿಂತ ಕಲಬುರಗಿಯ ಗ್ರಾಮೀಣ ಪ್ರದೇಶಗಳಲ್ಲಿ ಇದರ ಪರಿಣಾಮ ಹೆಚ್ಚು ಆಗಿರುತ್ತದೆ ಆದಾಗ್ಯೂ, ಅಧ್ಯಯನದ ಸೀಮಿತ ವ್ಯಾಪ್ತಿ ಮತ್ತು ದತ್ತಾಂಶ ಮಿತಿಗಳಿಂದಾಗಿ

ಫಲಿತಾಂಶಗಳನ್ನು ಎಚ್ಚರಿಕೆಯಿಂದ ವ್ಯಾಖ್ಯಾನಿಸಬೇಕಾಗಿರುತ್ತದೆ. ಹಣಕಾಸಿನ ಸಾಕ್ಷರತೆ ಮತ್ತು ಡಿಜಿಟಲ್ ಪಾವತಿ ವ್ಯವಸ್ಥೆಗಳ ಪ್ರಚಾರವನ್ನು ಅಧ್ಯಯನವು ಸಲಹೆ ಮಾಡಿದ್ದು, ಅದು ಅಂತಹ ನೀತಿ ಬದಲಾವಣೆಯ ತಕ್ಷಣದ ಪ್ರತಿಕೂಲ ಪರಿಣಾಮಗಳನ್ನು ನಿಯಂತ್ರಿಸಲು ಸಹಾಯ ಮಾಡುವುದಲ್ಲದೆ ನಗದು ರಹಿತ ಆರ್ಥಿಕತೆಯತ್ತ ಸಾಗಲು ಸಹ ಸಹಾಯ ಮಾಡುತ್ತದೆ.

## ಕರ್ನಾಟಕದ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ ಅನಾಣ್ಯೀಕರಣದ ಪರಿಣಾಮದ ಮೌಲ್ಯಮಾಪನ.

ಅನಾಣ್ಯೀಕರಣದ ತ್ವರಿತ ಪರಿಣಾಮ ಮತ್ತು ಸಣ್ಣ ಉದ್ಯಮದ ಮಾಲೀಕರು ಅಳವಡಿಸಿಕೊಂಡ ನಿಭಾಯಿಸುವ ತಂತ್ರಗಳನ್ನು ಅರ್ಥಮಾಡಿಕೊಳ್ಳಲು 'ಕರ್ನಾಟಕದ ಸಣ್ಣ ಪ್ರಮಾಣದ ಕೈಗಾರಿಕೆಗಳ ಮೇಲೆ





ಅನಾಣ್ಯೀಕರಣದ ಪರಿಣಾಮಗಳ ಮೌಲ್ಯಮಾಪನ' ಕುರಿತು ಅಧ್ಯಯನವನ್ನು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮವು ಕರ್ನಾಟಕ

ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಪ್ರಾರಂಭಿಸಿರುತ್ತದೆ. ಈ ಅಧ್ಯಯನವು ರಾಜ್ಯದ ಬೆಂಗಳೂರು (ನಗರ) ಮತ್ತು ಕಲಬುರಗಿ ಜಿಲ್ಲೆಗಳಿಂದ ಪಡೆದ 235 ಘಟಕಗಳ ಸಣ್ಣ ಮಾದರಿಯನ್ನು ಆಧರಿಸಿರುತ್ತದೆ. ಅಧ್ಯಯನದ ಫಲಿತಾಂಶಗಳು 93 ಪ್ರತಿಶತದಷ್ಟು ಮಾದರಿ ಪ್ರತಿಕ್ರಿಯೆದಾರರಿಗೆ ಇದು ಅನಿರೀಕ್ಷಿತ ಮತ್ತು ಹಠಾತ್ ಬದಲಾವಣೆ ಎಂಬುದನ್ನು ಸೂಚಿಸಿರುತ್ತವೆ. ನಗದು ಅಲಭ್ಯತೆಯು ಸಂಬಳ ಮತ್ತು ಕಾರ್ಮಿಕರ ಕೂಲಿ ಪಾವತಿ ಮತ್ತು ಒಳಹರಿವಿನ ಖರೀದಿಯ ಮೇಲೆ ಬಾಧಿತವಾಗಿರುತ್ತದೆ. ಗ್ರಾಮೀಣ ಪ್ರದೇಶವಾಗಿರುವ ಕಲಬುರಗಿ ಜಿಲ್ಲೆಯ 70 ಪ್ರತಿಶತ ಮಾದರಿ ಘಟಕಗಳಲ್ಲಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಿರುತ್ತದೆ. ಸಣ್ಣ ಉದ್ಯಮಿಗಳು ನಗದು ಹಿಂಪಡೆಯಲು ಬ್ಯಾಂಕುಗಳಲ್ಲಿ ಸಮಸ್ಯೆಗಳನ್ನು ಎದುರಿಸಿರುತ್ತಾರೆ. ಕೈಯಲ್ಲಿರುವ ಹಣವನ್ನು ಬಳಸುವುದು ಅಥವಾ ಸ್ನೇಹಿತರು ಮತ್ತು ಸಂಬಂಧಿಕರಿಂದ ಎರವಲು ಪಡೆಯುವುದು ಮತ್ತು ಪಾವತಿಗಳನ್ನು ಮುಂದೂಡುವುದು ಈ ಪರಿಸ್ಥಿತಿಯನ್ನು ನಿಭಾಯಿಸುವ ತಂತ್ರವಾಗಿತ್ತು. ನಗದು ರಹಿತ ಆರ್ಥಿಕತೆಯತ್ತ ಸುರಕ್ಷಿತ ಚಲನೆಗಾಗಿ ಸಾಕಷ್ಟು ಭದ್ರತಾ ಕ್ರಮಗಳೊಂದಿಗೆ ಎಲೆಕ್ಟ್ರಾನಿಕ್ ವಿಧಾನಗಳಲ್ಲಿ ಪಾವತಿಗಳನ್ನು ಉತ್ತೇಜಿಸಲು ಮತ್ತು ಅಂತಹ ದುರ್ಬಲತೆಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಲು ಸಣ್ಣ ಪ್ರಮಾಣದ

ಕೈಗಾರಿಕೆಗಳಿಗೆ ಹಣಕಾಸಿನ ನೆರವನ್ನು ಹೆಚ್ಚಿಸಲು ಈ ಅಧ್ಯಯನವು ಸೂಚಿಸಿರುತ್ತದೆ.

## ಕರ್ನಾಟಕದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಕಾರ್ಯಕ್ರಮದಡಿ, ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಪ್ರಾರಂಭವಾದಾಗಿನಿಂದ ಅದರ ಮೂಲಕ ಫಲಾನುಭವಿಗಳಿಗೆ (ಕಾರ್ಮಿಕರು ಮತ್ತು ಸರಬರಾಜುದಾರರಿಗೆ) ವೇತನ ಮತ್ತು ಸಾಮಗ್ರಿಗಳ ಪಾವತಿಗಳಿಂದಾದ ಪರಿಣಾಮದ ಮೌಲ್ಯಮಾಪನ

2012–13ರಲ್ಲಿ ಪರಿಚಯಿಸಲಾದ ಮಾಹಿತಿ ನಿರ್ವಹಣಾ ವ್ಯವಸ್ಥೆ ಆಧಾರಿತ ವಿದ್ಯುನ್ಮಾನ ನಿಧಿ ನಿರ್ವಹಣಾ ವ್ಯವಸ್ಥೆಯು ಕೂಲಿ ಪಾವತಿ ವ್ಯವಸ್ಥೆಯಲ್ಲಿ ಒಂದು ದೊಡ್ಡ ಜಿಗಿತವಾಗಿರುತ್ತದೆ. ಈ ವ್ಯವಸ್ಥೆಯ ಕಾರ್ಯವೈಖರಿ ಮತ್ತು ಪಾವತಿಗಳ ದಕ್ಷತೆಯನ್ನು ಸುಧಾರಿಸುವಲ್ಲಿ ಅದರ ಪರಿಣಾಮ ಮತ್ತು ಅಂತಿಮವಾಗಿ ಕಾರ್ಮಿಕರಿಗೆ ಅವರ ಕೂಲಿಯನ್ನು ಸಮಯಕ್ಕೆ ಸರಿಯಾಗಿ ಪಡೆಯಲು ಸಹಾಯ ಮಾಡುವುದರ ಬಗ್ಗೆ ಕ್ಷೇತ್ರ ಮಟ್ಟದ ಸಾಕ್ಷ್ಯಗಳನ್ನು ಪಡೆಯಲು ಹೊಸ ವ್ಯವಸ್ಥೆಯ ಮೌಲ್ಯಮಾಪನವನ್ನು ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್ ಇಲಾಖೆಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಪ್ರಾರಂಭಿಸಿರುತ್ತದೆ.

ಅಧ್ಯಯನದ ಆವಿಷ್ಕಾರಗಳು ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ಎಂಟು ಜಿಲ್ಲೆಗಳ 4301 ಕಾರ್ಮಿಕರ ಯಾದೃಚ್ಛಿಕ ಶ್ರೇಣೀಕೃತ ಮಾದರಿಯಿಂದ ಸಂಗ್ರಹಿಸಲಾದ ಪ್ರಾಥಮಿಕ ದತ್ತಾಂಶವನ್ನು ಆಧರಿಸಿರುತ್ತವೆ. ಈ ವ್ಯವಸ್ಥೆಯ ಕಾರ್ಯವೈಖರಿಯ ಬಗ್ಗೆ ಒಳನೋಟಗಳನ್ನು ಪಡೆಯಲು ಇತರ



ಪಾಲುದಾರರು– ವಸ್ತು ಪೂರೈಕೆದಾರರು, ಚುನಾಯಿತ ಪ್ರತಿನಿಧಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಸಹ ಸಂದರ್ಶಿಸಲಾಗಿರುತ್ತದೆ. ಕೂಲಿಯನ್ನು ಪಾವತಿಸುವಲ್ಲಿ ಯಾವುದೇ ವಿಳಂಬವಾಗಿಲ್ಲವೆಂದು ಮತ್ತು ಹಣ ತಡೆಹಿಡಿಯುವಿಕೆಯು ಕಡಿಮೆಯಾಗಿದೆ ಎಂದು 75 ಪ್ರತಿಶತದಷ್ಟು ಕಾರ್ಮಿಕರು ವರದಿ ಮಾಡಿದ್ದರಿಂದ ಈ ಕಾರ್ಯಕ್ರಮದ ಉದ್ದೇಶಗಳು ಹೆಚ್ಚಾಗಿ ಸಾಧಿಸಲ್ಪಟ್ಟಿರುವುದನ್ನು ಪ್ರಮುಖ ಆವಿಷ್ಕಾರಗಳು ಸೂಚಿಸಿರುತ್ತವೆ. ಪೂರ್ವನಿಧಿ ವರ್ಗಾವಣೆ ಆದೇಶಗಳ (FTO) ವಹಿವಾಟಿನಲ್ಲಿ ವಿಳಂಬಗಳು ಮುಖ್ಯವಾಗಿ ಕಂಡುಬಂದಿರುತ್ತವೆ. ಬ್ಯಾಂಕುಗಳಿಗೆ ಭೇಟಿ ನೀಡುವವರ ಸಂಖ್ಯೆ ಕಡಿಮೆಯಾಗಿದ್ದು, ತನ್ಮೂಲಕ ಸಮಯ ಮತ್ತು ಶಕ್ತಿಯ

ಉಳಿತಾಯವಾಗಿರುತ್ತದೆ. ಸಮಯೋಚಿತ ಕೂಲಿ ಪಾವತಿಯಿಂದಾಗಿ ಕೆಲಸ ಅಂಗೀಕರಿಸುವ ದರವು ಉತ್ತೇಜಿಸಲ್ಪಟ್ಟಿರುತ್ತದೆ. ಸೇವೆಗಳನ್ನು ಪಡೆಯುವಲ್ಲಿ ಲಿಂಗ ವ್ಯತ್ಯಾಸಗಳು ಗಮನಾರ್ಹವಾಗಿಲ್ಲ. ಆದಾಗ್ಯೂ, ಮಧ್ಯವರ್ತಿಗಳ ಉಪಸ್ಥಿತಿಯನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಾಗಿಲ್ಲ. ಮತ್ತೊಂದೆಡೆ, ವಸ್ತು ಪೂರೈಕೆದಾರರು ಹೊಸ ವ್ಯವಸ್ಥೆಗೆ ಹೊಂದಿಕೊಂಡಿರುವುದಿಲ್ಲ. ಪೂರ್ವನಿಧಿ ವರ್ಗಾವಣೆ ವಹಿವಾಟುಗಳು, ಬ್ಯಾಂಕ್ ತಿರಸ್ಕರಿಸಿದ ಅಥವಾ ವಿಳಂಬವಾದ ಪಾವತಿಗಳ ಕುರಿತು ಸ್ವಯಂಚಾಲಿತ ಎಚ್ಚರಿಕೆಗಳು, ಹಕ್ಕುಗಳ ತಿರಸ್ಕಾರಕ್ಕೆ ಕಾರಣಗಳು ಮತ್ತು ಸಲ್ಲಿಸಿದ ಹಕ್ಕುಗಳ ಸ್ಥಿತಿ ಇತ್ಯಾದಿಗಳನ್ನು ಸುಗಮಗೊಳಿಸುವುದು, ಪಂಚಾಯತ್ ಅಧಿಕಾರಿಗಳ ಸಾಮರ್ಥ್ಯವನ್ನು ವೃದ್ಧಿಪಡಿಸುವುದು, ಕಾರ್ಮಿಕರ ಆರ್ಥಿಕ ಸಾಕ್ಷರತೆಯನ್ನು ಉತ್ತೇಜಿಸುವುದು ಮತ್ತು ಸಕಾಲ ಸೇವೆಗಳ ಅಡಿಯಲ್ಲಿ ಕುಂದುಕೊರತೆಗಳ ಒಂದು ಔಪಚಾರಿಕ ನೋಂದಣಿ ವ್ಯವಸ್ಥೆಯನ್ನು ತರುವುದು ಈ ಅಧ್ಯಯನದ ಪ್ರಮುಖ ಶಿಫಾರಸ್ಸುಗಳಾಗಿರುತ್ತವೆ.

## ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಬಾಲಕರು ಮತ್ತು ಬಾಲಕಿಯರಿಗಾಗಿ ಜಾರಿಯಾಗಿರುವ ಶುಚಿ ಸಂಭ್ರಮ ಕಿಟ್ ಯೋಜನೆಯ ಮೌಲ್ಯಮಾಪನ



ಮಕ್ಕಳಲ್ಲಿ ವೈಯಕ್ತಿಕ ನೈರ್ಮಲ್ಯವನ್ನು ಉತ್ತೇಜಿಸಲು, ಸಮಾಜ ಕಲ್ಯಾಣ ಇಲಾಖೆಯು 'ಶುಚಿ ಸಂಭ್ರಮ ಕಿಟ್' ಎಂಬ ಯೋಜನೆಯನ್ನು ಪ್ರಾರಂಭಿಸಿದ್ದು, ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ 2015-16 ರಿಂದ ನೈರ್ಮಲ್ಯ ಕಿಟ್ ಪೂರೈಸಲು ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ಸ್ ಲಿಮಿಟೆಡ್‌ಗೆ ಜವಾಬ್ದಾರಿಯನ್ನು ವಹಿಸಲಾಗಿರುತ್ತದೆ. ಈ ಯೋಜನೆಯ ಪರಿಣಾಮವನ್ನು ತಿಳಿಯಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಸಮಾಜ ಕಲ್ಯಾಣ ಇಲಾಖೆಯಿಂದ ಈ ಯೋಜನೆಯ ಮೌಲ್ಯಮಾಪನವನ್ನು ಪ್ರಾರಂಭಿಸಲಾಯಿತು. ಅಧ್ಯಯನವು ಪ್ರಾಥಮಿಕ ಮತ್ತು ದ್ವಿತೀಯಕ ದತ್ತಾಂಶಗಳನ್ನು ಆಧರಿಸಿದೆ. ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಒಂಬತ್ತು ಜಿಲ್ಲೆಗಳ 262 ಮೆಟ್ರಿಕ್ ಪೂರ್ವ ಮತ್ತು 101



ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ 7600 ವಿದ್ಯಾರ್ಥಿಗಳ ದೊಡ್ಡ ಮಾದರಿಯಿಂದ ಪ್ರಾಥಮಿಕ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಈ ಅಧ್ಯಯನದ ಪ್ರಮುಖ ಆವಿಷ್ಕಾರಗಳು: ವೈಯಕ್ತಿಕ ನೈರ್ಮಲ್ಯದ ಬಗ್ಗೆ ಹೆಚ್ಚಾದ ಅರಿವು (ಮಾದರಿಯ 94.2%) ಮತ್ತು ಕಿಟ್‌ನ ಪೂರೈಕೆ ಮತ್ತು ಬಳಕೆಯಲ್ಲಿನ ಕ್ರಮಬದ್ಧತೆ, ವೈದ್ಯರ ಭೇಟಿಗಳ ಸಂಖ್ಯೆಯಲ್ಲಿನ ಇಳಿಕೆ, ಹೆಚ್ಚಿರುವ ಸ್ವಾಸ್ಥ್ಯ ಭಾವನೆ ಮತ್ತು ಸಾಮಾನ್ಯ ಆರೋಗ್ಯ ಪರಿಸ್ಥಿತಿಗಳಲ್ಲಿನ ಸುಧಾರಣೆಯಲ್ಲಿ ಈ ಯೋಜನೆಯ ಪರಿಣಾಮವನ್ನು ಗಮನಿಸಲಾಗಿದೆ. ಈ ವಿದ್ಯಾರ್ಥಿಗಳ ಮನೆಗಳಿಗೂ ಸಹಾ ನೈರ್ಮಲ್ಯದ ಅರಿವಿನ ಸಂದೇಶವು ತಲುಪಿದೆ ಎಂಬ ಅಂಶವನ್ನು ಗಮನಿಸಲಾಗಿರುತ್ತದೆ. ಕಿಟ್‌ನಲ್ಲಿರುವ



ಸಾಬೂನು ಮತ್ತು ಎಣ್ಣೆಯ ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಟಾಲ್ಕಮ್ ಪೌಡರ್, ಶಾಂಪೂ, ಮೆಡಿಕೇರ್ ಮುಂತಾದ ಕೆಲವು ಹೆಚ್ಚುವರಿ ವಸ್ತುಗಳನ್ನು ಕಿಟ್‌ನಲ್ಲಿ ಸೇರಿಸುವುದು. ನಿಯಮಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸುವುದು, 104 ಆರೋಗ್ಯ ಸಹಾಯವಾಣಿಯ ಬಗ್ಗೆ ಮಾಹಿತಿ ನೀಡುವುದು, ಕಿಟ್ಟಿನ ಗುಣಮಟ್ಟದ ಪರಿಶೀಲನೆ ಕೈಗೊಳ್ಳುವುದು, ಮೂಲಭೂತ ಸೌಕರ್ಯಗಳಲ್ಲಿ ಸುಧಾರಣೆಯನ್ನು ತರುವುದು ಮತ್ತು ಯೋಜನೆಯ ನಿಕಟ ಮೇಲುಸ್ತುವಾರಿ ಮಾಡುವುದು ಇವುಗಳು ಪ್ರಮುಖ ಶಿಫಾರಸ್ಸುಗಳಲ್ಲಿ ಸೇರಿರುತ್ತದೆ. ಇದು ವಿದ್ಯಾರ್ಥಿಗಳ ವೈಯಕ್ತಿಕ ನೈರ್ಮಲ್ಯದ

ಮೇಲೆ ಗಮನಾರ್ಹ ಪರಿಣಾಮ ಬೀರುವುದರಿಂದ ಯೋಜನೆಯನ್ನು ಮುಂದುವರಿಸುವುದು ಸೂಕ್ತವಾಗಿದೆ.

## ಪೌಷ್ಟಿಕಾಂಶ ಪುನರ್ವಸತಿ ಕೇಂದ್ರದ ಕಾರ್ಯನಿರ್ವಹಣೆಯ ಬಗ್ಗೆ–ಕರ್ನಾಟಕದ ಪ್ರದೇಶಗಳಲ್ಲಿ ಒಂದು ತುಲನಾತ್ಮಕ ಅಧ್ಯಯನ

ಅಪೌಷ್ಟಿಕತೆಯು ಮಾನವನ ಅಭಿವೃದ್ಧಿಗೆ ತೊಡಕಾಗಿದ್ದು, ಜೀವನದ



ಆರಂಭದಲ್ಲಿಯೇ ವ್ಯಕ್ತಿಗಳ ಮೇಲೆ ಬದಲಾಯಿಸಲಾಗದ ಹಾನಿಯನ್ನುಂಟು ಮಾಡುತ್ತದೆ ಮತ್ತು ಮುಂದಿನ ವರ್ಷಗಳಲ್ಲಿ ದೇಶಗಳ ಮೇಲೆ ದೊಡ್ಡ ಆರ್ಥಿಕ ಮತ್ತು ಸಾಮಾಜಿಕ ನಷ್ಟಗಳನ್ನು ಹೇರುತ್ತದೆ. ಇದು ದೈಹಿಕ ಮತ್ತು ಅರಿವಿನ ಬೆಳವಣಿಗೆಯನ್ನು ಮಕ್ಕಳಲ್ಲಿ ಕುಗ್ಗಿಸುವುದಲ್ಲದೇ ಅವರ ಜೀವನದಾದ್ಯಂತ ಹೊರೆಯಾಗುತ್ತದೆ. ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ಮತ್ತು ಆರೈಕೆ ನೀಡಲು ಪೌಷ್ಠಿಕಾಂಶ ಪುನರ್ವಸತಿ ಕೇಂದ್ರಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗಿದೆ. ಈ ಪೌಷ್ಠಿಕಾಂಶ ಪುನರ್ವಸತಿ ಕೇಂದ್ರಗಳ ಕಾರ್ಯವೈಖರಿ ಮತ್ತು ಪ್ರಭಾವವನ್ನು ನಿರ್ಣಯಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅಧ್ಯಯನವನ್ನು ಪ್ರಾರಂಭಿಸಲಾಯಿತು. ಪೌಷ್ಠಿಕಾಂಶ

ಪುನರ್ವಸತಿ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದ ಮಕ್ಕಳಲ್ಲಿ ಕೇವಲ ಒಂದು ಸಣ್ಣ ಭಾಗ ಮಾತ್ರ ಸಾಮಾನ್ಯ ತೂಕವನ್ನು ಪಡೆದಿರುತ್ತವೆ (35.4). ಪ್ರವೇಶ ಪಡೆದ ಮಕ್ಕಳ್ಲಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರಿದವರು



40.1%ರಷ್ಟು ಇರುತ್ತಾರೆ. ಬಹುಪಾಲು ಫಲಾನುಭವಿಗಳು (92.5%) ಪೌಷ್ಠಿಕಾಂಶ ಪುನರ್ವಸತಿ ಕೇಂದ್ರಗಳಲ್ಲಿ ನೀಡುವ ಸೇವೆಗಳಿಂದ



ತೃಪ್ತರಾಗಿದ್ದಾರೆ. ಆದರೆ ಕೆಲಸ ಮತ್ತು ಕುಟುಂಬದ ಜವಾಬ್ದಾರಿಗಳೊಂದಿಗೆ ತಾಯಿಯು ತೊಡಗಿಸಿಕೊಂಡಿರುವುದರಿಂದ ಮಕ್ಕಳ ಅನುಸರಣೆ ಮಾಡುವುದು ಕಷ್ಟವಾಗಿರುತ್ತದೆ ಎಂದು ಅಧ್ಯಯನದ ಆವಿಷ್ಕಾರಗಳು ಸೂಚಿಸುತ್ತವೆ. ಈ ಅಧ್ಯಯನದ ಪ್ರಮುಖ ಶಿಫಾರಸ್ಸುಗಳೆಂದರೆ, ತಾಯಂದಿರಲ್ಲಿ ಪೌಷ್ಠಿಕಾಂಶದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ದುರ್ಬಲ ಸಮುದಾಯಗಳನ್ನು ಕೇಂದ್ರೀಕರಿಸಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಮಾಹಿತಿ, ಶಿಕ್ಷಣ ಮತ್ತು ಸಂವಹನ ಘಟಕವನ್ನು (IEC) ಬಲಪಡಿಸಬೇಕು. ಪೌಷ್ಠಿಕಾಂಶ ಪುನರ್ವಸತಿ

ಕೇಂದ್ರಗಳ ಸಿಬ್ಬಂದಿಯ ಜ್ಞಾನ ಮತ್ತು ಕೌಶಲ್ಯದಲ್ಲಿನ ಕೊರತೆಗಳನ್ನು ಸಾಕಷ್ಟು ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣದೊಂದಿಗೆ ತುಂಬಬೇಕು.

ರಾಜ್ಯವು ಕುಟುಂಬದ ಮಟ್ಟದಲ್ಲಿ ಆಹಾರ ಸುರಕ್ಷತೆಯ ಜೊತೆಗೆ ಪೌಷ್ಠಿಕಾಂಶದ ಸುರಕ್ಷತೆಯನ್ನು ಖಾತ್ರಿಪಡಿಸುವ ಪೌಷ್ಠಿಕಾಂಶ ನೀತಿಯನ್ನು ಜಾರಿಗೊಳಿಸಬೇಕು.

## ಕರ್ನಾಟಕದ ನೇರ ಲಾಭ ವರ್ಗಾವಣೆ ಯೋಜನೆಯ ಸ್ಥಿತಿ ಮತ್ತು ಕಾರ್ಯಕ್ಷಮತೆಯ ಅಧ್ಯಯನ

2013 ರ ಜನವರಿ 1 ರಂದು 16 ರಾಜ್ಯಗಳ/ ಕೇಂದ್ರಾಡಳಿತ ಪ್ರದೇಶಗಳ 43 ಜಿಲ್ಲೆಗಳಲ್ಲಿ 26 ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ನೇರ ಲಾಭ ವರ್ಗಾವಣೆಯಲ್ಲಿ ಒಳಪಡಿಸಲು ಯೋಜನೆಯನ್ನು ರೂಪಿಸಲಾಗಿರುತ್ತದೆ. ದಕ್ಷತೆ, ಪರಿಣಾಮಕಾರಿತ್ವ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಲು ಮತ್ತು ಆಡಳಿತದಲ್ಲಿ




ಜನಸಾಮಾನ್ಯರ ವಿಶ್ವಾಸವನ್ನು ತುಂಬಲು ಫಲಾನುಭವಿಯ ಬ್ಯಾಂಕ್ ಖಾತೆಗಳಿಗೆ ನಗದು ರೂಪದ ಬದಲು ವಿದ್ಯುನ್ಮಾನ ವರ್ಗಾವಣೆಯಿಂದ ಹಣ ಪಾವತಿಸಲು ಹಣದ ವ್ಯವಸ್ಥೆಯಲ್ಲಿ ಆದ ಒಂದು ಮಾದರಿ ಬದಲಾವಣೆಯಾಗಿರುತ್ತದೆ. ಯಾವುದೇ ಮಧ್ಯಾವಧಿ ತಿದ್ದುಪಡಿಗಳಿಗೆ

ಪ್ರತಿಕ್ರಿಯೆ ಪಡೆಯಲು ವ್ಯವಸ್ಥೆಯ ಕಾರ್ಯವೈಖರಿಯನ್ನು ಪರೀಕ್ಷಿಸಲು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಹಣಕಾಸು ಇಲಾಖೆಯು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆ ಮತ್ತು ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ ಈ ಎರಡು ಪ್ರಮುಖ ಯೋಜನೆಗಳನ್ನು ಕೇಂದ್ರೀಕರಿಸಿ ಇದರ ಮೌಲ್ಯಮಾಪನವನ್ನು ಪ್ರಾರಂಭಿಸಿತು. ವಿಶ್ಲೇಷಣೆಗಾಗಿ ಪ್ರಾಥಮಿಕ ದತ್ತಾಂಶವನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆ ಅಡಿಯಲ್ಲಿ 2448 ಫಲಾನುಭವಿಗಳುಳ್ಳ ಮತ್ತು ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ ಯೋಜನೆಯಡಿ 2585 ಫಲಾನುಭವಿಗಳುಳ್ಳ ಶ್ರೇಣೀಕೃತ ಯಾದೃಚ್ಚಿಕ ಮಾದರಿಗಳಿಂದ ಸಂಗ್ರಹಿಸಲಾಗಿದೆ. ಅಧ್ಯಯನದ ಆವಿಷ್ಕಾರಗಳು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯಲ್ಲಿ ನೇರ ಲಾಭ ವರ್ಗಾವಣೆಯ ಅಡಿಯಲ್ಲಿ 95 ಪ್ರತಿಶತದಷ್ಟು ಫಲಾನುಭವಿಗಳನ್ನು ಒಳಗೊಂಡಂತೆ ಸಂಪೂರ್ಣ ವ್ಯಾಪ್ತಿಸಿದ್ದು, ಆದರೆ, ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದ ಅಡಿಯಲ್ಲಿ ಇದರ ವ್ಯಾಪ್ತಿಯು ಕೇವಲ 52 ಪ್ರತಿಶತದಷ್ಟಿದೆ. ಇದು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಯೋಜನೆಯ ಅಡಿಯಲ್ಲಿ ಯಾವುದೇ ಕಡಿತವಿಲ್ಲದೆ ಕೂಲಿಯನ್ನು ಸಕಾಲಿಕವಾಗಿ

ಪಾವತಿಸಲು ಅನುಕೂಲ ಮಾಡಿಕೊಟ್ಟಿದೆ. ನೇರ ಲಾಭ ವರ್ಗಾವಣೆಯೊಂದಿಗೆ ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದ ಅಡಿಯಲ್ಲಿ ಸಮಯದ ಅಂತರವನ್ನು ಬ್ಯಾಂಕುಗಳ ಪ್ರಕರಣದಲ್ಲಿ 45 ದಿನಗಳಿಂದ ತಕ್ಷಣ ಪಾವತಿಗೆ ಮತ್ತು ಅಂಚೆ ಕಛೇರಿ ಖಾತೆಯ ಪ್ರಕರಣದಲ್ಲಿ 15–20 ದಿನಗಳವರೆಗೆ ಗಮನಾರ್ಹವಾಗಿ ಕಡಿಮೆ ಮಾಡಲಾಗಿರುತ್ತದೆ. ಇದು ಒಂದು ನಿಜವಾದ ಬದಲಾವಣೆಯಾಗಿರುತ್ತದೆ. ಕೂಲಿ ಹಣವು ಜಮಾ ಆದ ಬಗ್ಗೆ ನಿಗದಿತ ದಿನಾಂಕದಂದು ಎಸ್‌ಎಂಎಸ್ ಎಚ್ಚರಿಕೆಗಳನ್ನು ಫಲಾನುಭವಿಗಳಿಗೆ ಕಳುಹಿಸಬೇಕು. ಕುಂದುಕೊರತೆ ನಿವಾರಣಾ ಕಾರ್ಯವಿಧಾನವು ಸಕಾಲ ಮೋಡ್‌ನಲ್ಲಿ ನೇರ ಲಾಭ ವರ್ಗಾವಣೆಗೆ ರಾಜ್ಯ ಮಟ್ಟದಲ್ಲಿಯೂ ಇರಬೇಕು. ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಮುಖ ಶಿಫಾರಸ್ಸುಗಳು: ಪಿಂಚಣಿ ಪಾವತಿಗೆ ನಿರ್ದಿಷ್ಟ ಸಮಯವನ್ನು ನಿಗದಿಪಡಿಸುವ ಮೂಲಕ ನೇರ ಲಾಭ ವರ್ಗಾವಣೆಯ ಅಡಿಯಲ್ಲಿ ಸಂಪೂರ್ಣವಾಗಿ ತರಬೇಕು. ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಸಾಕಷ್ಟು ನುರಿತ ಮಾನವಶಕ್ತಿಯನ್ನು ತೊಡಗಿಸಿಕೊಳ್ಳಬೇಕು. ಇಎಂವಿ ಚಿಪ್ ಆಧಾರಿತ ರೂಪೆ ಕಾರ್ಡ್ ನೀಡಬಹುದು ಮತ್ತು ಫಲಾನುಭವಿಗಳ ಚಿತ್ರವನ್ನು ಸೆರೆಹಿಡಿಯಬಹುದು ಮತ್ತು ಬ್ಯಾಂಕಿಂಗ್ ಕರೆಸ್ಪಾಂಡೆಂಟ್ ವ್ಯವಸ್ಥೆಯನ್ನು ಬಲಪಡಿಸಬೇಕು.

## ಕರ್ನಾಟಕದ ರಾಷ್ಟ್ರೀಯ ಮಾಹಿತಿ ಕೇಂದ್ರವು ಅಭಿವೃದ್ಧಿಪಡಿಸಿದ ವಿದ್ಯುನ್ಮಾನ ಆಸ್ಪತ್ರೆ ತಂತ್ರಾಂಶದ ಬಳಕೆಯ ಮೌಲ್ಯಮಾಪನ ಅಧ್ಯಯನ

ಆರೋಗ್ಯ ರಕ್ಷಣೆಯ ಗುಣಮಟ್ಟ ಮತ್ತು ದಕ್ಷತೆಯನ್ನು ಹೆಚ್ಚಿಸಲು ಮತ್ತು ಸಮುದಾಯಕ್ಕೆ ಪಾರದರ್ಶಕ ಆರೋಗ್ಯ ಸೇವೆಗಳನ್ನು ಒದಗಿಸಲು, ಸರ್ಕಾರವು ರಾಜ್ಯದಲ್ಲಿ ವಿದ್ಯುನ್ಮಾನ ಆಸ್ಪತ್ರೆ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಯೋಜನೆಯನ್ನು ಆರಂಭದಲ್ಲಿ ಬೆಂಗಳೂರಿನ ಮೂರು ಆಸ್ಪತ್ರೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಯಿತು ಮತ್ತು 2015–16ರಿಂದ ಇದನ್ನು ರಾಜ್ಯದ ಇತರ ಜಿಲ್ಲಾ ಆಸ್ಪತ್ರೆಗಳಿಗೆ ವ್ಯಾಪಿಸಲಾಗಿರುತ್ತದೆ. ತಂತ್ರಾಂಶದ ಅನುಷ್ಠಾನ, ಅದರ ಉಪಯುಕ್ತತೆ ಮತ್ತು ಪ್ರಾಯೋಗಿಕ ಆಸ್ಪತ್ರೆಗಳಲ್ಲಿ ಯಾವುದಾದರೂ ಸಮಸ್ಯೆಗಳನ್ನು ಎದುರಿಸಿದ್ದಲ್ಲಿ ಇವುಗಳ ಒಂದು ಅಧ್ಯಯನವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪ್ರಾರಂಭಿಸಲಾಗಿದೆ.



ಈ ಅಧ್ಯಯನವನ್ನು ತಾಂತ್ರಿಕ, ವ್ಯವಸ್ಥಾಪಕ ಮತ್ತು ದಕ್ಷತೆಯ ಅಂಶಗಳು ಮತ್ತು ಯೋಜನೆಯ ಬಳಕೆಯನ್ನು ಒಳಗೊಂಡಂತೆ ಪ್ರಾಯೋಗಿಕ ಆಸ್ಪತ್ರೆಗಳಲ್ಲಿ ಕೈಗೊಳ್ಳಲಾಗುತ್ತದೆ. ಶೇಕಡಾ 57 ರಷ್ಟು ರೋಗಿಗಳು ವ್ಯವಸ್ಥೆಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದರೂ, ಅವರಿಗೆ ವ್ಯವಸ್ಥೆಯ ಬಗ್ಗೆ ಬಹಳ ಸೀಮಿತ ಅರಿವು ಇರುವುದನ್ನು ಅಧ್ಯಯನದ ಆವಿಷ್ಕಾರಗಳು ಸೂಚಿಸಿರುತ್ತವೆ. ಇದು ರೋಗಿಗಳ ಆರೈಕೆಯಲ್ಲಿ ಅಡ್ಡಿ ಉಂಟುಮಾಡುತ್ತದೆ ಎಂದು ವೈದ್ಯರ ಅಭಿಪ್ರಾಯವಾಗಿರುತ್ತದೆ. ಸಂಸ್ಥೆಗಳಾದ್ಯಂತ ಕೆಲಸದ ಹರಿವಿನ ನಿರ್ವಹಣೆಯಲ್ಲಿ ವ್ಯತ್ಯಾಸಗಳಿವೆ. ತಿಳುವಳಿಕೆಯ ಮಟ್ಟ ಮತ್ತು ಬಳಕೆಯ ಸುಲಭತೆಯು ವಿಭಿನ್ನ ಮಧ್ಯಸ್ಥಗಾರರಲ್ಲಿ ಭಿನ್ನವಾಗಿದೆ ಮತ್ತು ಚಿಕಿತ್ಸಾ ನಿರ್ಧಾರ ತೆಗೆದುಕೊಳ್ಳುವಿಕೆಯು ಸಹ ವ್ಯವಸ್ಥೆಯಿಂದ ಹೆಚ್ಚಾಗಿ ಬೆಂಬಲಿತವಾಗಿರುವುದಿಲ್ಲ. ಸ್ಥಳೀಯ ಅಗತ್ಯಗಳಿಗಾಗಿ ತಂತ್ರಾಂಶವನ್ನು ಉತ್ತಮಗೊಳಿಸಬೇಕಿದೆ. ಮಧ್ಯಸ್ಥಗಾರರ ತರಬೇತಿ ಮತ್ತು ಸಾಮರ್ಥ್ಯ ನಿರ್ಮಾಣ, ಸೂಕ್ತವಾದ ಯಂತ್ರಾಂಶ ವರ್ಧನೆಗಳನ್ನು ಮಾಡುವುದು ಮತ್ತು ಟ್ಯಾಬ್ಲೆಟ್‌ಗಳು ಹಾಗೂ ಸ್ಮಾರ್ಟ್ ಡಿಜಿಟಲ್ ಪೆನ್ ಪರಿಚಯಿಸುವುದು, ಮೊಬೈಲ್ ಅನ್ವಯಿಕೆಗಳನ್ನು ಬಳಸಲು ಫಲಾನುಭವಿಗಳಲ್ಲಿ ಜಾಗೃತಿಯನ್ನು ಮೂಡಿಸುವುದು, ನೋಂದಣಿ ಮತ್ತು ಸಮಾಲೋಚನೆಯಲ್ಲಿ ಸಮಯವನ್ನು ಕಡಿಮೆ ಮಾಡುವುದು ಮತ್ತು ಸಾಮಾನ್ಯ ವೇದಿಕೆಯಲ್ಲಿ

ವಿವಿಧ ಕಾರ್ಯಕ್ರಮಗಳಿಂದ ಇ–ಆರೋಗ್ಯ ವ್ಯವಸ್ಥೆಗಳ ಏಕೀಕರಣವನ್ನು ಖಾತ್ರಿಪಡಿಸುವುದು ಇವುಗಳು ಪ್ರಮುಖ ಶಿಫಾರಸ್ಸುಗಳಾಗಿರುತ್ತವೆ.

## ಕರ್ನಾಟಕ ರಾಜ್ಯದಲ್ಲಿ ಕೃಷಿ ಯಂತ್ರ ಧಾರೆ ಯೋಜನೆಯ (ಕೃಷಿ ಯಾಂತ್ರೀಕರಣ ಮತ್ತು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು) ಮೌಲ್ಯಮಾಪನ






ಕರ್ನಾಟಕ ರಾಜ್ಯವು ಸಾರ್ವಜನಿಕ–ಖಾಸಗಿ ಪಾಲುದಾರಿಕೆ ಮಾದರಿಯಲ್ಲಿ 2014–15ರಿಂದ ಅಲ್ಪ ಮತ್ತು ಸಣ್ಣ ರೈತರ ಕೃಷಿ ಯಾಂತ್ರೀಕರಣದ ಅಡೆತಡೆಗಳನ್ನು ಪರಿಹರಿಸಲು ಮತ್ತು ಸಮಯಕ್ಕೆ ಸರಿಯಾಗಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕರ್ನಾಟಕ ರಾಜ್ಯವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೃಷಿ ಯಂತ್ರ ಧಾರೆ (ಕೃಷಿ ಯಾಂತ್ರೀಕರಣ ಮತ್ತು ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು–CHSC) ಎಂಬ ಪ್ರಮುಖ ಕಾರ್ಯಕ್ರಮವನ್ನು ಪ್ರಾರಂಭಿಸಿರುತ್ತದೆ. ಈ ಮೌಲ್ಯಮಾಪನ ಅಧ್ಯಯನವು ಕರ್ನಾಟಕದ 10 ಕೃಷಿ–ಹವಾಮಾನ

ವಲಯಗಳಿಂದ 3675 ಫಲಾನುಭವಿ ರೈತರು ಮತ್ತು 105 ಫಲಾನುಭವಿಗಳಲ್ಲದ ರೈತರನ್ನು ಒಳಗೊಂಡಿರುತ್ತದೆ. ಅನೇಕ ಫಲಾನುಭವಿ ರೈತರು (97%) ಭೂಮಿಯನ್ನು ಕೃಷಿಗಾಗಿ ಹದಗೊಳಿಸಲು, ಧಾನ್ಯಗಳನ್ನು ಒಕ್ಕುವುದಕ್ಕಾಗಿ ಮತ್ತು ಬಿತ್ತನೆಗಾಗಿ ಕೃಷಿ ಯಂತ್ರೋಪಕರಣಗಳನ್ನು ಬಳಸಿದ್ದಾರೆಂದು ಮೌಲ್ಯಮಾಪನದ ಫಲಿತಾಂಶಗಳು ಸೂಚಿಸಿರುತ್ತವೆ. ಏಕದಳ ಬೆಳೆಗಳ ಉತ್ಪಾದಕತೆಯು ಸರಾಸರಿ 12 ರಿಂದ 15%ರಷ್ಟು ಹಾಗೂ ಮಸೂರ್ ಮತ್ತು ಕಡಲೆಯಂತಹ ದ್ವಿದಳ ಧಾನ್ಯಗಳು ಕ್ರಮವಾಗಿ 40.2% ಮತ್ತು 18.8% ರಷ್ಟು ಹೆಚ್ಚಾಗಿರುತ್ತದೆ. ಸ್ವಸಹಾಯ ಗುಂಪುಗಳ ಸಂಪರ್ಕ ಮತ್ತು ಚಟುವಟಿಕೆಗಳ ವೈವಿಧ್ಯೀಕರಣವು ಮಾದರಿ ಕೇಂದ್ರಗಳಲ್ಲಿ ಗಮನಾರ್ಹ ಅಂಶಗಳಾಗಿ ಹೊರಹೊಮ್ಮಿರುತ್ತದೆ. ಪ್ರಮುಖ ಶಿಫಾರಸ್ಸುಗಳೆಂದರೆ– ಜಿಲ್ಲಾ ಮಾಹಿತಿ ಕೇಂದ್ರವು ಪ್ರತಿವರ್ಷ ಪೂರೈಕೆ ಮತ್ತು ನಿರ್ವಹಣಾ ವೆಚ್ಚಗಳ ಆಧಾರದ ಮೇಲೆ ಬಾಡಿಗೆ ಶುಲ್ಕವನ್ನು ನಿಗದಿಪಡಿಸಬೇಕು. ದರ ಒಪ್ಪಂದದ ಪ್ರಕಾರ ಪಟ್ಟಿಮಾಡಲಾದ ಸರಬರಾಜುದಾರರಿಂದ ಯಂತ್ರೋಪಕರಣಗಳು / ಉಪಕರಣಗಳನ್ನು ಖರೀದಿಸಲು ಸಿಎಚ್‌ಎಸ್‌ಸಿಗಳು ಮುಕ್ತವಾಗಿರಬೇಕು, ಪ್ರತಿ ಹೋಬಳಿಯಲ್ಲಿ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಸೇವಾ ಪೂರೈಕೆದಾರರನ್ನು ಪ್ರೋತ್ಸಾಹಿಸಬೇಕು, ಬಾಡಿಗೆ ಆಧಾರಿತ ಸೇವಾ

ಕೇಂದ್ರಗಳು ದೂರದ ಹಳ್ಳಿಗಳಲ್ಲಿನ ಬೇಡಿಕೆಯನ್ನು ಒಟ್ಟುಗೂಡಿಸಿ



ಯಂತ್ರಗಳು / ಉಪಕರಣಗಳನ್ನು ತಾತ್ಕಾಲಿಕವಾಗಿ ಸಂಗ್ರಹಿಸಲು ಅನುಕೂಲವನ್ನು ಕಲ್ಪಿಸಬೇಕು, ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಿಂದ ದೊರೆಯುವ ಪ್ರಯೋಜನಗಳ ಉತ್ತಮ ಲಭ್ಯತೆಗಾಗಿ ಹೆಚ್ಚಿನ ಜಾಗೃತಿ ಅಭಿಯಾನಗಳು, ಕ್ಷೇತ್ರ ಪ್ರದರ್ಶನಗಳು, ಹಳ್ಳಿಯ ಗೋಡೆ ಪೋಸ್ಟರ್‌ಗಳು, ಸಮೂಹ ಮಾಧ್ಯಮ, ಪತ್ರಿಕೆಗಳ ಮೂಲಕ ಪ್ರಚಾರ ಕೈಗೊಳ್ಳಬೇಕು ಹಾಗೂ ಸ್ಥಳೀಯ ಸ್ವ-ಸಹಾಯ ಗುಂಪುಗಳೊಂದಿಗೆ ಸಹಭಾಗಿತ್ವವನ್ನು ಏರ್ಪಡಿಸಬೇಕು.

## ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯಲ್ಲಿ ಜಾರಿಗೆ ತಂದ ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆಯ ಮೌಲ್ಯಮಾಪನ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪಡೆದ ಕೋರಿಕೆಯಂತೆ ವಿಜಯಪುರ ಜಿಲ್ಲೆಯಲ್ಲಿ ಬೇಟಿ ಬಚಾವೊ ಬೇಟಿ ಪಡಾವೊ ಯೋಜನೆಯ



ಅನುಷ್ಠಾನ ಕುರಿತು ಅಧ್ಯಯನವನ್ನು ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಮೂಲಕ ಕೈಗೊಳ್ಳಲಾಗಿರುತ್ತದೆ. ಈ ಯೋಜನೆಯು ಅನುಷ್ಠಾನಗೊಂಡ ನಾಲ್ಕು ವರ್ಷಗಳ ಅವಧಿಯಲ್ಲಿ, ಹೊಸದಾಗಿ ಮದುವೆಯಾದ ದಂಪತಿಗಳಿಗೆ ನೀಡಲಾದ ಅರಿವು ಈ ಕುಟುಂಬಗಳಲ್ಲಿ 60:40 ಅನುಪಾತದಲ್ಲಿ ನವಜಾತ ಹೆಣ್ಣು ಮಕ್ಕಳ ಪ್ರಮಾಣವನ್ನು ಹೆಚ್ಚಿಸಲು ಕಾರಣವಾಗಿದೆ ಎಂಬ ಅಂಶವನ್ನು ಅಧ್ಯಯನವು ಹೊರತಂದಿರುತ್ತದೆ. ಆಸಕ್ತಿದಾಯಕ ಅಂಶವೆಂದರೆ ಹೊಸದಾಗಿ ಮದುವೆಯಾದ ಈ ದಂಪತಿಗಳಲ್ಲಿ 70% ರಷ್ಟು ನ್ಯೂಕ್ಲಿಯರ್ ಕುಟುಂಬಗಳಿಗೆ ಸೇರಿದವರಾಗಿದ್ದು, ಇವರು ಸಂಪ್ರದಾಯಗಳು ಮತ್ತು ಮೂಢ ನಂಬಿಕೆಗಳಿಂದ ಪ್ರಭಾವಿತವಾಗದೆ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಿರುತ್ತದೆ. ಮಾದರಿಗೊಳಪಡಿಸಿದ ಕುಟುಂಬಗಳಲ್ಲಿ ಹೊಸದಾಗಿ ಮದುವೆಯಾದ ಸುಮಾರು 82 ಪ್ರತಿಶತ ಪುರುಷರು ಹೆಣ್ಣು ಮಗುವಿನ ಬಗ್ಗೆ ತಮ್ಮ ವರ್ತನೆಗಳಲ್ಲಿ ಬದಲಾವಣೆಯನ್ನು ವ್ಯಕ್ತಪಡಿಸಿದ್ದಾರೆ. ಈ ಬದಲಾವಣೆಯು 65% ಮಹಿಳೆಯರಲ್ಲೂ ಸಹಾ ಕಂಡುಬಂದಿರುತ್ತದೆ. ಸರ್ಕಾರಿ ಕಾರ್ಯಕ್ರಮದಿಂದಾಗಿ ಜನನನಿಂದಲೇ ಮಗುವಿನ ತಾರತಮ್ಯವನ್ನು ತಪ್ಪಿಸಲಾಗಿದ್ದರೂ, ಹೆಣ್ಣು ಮಗುವನ್ನು ಸರ್ಕಾರಿ ಶಾಲೆಗೆ ಕಳುಹಿಸುವ ಮತ್ತು ಗಂಡು ಮಗುವನ್ನು ಖಾಸಗಿ ಶಾಲೆಗೆ ಕಳುಹಿಸುವ ರೂಪದಲ್ಲಿ ಇದು

ಮುಂದುವರಿಯುತ್ತಿದೆ. ಅಲ್ಲದೇ, ಹೆಣ್ಣು ಮಕ್ಕಳ ಮನೆಕೆಲಸಗಳನ್ನು ಮಾಡುವ ನಿರಂತರ ಏಕರೂಪತೆಯು ಸುಸ್ಥಿರ ಅಭಿವೃದ್ಧಿ ಗುರಿ–5ರ ಅಡಿಯಲ್ಲಿನ ಲಿಂಗ ಸಮಾನತೆಗೆ ಸವಾಲಾಗಿ ಮುಂದುವರಿಯುತ್ತದೆ. ಅಡುಗೆಮನೆಯಲ್ಲಿ ತಾಯಂದಿರಿಗೆ ಸಹಾಯ ಮಾಡುವ ಹುಡುಗರನ್ನು ಮತ್ತು ಕೆಲವು ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಕಳುಹಿಸಿದ ಹುಡುಗಿಯರನ್ನು ತೋರಿಸಿದ ದೂರದರ್ಶನ ಅಭಿಯಾನವು ಪೋಷಕರ ಮನಸ್ಸಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ. ಆದ್ದರಿಂದ, ಸುಸ್ಥಿರ ಅಭಿವೃದ್ಧಿ ಗುರಿ–5 ರ ಅಡಿಯಲ್ಲಿನ ಗುರಿಗಳನ್ನು ಸಾಧಿಸಲು ದೂರದರ್ಶನ, ಪತ್ರಿಕೆ ಮತ್ತು ಗೋಡೆ ಬರವಣಿಗೆಯ ಮೂಲಕ ಲಿಂಗ ವಿಷಯಗಳ ಬಗ್ಗೆ ನಿರಂತರ ಸಂವೇದನೆಯನ್ನು ಮೂಡಿಸಲು ಕೇಂದ್ರ ಯೋಜನೆಯಡಿ ಧನಸಹಾಯ ಮಾಡಬೇಕಾಗಿರುತ್ತದೆ.

## ಕರ್ನಾಟಕದ ಆಯ್ದ ಕ್ರೀಡೆಗಳಿಗೆ ಸಂಬಂಧಿಸಿದಂತೆ ರಾಜ್ಯದ ಮಧ್ಯಸ್ಥಿಕೆಗಳ ಪರಿಣಾಮದ ಮೌಲ್ಯಮಾಪನ (2011–12 ರಿಂದ 2016–17)



ಈ ಅಧ್ಯಯನವು ಕರ್ನಾಟಕದ ಕ್ರೀಡಾ ವಲಯದಲ್ಲಿನ ಬದಲಾವಣೆಯ ಸ್ವರೂಪ ಮತ್ತು ವಿವಿಧ ಮಧ್ಯಸ್ಥಗಾರರ ಮೇಲೆ ಅದರ ಪ್ರಭಾವದ ಮೇಲೆ ಬೆಳಕು ಚೆಲ್ಲುವ ಗುರಿಯನ್ನು ಹೊಂದಿರುತ್ತದೆ. ಪ್ರಸ್ತುತ ಮೌಲ್ಯಮಾಪನಕ್ಕಾಗಿ, ಈ ಕೆಳಗಿನ ಕ್ರೀಡೆಗಳನ್ನು ಕೇಂದ್ರೀಕರಿಸಲಾಗಿರುತ್ತದೆ: 1) ಅಥ್ಲೆಟಿಕ್ಸ್, 2) ವಾಲಿ ಬಾಲ್, 3) ಬಾಸ್ಕೆಟ್ ಬಾಲ್, 4) ಕುಸ್ತಿ, 5) ಜೂಡೋ, 6) ಸೈಕ್ಲಿಂಗ್, 7) ಹಾಕಿ, 8) ಕಬಡ್ಡಿ, 9) ಜಿಮ್ನಾಸ್ಟಿಕ್ಸ್, 10) ಫುಟ್ಬಾಲ್. ಸದರಿ ವಿಶ್ಲೇಷಣೆಯು 1050 ಪ್ರತಿಕ್ರಿಯೆದಾರರ ಸರಳ ಯಾದೃಚ್ಛಿಕ ಮಾದರಿಯನ್ನು ಆಧರಿಸಿದ್ದು, ಇದು ಪಟ್ಟಿ ಮಾಡಲಾದ ಪ್ರತಿಯೊಂದು ಕ್ರೀಡೆಯನ್ನು ಪ್ರತಿನಿಧಿಸುತ್ತದೆ. ಅಂತೆಯೇ, ತರಬೇತುದಾರರು, ಪ್ರಶಸ್ತಿ ವಿಜೇತರು, ಪ್ರತಿ ಕ್ರೀಡೆಯ ಚುನಾಯಿತ ಪದಾಧಿಕಾರಿಗಳ ಪ್ರತಿನಿಧಿಗಳಂತಹ ಇತರ ಮಧ್ಯಸ್ಥಗಾರರನ್ನು ಸಹ ಸಂದರ್ಶಿಸಲಾಗಿರುತ್ತದೆ.

ಒಂದು ನಿರ್ದಿಷ್ಟ ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದ ಹಾಸ್ಟೆಲ್‌ಗಳ ಕಾರ್ಯಕ್ಷಮತೆಯು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವರ್ಷಗಳಲ್ಲಿ ಉತ್ತಮ ಪ್ರದರ್ಶನ ನೀಡಿದೆ ಎಂದು ಅಧ್ಯಯನವು ಕಂಡುಹಿಡಿದಿರುತ್ತದೆ. ಅಥ್ಲೇಟಿಕ್ಸ್, ಕುಸ್ತಿ, ಬಾಸ್ಕೆಟ್‌ಬಾಲ್, ಸೈಕ್ಲಿಂಗ್, ಹಾಕಿ ಮತ್ತು ಫುಟ್‌ಬಾಲ್



ಕ್ಷೇತ್ರಗಳು ಅದ್ಭುತ ಪ್ರದರ್ಶನ ನೀಡಿರುತ್ತವೆ. ಇತರ ಕ್ರೀಡೆಗಳು ಸಹ ಅದೇ ರೀತಿಯಲ್ಲಿ ತಮ್ಮನ್ನು ತಾವು ಸಜ್ಜುಗೊಳಿಸಬಹುದಾಗಿರುತ್ತದೆ. ಈ ಆಯ್ದ ಕ್ಷೇತ್ರಗಳಲ್ಲಿನ ಮೂಲಸೌಕರ್ಯಗಳನ್ನು ಸಾರ್ವಜನಿಕ–ಖಾಸಗಿ ಸಹಯೋಗದೊಂದಿಗೆ ಮತ್ತಷ್ಟು ನಿರ್ಮಿಸಬಹುದು. 80 ಪ್ರತಿಶತಕ್ಕಿಂತ



ಹೆಚ್ಚಿನ ನಿವಾಸಿಗಳು ಹಾಸ್ಟೆಲ್‌ಗಳಲ್ಲಿ ಅವರಿಗೆ ನೀಡಲಾದ ಸೌಕರ್ಯಗಳ ಸ್ವರೂಪ ಮತ್ತು ಗುಣಮಟ್ಟದ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುತ್ತಾರೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ (ಪಟಿಯಾಲ) ನಲ್ಲಿರುವಂತೆ ರಾಜ್ಯ ಮಟ್ಟದ ತರಬೇತಿ ಪ್ರಮಾಣೀಕರಣ ಕಾರ್ಯಕ್ರಮದ ಮೂಲಕ ಸ್ಥಳೀಯ ಮಟ್ಟದಲ್ಲಿ ಅರ್ಹ ತರಬೇತುದಾರ ಪೂರೈಕೆಯನ್ನು ಹೆಚ್ಚಿಸಬೇಕು, ಉತ್ತಮ ಖಾಸಗಿ–ಸಾರ್ವಜನಿಕ ಸಹಯೋಗದೊಂದಿಗೆ ಸಾಕಷ್ಟು ಹಣ ಮತ್ತು ಬೆಂಬಲಕ್ಕಾಗಿ ನೀತಿಯನ್ನು

ರೂಪಿಸಬೇಕು. ಮೂಲಸೌಕರ್ಯ ಅಭಿವೃದ್ಧಿಯನ್ನು ಹೆಚ್ಚಿಸಲು ಅಂತರರಾಷ್ಟ್ರೀಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ನಿಯಮಿತವಾಗಿ ಆಯೋಜಿಸಲು ಪ್ರಯತ್ನಿಸಬೇಕು. ಅಸ್ತಿತ್ವದಲ್ಲಿರುವ ಸೌಲಭ್ಯಗಳ ಗರಿಷ್ಠ ಬಳಕೆ ಮತ್ತು ಸ್ಥಳೀಯ ಪ್ರತಿಭೆಗಳಿಗೆ ಹೆಚ್ಚು ಮಹತ್ವದ ಅವಕಾಶಗಳ ಮೂಲಕ ಫ್ರ್ಯಾಂಚೈಸ್ ಆಧಾರಿತ ಕ್ರೀಡಾ ಲೀಗ್‌ಗಳು ಆದಾಯ ಉತ್ಪಾದನೆಗೆ ಸಹಾಯ ಮಾಡುತ್ತವೆ. ಹೆಚ್ಚಿನ ಹೂಡಿಕೆಯೊಂದಿಗೆ ಹೆಚ್ಚು ಮಹತ್ವದ ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡುವ ಬದಲು ಸರ್ಕಾರವು ಕಡಿಮೆ–ವೆಚ್ಚದ ಶಾಲಾ–ಆಧಾರಿತ ಸಣ್ಣ ಮೂಲಸೌಕರ್ಯಗಳತ್ತ ಗಮನ ಹರಿಸಬೇಕು. ಇವುಗಳು ಈ ಅಧ್ಯಯನದ ಪ್ರಮುಖ ಶಿಫಾರಸ್ಸುಗಳಾಗಿವೆ.

## ಕರ್ನಾಟಕ ರಾಜ್ಯದಲ್ಲಿ ಡಿ ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಜಾರಿಗೆ ತಂದಿರುವ ಅರಿವು ಶೈಕ್ಷಣಿಕ ಸಾಲ ಯೋಜನೆಯ ಮೌಲ್ಯಮಾಪನ

ಕರ್ನಾಟಕ ರಾಜ್ಯದ ಡಿ ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಜಾರಿಗೆ ತಂದಿರುವ ಅರಿವು ಶೈಕ್ಷಣಿಕ ಸಾಲ ಯೋಜನೆಯ



ಮೌಲ್ಯಮಾಪನ (2011–12 ರಿಂದ 2017–18) ಎಂಬ ಶೀರ್ಷಿಕೆಯ ವರದಿಯು 2011ರಿಂದ 2018ರವರೆಗಿನ ಆರಿವು ಶೈಕ್ಷಣಿಕ ಸಾಲ ಯೋಜನೆಯ ಸ್ಥಿತಿಯ ಸಮಗ್ರ ಚಿತ್ರಣವನ್ನು ಒದಗಿಸಿರುತ್ತದೆ. ಅರಿವು ಸಾಲ ಯೋಜನೆಯು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಲ್ಲಿ ಉನ್ನತ



ಶಿಕ್ಷಣದ ಭಾಗವಹಿಸುವಿಕೆಯನ್ನು ಸುಧಾರಿಸುವ ಜೊತೆಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಭರವಸೆಯನ್ನು ತೋರಿಸುತ್ತಿದೆ ಎಂಬ

ಅಂಶವನ್ನು ಅಧ್ಯಯನವು ಹೊರತಂದಿದೆ, ಇದನ್ನು ಇನ್ನೂ ಮುಂದುವರಿಸಬಹುದಾಗಿರುತ್ತದೆ. ಆದಾಗ್ಯೂ, ಸಾಮಾಜಿಕ ಸಮಾನತೆಯನ್ನು ಉತ್ತೇಜಿಸುವ ಸಲುವಾಗಿ ಅತ್ಯಂತ ದುರ್ಬಲ ಕುಟುಂಬಗಳನ್ನು, ವಿಶೇಷವಾಗಿ ಮೊದಲ ಪೀಳಿಗೆಯನ್ನು ಗುರುತಿಸಲು ಮತ್ತು ಗುರಿಯಾಗಿಸಲು ಗಂಭೀರ ಪ್ರಯತ್ನದ ಅಗತ್ಯವಿರುತ್ತದೆ. ಸಿಇಟಿ ಅಲ್ಲದ ವಿದ್ಯಾರ್ಥಿಗಳನ್ನು ಸಿಇಟಿ ವರ್ಗಕ್ಕೆ ಸಮನಾಗಿ ತರುವಂತಹ ಕಾರ್ಯ ಸಾಧ್ಯತೆಯನ್ನು ಸಹ ಕಾರ್ಯಕ್ರಮವು ಪರಿಶೀಲಿಸಬಹುದಾಗಿರುತ್ತದೆ. ಇದಲ್ಲದೆ, ಕೋರ್ಸ್‌ನ ಅವಶ್ಯಕತೆಗಳನ್ನು ಪೂರೈಸಲು ಸಾಲದ ಮೊತ್ತವನ್ನು ಹೆಚ್ಚಿಸಬೇಕು.

**ಕರ್ನಾಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಪ್ರಚಾರಕ್ಕಾಗಿ ಸಂಘಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಒದಗಿಸಿದ ನಿಧಿಯ ಬಳಕೆಯ ಮೌಲ್ಯಮಾಪನ.**

ಕನ್ನಡ ಭಾಷೆಯಲ್ಲಿ ವಿವಿಧ ರೀತಿಯ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಹಣ ಒದಗಿಸುವಿಕೆಯ ಪರಿಣಾಮವನ್ನು ಅಳೆಯಲು ಈ ಅಧ್ಯಯನವನ್ನು ಪ್ರಾರಂಭಿಸಲಾಗಿರುತ್ತದೆ.



ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಖಾಸಗಿ ಮತ್ತು ಸಹಕಾರಿ ನೋಂದಾಯಿತ ಸಂಸ್ಥೆಗಳಿಗೆ ನಿಧಿಯನ್ನು ಒದಗಿಸಲಾಗುತ್ತದೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಉತ್ತೇಜಿಸಲಾದ 11 ಪ್ರಕಾರದ ಕಲೆಗಳು ಹಾಗೂ ಸಾಮಾನ್ಯ ನಿಧಿಗಳ ಬಗ್ಗೆ ಅಧ್ಯಯನದಲ್ಲಿ ಸೇರಿಸಲಾಗಿರುತ್ತದೆ. ಸಂಸ್ಥೆಗಳಿಗೆ



ಸಹಾಯವು ಕಲೆ ಮತ್ತು ಸಂಸ್ಕೃತಿಯ ವಿವಿಧ ಪ್ರಕಾರಗಳನ್ನು ಉತ್ತೇಜಿಸಲು ನೆರವಾಗಿದ್ದು, ಕಲಾವಿದರು ತಮ್ಮ ಪ್ರತಿಭೆಯನ್ನು ಪೋಷಿಸಲು ಮತ್ತು ಉತ್ತೇಜಿಸಲು ಸಹಾಯವನ್ನು ಪಡೆಯಲು ಸಹ ಸಾಧ್ಯವಾಗಿರುವುದನ್ನು ಅಧ್ಯಯನದ ಆವಿಷ್ಕಾರಗಳು ತಿಳಿಸಿರುತ್ತವೆ. ಆದರೆ ಸ್ಪಷ್ಟವಾದ ಮಾರ್ಗಸೂಚಿಗಳಿಲ್ಲದ ಕಾರಣದಿಂದ ಹಾಗೂ ನಡೆದಿರುವ ಕಾರ್ಯಕ್ರಮಗಳ ಸರಿಯಾದ ಮೇಲ್ವಿಚಾರಣೆ ಮತ್ತು ಪುರಾವೆಗಳು ಇಲ್ಲದ ಕಾರಣದಿಂದ ಅನುದಾನವನ್ನು ಸಲ್ಲಿಸುವಲ್ಲಿ ಸಮಸ್ಯೆಗಳಾಗಿರುತ್ತವೆ. ಭಾಷೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸಲು ಇಂತಹ ಅನುದಾನಗಳು ಉಪಯುಕ್ತವಾಗಿವೆ. ಮಾರ್ಗಸೂಚಿಗಳನ್ನು ರೂಪಿಸುವುದು, ಆನ್‌ಲೈನ್ ಪಾವತಿಗಳ ವ್ಯವಸ್ಥೆಯನ್ನು ಬಲಪಡಿಸುವುದು, ಸಾಕ್ಷ್ಯಗಳ ದಾಖಲಾತಿ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಮತ್ತು ಸರ್ಕಾರಿ ಕಾರ್ಯಕ್ರಮಗಳ

ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳಿಗೆ ಮಹತ್ವವನ್ನು ನೀಡಲು ಅಧ್ಯಯನವು ಶಿಫಾರಸ್ಸು ಮಾಡಿರುತ್ತದೆ.

## 2013–14 ರಿಂದ 2016–17ರ ಅವಧಿಗೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ಕೈಗೊಂಡ ಅರಣ್ಯ ಕಾಮಗಾರಿಗಳ ಮೌಲ್ಯಮಾಪನ.

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಎರಡೂ ಯೋಜನೆಗಳ ಅಡಿಯಲ್ಲಿ 2013–14 ರಿಂದ 2016–17ರವರೆಗೆ (4 ವರ್ಷ)



ಕರ್ನಾಟಕ ಅರಣ್ಯ ಇಲಾಖೆಯು ಜಾರಿಗೆ ತಂದಿರುವ ಕಾಮಗಾರಿಗಳ ಮೌಲ್ಯಮಾಪನ ಅಧ್ಯಯನವನ್ನು ನಡೆಸಲಾಗಿರುತ್ತದೆ. ಎಲ್‌ಪಿಜಿ, ಅಸ್ತ್ರ ಓಲೆ, ಸರಳ ಒಲೆ, (ಹೊಗೆರಹಿತ ಒಲೆ) ಇವುಗಳ ಪೂರೈಕೆ ಮತ್ತು ಜೈವಿಕ ಅನಿಲ ಸ್ಥಾವರ, ಸೌರ ದೀಪಗಳು, ಸೌರ ನೀರಿನ ಹೀಟರ್, ಸಾಮಾಜಿಕ ಭದ್ರತಾ ನೆಡುತೋಪು ಹೆಚ್ಚಿಸುವುದು, ಹಣ್ಣುಗಳ ನೆಡುತೋಪು, ಮೇವಿನ ತಾಕುಗಳ ಹಾಗೂ ಜೇನುಗೂಡಿನ ಪೆಟ್ಟಿಗೆಯ ಪೂರೈಕೆ ಇವುಗಳು ಈ ಎರಡೂ ಕಾರ್ಯಕ್ರಮಗಳ ಅಡಿಯಲ್ಲಿ ಜಾರಿಗೆ ತರಲಾಗಿರುತ್ತದೆ. ಎಲ್‌ಪಿಜಿ ವಿತರಣೆಯು ಒಂದು ಜನಪ್ರಿಯ ಯೋಜನೆಯಾಗಿರುತ್ತದೆ. ಒಟ್ಟಾರೆ ವಿಶೇಷ ಘಟಕ ಯೋಜನೆಯಡಿಯಲ್ಲಿ 95.14%ರಷ್ಟು ಮತ್ತು ಗಿರಿಜನ ಉಪ

ಯೋಜನೆಯಡಿಯಲ್ಲಿ 92.95% ರಷ್ಟು ಫಲಾನುಭವಿಗಳು ಯಶಸ್ವಿಯಾಗಿ ಎಲ್‌ಪಿಜಿ ಯೋಜನೆಯನ್ನು ಅಳವಡಿಸಿಕೊಂಡು ಅವುಗಳನ್ನು ನಿರ್ವಹಿಸುತ್ತಾ ಬಳಕೆ ಮಾಡುತ್ತಿದ್ದಾರೆ ಎಂದು ಸೂಚಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಸಮುದಾಯಗಳ ವರ್ತನೆಯಲ್ಲಿ ಬದಲಾವಣೆಯಾದ ಬಗ್ಗೆ ಬಲವಾದ ಪುರಾವೆಗಳಿವೆ.

ಫಲಾನುಭವಿಗಳನ್ನು ತಪ್ಪಾಗಿ ಗುರುತಿಸಿರುವುದು ಮತ್ತು ಕರ್ನಾಟಕದ ಅರಣ್ಯ ಇಲಾಖೆಯ ಮೇಲ್ವಿಚಾರಣೆಯ ಕೊರತೆಯಿಂದಾಗಿ ಜೈವಿಕ ಅನಿಲ ಸ್ಥಾವರಗಳನ್ನು ಸ್ಥಾಪಿಸುವ ವಿಷಯದಲ್ಲಿ ಯಶಸ್ಸು ತುಂಬಾ ಕಡಿಮೆಯಾಗಿರುತ್ತದೆ.

ಎರಡೂ ಯೋಜನೆಗಳ ಅಡಿಯಲ್ಲಿ ಭದ್ರತಾ ನೆಡುತೋಪುಗಳು ಮತ್ತು ಹಣ್ಣಿನ ತೋಟಗಳ ಕಾರ್ಯಕ್ರಮಗಳು ಬಹಳ ಸೀಮಿತ ವ್ಯಾಪ್ತಿಯನ್ನು ಹೊಂದಿರುತ್ತವೆ. ತೋಟವನ್ನು ನೋಡಿಕೊಂಡ ಮತ್ತು ಸಸ್ಯಗಳನ್ನು ಪೋಷಿಸಿದ ಫಲಾನುಭವಿಗಳು ಉತ್ತಮ ನೆಡುತೋಪುಗಳನ್ನು ಬೆಳೆದಿದ್ದಾರೆ, ಆದರೆ ಇತರ ಎಲ್ಲ ಸಂದರ್ಭಗಳಲ್ಲಿ ನೆಡುತೋಪುಗಳು ವಿಫಲವಾಗಿವೆ. ಪ್ರಮುಖ ಶಿಫಾರಸ್ಸುಗಳೆಂದರೆ: ಅರಣ್ಯಗಳ ಅಂಚಿನಿಂದ 5 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಕರ್ನಾಟಕ ಅರಣ್ಯ ಇಲಾಖೆಯು ಹೆಚ್ಚುವರಿ 25% ಸಹಾಯಧನವನ್ನು ನೀಡಬೇಕು. ಅಲ್ಲದೆ ಮತ್ತಷ್ಟು ಸೌರ ಕುಕ್ಕರ್‌ನ್ನು

ಪೂರೈಸಬಹುದಾಗಿದ್ದು, ಸೌರ ದೀಪಗಳನ್ನು ಪೂರೈಸುವ ಸಂಸ್ಥೆಗಳು ಖಾತರಿಯ ಅವಧಿಯಲ್ಲಿ ಹೆಚ್ಚು ಸ್ಪಂದಿಸಬೇಕಾಗಿದ್ದು, ಕರ್ನಾಟಕ ಅರಣ್ಯ ಇಲಾಖೆಯು ಇದನ್ನು ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ. ಸಾಮಾಜಿಕ ಭದ್ರತಾ ನೆಡುತೋಪುಗಳು ಮತ್ತು ಹಣ್ಣಿನ ತೋಟಗಳ ಯಶಸ್ಸಿಗೆ ಕರ್ನಾಟಕ ಅರಣ್ಯ ಇಲಾಖೆಯು ಫಲಾನುಭವಿಗಳೊಂದಿಗೆ ಶಿಕ್ಷಣ ಮತ್ತು ಜಾಗೃತಿ ಕಾರ್ಯಕ್ರಮವನ್ನು ನಡೆಸಬೇಕು. ಫಲಾನುಭವಿಗಳು ಸಮಂಜಸವಾಗಿ ಆಯ್ಕೆಯಾಗಿರುವುದನ್ನು. ತರಬೇತಿ ನೀಡಲ್ಪಟ್ಟಿರುವುದನ್ನು ಮತ್ತು ತಿಳಿದಿರುವ ತಾಣಗಳಿಂದ ಸರಿಯಾದ ಜೇನುಪೆಟ್ಟಿಗೆಗಳು ಹಾಗೂ ಜೇನುನೊಣಗಳ ಪೂರೈಕೆಯಾಗಿರುವುದನ್ನು ಕರ್ನಾಟಕ ಅರಣ್ಯ ಇಲಾಖೆಯು ಖಾತ್ರಿ ಪಡಿಸಿಕೊಳ್ಳಬೇಕು.

# ಸಾರ್ವಜನಿಕ ಆರೋಗ್ಯ ಸೌಲಭ್ಯಗಳಲ್ಲಿ ಕರ್ನಾಟಕದ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರು ಸ್ವಂತ ಖರ್ಚಿನಲ್ಲಿ ನಿರ್ವಹಿಸಿದ ತಾಯಂದಿರ ಆರೋಗ್ಯ ರಕ್ಷಣೆಯ ಮೌಲ್ಯಮಾಪನ

ತಾಯಿಯ ಆರೈಕೆಗಾಗಿ ಕೇಂದ್ರ ಮತ್ತು ರಾಜ್ಯ ಪ್ರಾಯೋಜಿತ ಯೋಜನೆಗಳ ರೂಪದಲ್ಲಿ ದೊಡ್ಡ ಹೂಡಿಕೆಯ ಹೊರತಾಗಿಯೂ, ಕರ್ನಾಟಕ ರಾಜ್ಯದಾದ್ಯಂತ



ಸಾಂಸ್ಥಿಕ ಹೆರಿಗೆಗಳ ಪ್ರಕರಣಗಳಲ್ಲಿ ತಮ್ಮದೇ ಸ್ವಂತ ಹಣದ ಖರ್ಚು ಮತ್ತು ದುರಂತ ಪ್ರಕರಣಗಳಲ್ಲಿ ಆರೋಗ್ಯ ಖರ್ಚು ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಲ್ಲಿ ಹೆಚ್ಚಾಗಿರುತ್ತದೆ. ಈ ಅಧ್ಯಯನವು ಕರ್ನಾಟಕದ ಐದು ಜಿಲ್ಲೆಗಳಾದ ಬೆಂಗಳೂರು ಗ್ರಾಮೀಣ, ಬೆಳಗಾವಿ, ಬಳ್ಳಾರಿ, ಚಿಕ್ಕಮಗಳೂರು ಮತ್ತು ಹಾವೇರಿಯ 2104 ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ತಮ್ಮದೇ ಸ್ವಂತ ಹಣದ ಖರ್ಚಿನ ಮಟ್ಟಗಳು ಮತ್ತು ಅಂಶಗಳನ್ನು ಪರಿಶೋಧಿಸಿರುತ್ತದೆ.

ಈ ಅಧ್ಯಯನವು 82.67% ರಷ್ಟು ಪ್ರತಿಕ್ರಿಯೆದಾರರಿಗೆ ಸಾರ್ವಜನಿಕ ಸಂಸ್ಥೆಗಳಲ್ಲಿ ಹೆರಿಗೆಯಾಗಿರುವುದನ್ನು ಕಂಡುಹಿಡಿದಿದೆ. ಸಾರ್ವಜನಿಕ ಸೌಲಭ್ಯಗಳಲ್ಲಿ ಹೆರಿಗೆಯ ಸರಾಸರಿ ಖರ್ಚು ರೂ. 8,441 /– ಆಗಿದ್ದು, ಇದು ಯೋಜನೆಗಳಿಂದ ಪಡೆದ ಸೌಲಭ್ಯಗಳಿಗಿಂತ 4.2 ಪಟ್ಟು



ಹೆಚ್ಚಾಗಿರುತ್ತದೆ (ರೂ.2000). ಶೇಕಡಾ 91.37 ರಷ್ಟು ಮಹಿಳೆಯರು ಯೋಜನೆಗಳ ಮೂಲಕ ಒದಗಿಸುವ ಆರ್ಥಿಕ ನೆರವು ಸಾಲದು ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಫಲಾನುಭವಿಗಳು ಖರ್ಚನ್ನು ಭರಿಸಲು ತಮ್ಮ ಉಳಿತಾಯವನ್ನು ಬಳಸುವುದು, ಸಂಬಂಧಿಕರು ಅಥವಾ ಸ್ನೇಹಿತರಿಂದ ಸಾಲ ಪಡೆಯುವುದು,



ಸ್ವಸಹಾಯ ಗುಂಪು / ಸಂಘಗಳಿಂದ ಸಾಲ ಪಡೆಯುವುದು ಮತ್ತು ಚಿನ್ನ ಹಾಗೂ ಭೂಮಿಯನ್ನು ಒತ್ತೆ ಇಡುವುದನ್ನು ಮಾಡಿರುತ್ತಾರೆ. ಈ ಅಧ್ಯಯನದ ನಿರ್ದಿಷ್ಟ ಶಿಫಾರಸ್ಸುಗಳು ಹೀಗಿವೆ: ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ

ಪರಿವರ್ತಿಸುವ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆರಿಗೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ಅವುಗಳು ಮೂಲ ಹೆರಿಗೆ ಮತ್ತು ನವಜಾತ ಶಿಶುಸೇವೆಗಳನ್ನು ಒದಗಿಸುತ್ತವೆ ಎಂದು ಖಚಿತಪಡಿಸಿಕೊಳ್ಳುವುದು. ಹೆಚ್ಚಿನ ಸಮುದಾಯ ಆರೋಗ್ಯ ಕೆಂದ್ರಗಳನ್ನು (CHC) ಪ್ರಥಮ ಉಲ್ಲೇಖಿತ ಘಟಕಗಳಾಗಿ (FRU) ಪರಿವರ್ತಿಸುವ ಮೂಲಕ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸೇವಾಲಭ್ಯತೆಯನ್ನು ಸುಧಾರಿಸುವುದು ಮತ್ತು ರೋಗಿಗಳಿಗೆ ಸಾರಿಗೆ ಮತ್ತು ವೈದ್ಯಕೀಯ ಉಲ್ಲೇಖಕ್ಕಾಗಿ ತಗಲುವ ವೆಚ್ಚವನ್ನು ಕಡಿಮೆ ಮಾಡುವುದು. ಹೆರಿಗೆ ವೆಚ್ಚಕ್ಕಾಗಿ ಸ್ವಂತ ಹಣದ ಬಳಕೆಯ ಪ್ರಮುಖ ಅಂಶವಾದ ಸಾರ್ವಜನಿಕ ಸೌಲಭ್ಯಗಳಲ್ಲಿ ಅನೌಪಚಾರಿಕ ಪಾವತಿಗಳಿಗೆ ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ಹೊಂದುವುದು. ಆರೋಗ್ಯ ರಕ್ಷಣಾ ಸಮಿತಿಯು ಸೇವೆಗಳ ಬಗ್ಗೆ ಜನರಿಂದ ಪ್ರತಿಕ್ರಿಯೆ ಪಡೆದು ಅದಕ್ಕೆ ತಕ್ಕಂತೆ ಕಾರ್ಯನಿರ್ವಹಿಸುವುದು.

# ಕರ್ನಾಟಕ ರಾಜ್ಯದಲ್ಲಿ ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಮೌಲ್ಯಮಾಪನ

ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಒಂದು ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಗ್ರಾಮೀಣಾಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ ಮತ್ತು ಕರ್ನಾಟಕದ ಬೇಡಿಕೆ–ಚಾಲಿತ, ನಿಯೋಜನೆ–ಸಂಬಂಧಿತ ಕೌಶಲ್ಯ ಅಭಿವೃದ್ಧಿಯ ಮಧ್ಯಸ್ತಿಕೆಯಾಗಿರುತ್ತದೆ.



ರಾಜ್ಯದ 12 ಜಿಲ್ಲೆಗಳನ್ನೊಳಗೊಂಡಂತೆ ಕರ್ನಾಟಕದಲ್ಲಿ ಈ ಯೋಜನೆಯ



ಅನುಷ್ಠಾನ ಮತ್ತು ಫಲಾನುಭವಿಗಳ ಮೇಲೆ ಅದರ ಪರಿಣಾಮ ಹಾಗೂ ಅವರ ಆರ್ಥಿಕ ಸ್ಥಿತಿ ಮೊದಲಾದ ವಿವಿಧ ವಿಷಯಗಳ ಬಗ್ಗೆ ಈ ಅಧ್ಯಯನವು ಪರಿಶೀಲಿಸಿರುತ್ತದೆ. ಕರ್ನಾಟಕದ ಸಮೀಕ್ಷೆಯಲ್ಲಿ ಒಳಗೊಂಡಿರುವ ಫಲಾನುಭವಿಗಳಲ್ಲಿ ಹೆಚ್ಚಿನವರು ಮಹಿಳೆಯರು ಇರುತ್ತಾರೆ.



ಫಲಾನುಭವಿಗಳಲ್ಲಿ ಹೆಚ್ಚಿನ ಪಾಲು (39.77%) ಪದವೀಧರರು ಎಂದು ಈ ಅಧ್ಯಯನವು ಗಮನಿಸಿರುತ್ತದೆ. ಮತ್ತೊಂದು ಸಕಾರಾತ್ಮಕ ಶೋಧನೆಯೆಂದರೆ, ನೀರಾವರಿ ಭೂಮಿಯಿಲ್ಲದ ಅಲ್ಪ ಕೃಷಿ ಕುಟುಂಬಗಳಲ್ಲಿ ಹೆಚ್ಚಿನ ಪಾಲು ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಿಂದ ಪ್ರಯೋಜನ ಪಡೆದಿರುತ್ತದೆ. ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಅಡಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವ ಸಂಸ್ಥೆಗಳು ನೀಡುವ ತರಬೇತಿಯ ಗುಣಮಟ್ಟದ ಬಗ್ಗೆ ಅಧ್ಯಯನವು ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಗಮನಿಸಿರುತ್ತದೆ. 6%ರ ಹತ್ತಿರದಷ್ಟು ತರಬೇತಿಯಿಂದ ಹೊರಗುಳಿಯುವುದು ಕಂಡುಬಂದಿರುತ್ತದೆ. ಪ್ರಮುಖ ಶಿಫಾರಸ್ಸುಗಳೆಂದರೆ: ಜಿಲ್ಲಾ ಮಟ್ಟದ ಕಾರ್ಮಿಕ ಮಾರುಕಟ್ಟೆ ಸಮೀಕ್ಷೆಯ ಆಧಾರದ ಮೇಲೆ ನೀಡಬೇಕಾದ ಅಧ್ಯಯನ ವಿಷಯಗಳನ್ನು ಆಯ್ಕೆ ಮಾಡಿ, ಅಭ್ಯರ್ಥಿಗಳಿಗೆ ಆಕಾಂಕ್ಷೆ, ಸ್ಫೂರ್ತಿ ಮತ್ತು ಪ್ರೇರಣೆ ನೀಡುವುದಕ್ಕೆ ಮತ್ತು ಸೂಕ್ತವಾದ ಕೋರ್ಸಿನ ಆಯ್ಕೆಗೆ ಅಭ್ಯರ್ಥಿಗಳಿಗೆ ಸಹಾಯ ಮಾಡಲು ಬುನಾದಿ ಕೋರ್ಸ್ ಒದಗಿಸಬೇಕು. ಉದ್ಯೋಗದ ಮೇಲಿನ ತರಬೇತಿಗೆ ಮಾತ್ರವಲ್ಲದೆ ತರಬೇತಿ ಮತ್ತು ಆವರ್ತಕ ಮೌಲ್ಯಮಾಪನಗಳಲ್ಲೂ ಉದ್ಯಮವನ್ನು ತೊಡಗಿಸಿಕೊಳ್ಳಬೇಕು. ಉದ್ಯಮದ ಸಹಯೋಗದೊಂದಿಗೆ ಹೆಚ್ಚು ವ್ಯವಸ್ಥಿತವಾಗಿ ವಿನ್ಯಾಸಗೊಳಿಸಲಾದ ಅಪ್ರೆಂಟಿಸ್‌ಶಿಪ್‌ಗಳನ್ನು ಸಹ

ಪರಿಗಣಿಸಬೇಕು. ಸ್ಥಳೀಯ ವಿಶ್ವವಿದ್ಯಾಲಯಗಳು ಮತ್ತು ತಾಂತ್ರಿಕ ಸಂಸ್ಥೆಗಳನ್ನು ತರಬೇತಿಯಲ್ಲಿ ತೊಡಗಿಸಿಕೊಳ್ಳುವುದರಿಂದ. ಹೆಚ್ಚು ವೈವಿಧ್ಯಮಯ ಕೋರ್ಸ್‌ಗಳನ್ನು ನೀಡಬಹುದು. ವಲಸಿಗರಿಗೆ ಬೆಂಬಲ ವ್ಯವಸ್ಥೆಯನ್ನು ಒದಗಿಸಿ ಬೆಂಗಳೂರಿನಂತಹ ಪ್ರಮುಖ ನಗರಗಳಲ್ಲಿ ವಲಸೆ ಬೆಂಬಲಿತ ಕೇಂದ್ರಗಳನ್ನು ಪ್ರಾರಂಭಿಸಿ, ಧಾರಣ ಪ್ರೋತ್ಸಾಹವನ್ನು ಹೆಚ್ಚಿಸಿ, ಧಾರಣ ಗುರಿಗಳನ್ನು ನಿಗದಿಪಡಿಸುವ ಮೂಲಕ ಮೇಲ್ವಿಚಾರಣೆ ಮಾಡಬೇಕು.

## ಪ್ರಗತಿಯಲ್ಲಿರುವ ಮೌಲ್ಯಮಾಪನಗಳು

| ಕ್ರ.ಸಂ | ಇಲಾಖೆ | ಅಧ್ಯಯನದ ಹೆಸರು |
|---|---|---|
| 1 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕದಲ್ಲಿ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿನ ಸ್ವಸಹಾಯ ಗುಂಪುಗಳ ಸ್ಥಿತಿಯ ಅಧ್ಯಯನ. |
| 2 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 2013–14 ರಿಂದ 2016–17ರವರೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಜಾನುವಾರು ಕೊಟ್ಟಿಗೆಗಳ ಮೌಲ್ಯಮಾಪನ. |

| | | |
|---|---|---|
| 3 | ಸಮಾಜ ಕಲ್ಯಾಣ ಇಲಾಖೆ | 2014–15, 2015–16 ಮತ್ತು 2016–17ರ ಅವಧಿಗೆ ಪರಿಶಿಷ್ಟ ಜಾತಿ ಉಪ ಹಂಚಿಕೆ/ಪರಿಶಿಷ್ಟ ಪಂಗಡ ಉಪಹಂಚಿಕೆಯ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿನ ಮೂಲಸೌಕರ್ಯ ಸೌಲಭ್ಯಗಳ ಯೋಜನೆಯ ಕಾರ್ಯಕ್ಷಮತೆಯ ಮೌಲ್ಯಮಾಪನ. |
| 4 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಮಧ್ಯಾಹ್ನ ಉಪಾಹಾರ ಯೋಜನೆಯ ಪರಿಣಾಮದ ಮೌಲ್ಯಮಾಪನ–2016–17. |
| 5 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಹಕ್ಕು ಅಧಿನಿಯಮ2009ರ ಪ್ರಕಾರ ಖಾಸಗಿ ಶಾಲೆಗಳಲ್ಲಿನ ಮೂಲಸೌಕರ್ಯ ಸೌಲಭ್ಯಗಳು ಮತ್ತು ಅರ್ಹತಾ ಪರಿಸ್ಥಿತಿಗಳ ಮೌಲ್ಯಮಾಪನ. |

| | | |
|---|---|---|
| 6 | ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕದಲ್ಲಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ. |
| 7 | ವಿಕಲಚೇತನರ ಮತ್ತು ಹಿರಿಯ ನಾಗರೀಕರ ಕಲ್ಯಾಣ ನಿರ್ದೇಶನಾಲಯ ಮತ್ತು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ | ಕರ್ನಾಟಕದಲ್ಲಿ ಹಿರಿಯ ನಾಗರಿಕರ ಸ್ಥಿತಿಯ ಅಧ್ಯಯನ. |
| 8 | ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ) | 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ಪೂರೈಕೆಯ ಮೌಲ್ಯಮಾಪನ. |
| 9 | ಕಾರ್ಮಿಕ ಇಲಾಖೆ (ಕರ್ನಾಟಕ ಕಟ್ಟಡ | ಕರ್ನಾಟಕದಲ್ಲಿ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ |

| | | |
|---|---|---|
| | ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ) | ಉಪಕರದ ಬಳಕೆಯಿಂದ ಉಂಟಾದ ಅಭಿವೃದ್ಧಿ ಪರಿಣಾಮದ ಅಧ್ಯಯನ. |
| 10 | ಅರಣ್ಯ ಇಲಾಖೆ | ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರದಡಿ 2013–14ರಿಂದ 2015–16, 13ನೇ ಹಣಕಾಸು ಆಯೋಗದಡಿ 2013–14 ರಿಂದ 2014–15, ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮದಡಿ 2013–14 ರಿಂದ 2016–17 ಮತ್ತು ರಾಷ್ಟ್ರೀಯ ಬಿದಿರಿನ ಅಭಿಯಾನದಡಿ 2013–14 ರಿಂದ 2016–17ರವರೆಗೆ ಅನುಷ್ಠಾನಗೊಳಿಸಲಾದ ಅರಣ್ಯ ಕಾಮಗಾರಿಗಳ ಮೌಲ್ಯಮಾಪನ. |
| 11 | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಅನುಷ್ಠಾನಗೊಳಿಸಿದ ನಿರಂತರ |

| | | |
|---|---|---|
| | (GESCOM)– ಕಲಬುರಗಿ | ಜ್ಯೋತಿ ಯೋಜನೆಯ ಮೌಲ್ಯಮಾಪನ. |
| 12 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ವಿಶೇಷವಾಗಿ ಕರ್ನಾಟಕವನ್ನು ಉಲ್ಲೇಖಿಸಿ, ಭಾರತೀಯ ನಾಗರಿಕ ಸೇವೆಯಲ್ಲಿರುವ ಗೈರುಹಾಜರಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಕಡಿಮೆ ಮಾಡುವುದರ ಮೇಲಿನ ಮೌಲ್ಯಮಾಪನ. |
| 13 | ಕರ್ನಾಟಕ ಸಮಗ್ರ ಪೋಷಣೆ ಅಭಿಯಾನ | ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕರ್ನಾಟಕ ಬಹು ವಲಯ ಪೋಷಣೆ ಯೋಜನೆಯಡಿ ಕುಟುಂಬ ಮಟ್ಟದ ದತ್ತಾಂಶ ವಿಶ್ಲೇಷಣೆ ಮತ್ತು ನೀತಿ ಶಿಫಾರಸ್ಸುಗಳು. |
| 14 | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ | ಕರ್ನಾಟಕ ರಾಜ್ಯದಲ್ಲಿ ತಂತ್ರಜ್ಞಾನ ನೆರವಿನ ಕಲಿಕೆ ಕಾರ್ಯಕ್ರಮದ ಅನುಷ್ಠಾನ ಪ್ರಕ್ರಿಯೆಗಳ ಮತ್ತು ಸಾಧನೆಗಳ ಏಕಕಾಲಿಕ ಮೌಲ್ಯಮಾಪನ. |

| | | |
|---|---|---|
| 15 | ಸಹಕಾರ ಇಲಾಖೆ ಮತ್ತು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ. | 2014–15ರಿಂದ 2018–19ರವರೆಗೆ ಸಹಕಾರ ಸಂಸ್ಥೆಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಸ್ವಸಹಾಯ ಗುಂಪುಗಳು ಪಡೆದ ಸಾಂಸ್ಥಿಕ ಸಾಲದ ಬಳಕೆಯ ಮಾದರಿ ಮತ್ತು ಸದಸ್ಯರ ಉದ್ಯೋಗ, ಆಸ್ತಿಗಳು ಮತ್ತು ಆದಾಯದ ಮೇಲೆ ಅದರ ಪ್ರಭಾವ ಮತ್ತು ಸುಸ್ಥಿರ ಅಭಿವೃದ್ಧಿ ಗುರಿ–5ರ ಅಡಿ ಗುರಿಗಳ ಸಾಧನೆ ಕುರಿತು ಮೌಲ್ಯಮಾಪನ ಅಧ್ಯಯನ. |

| | | |
|---|---|---|
| 16 | ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಕರ್ನಾಟಕ ಸರ್ಕಾರ | ಸುಸ್ಥಿರ ಅಭಿವೃದ್ಧಿ ಗುರಿ–6ರ ಅಡಿಯಲ್ಲಿ ಗುರಿಗಳನ್ನು ಸಾಧಿಸಲು ಸೂಕ್ಷ್ಮ ನೀರಾವರಿ ಅಡಿಯಲ್ಲಿ ಪ್ರದೇಶದ ವ್ಯಾಪ್ತಿ, ಸೂಕ್ತವಾದ ಬೆಳೆ ಮಾದರಿಗೆ ಪ್ರೋತ್ಸಾಹ, ಬೆಳೆ ಉತ್ಪಾದಕತೆ, ವೆಚ್ಚ ಉಳಿತಾಯ ಮತ್ತು ನೀರಿನ ಬಳಕೆಯ ದಕ್ಷತೆ ಇವಗಳ ಮೇಲೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಪ್ರತಿ ಹನಿ ಹೆಚ್ಚು ಬೆಳೆ ಘಟಕದ ಪರಿಣಾಮ (2016–17 ರಿಂದ 2018–19). |

| | | |
|---|---|---|
| 17 | ಕೃಷಿ ಇಲಾಖೆ, ಕರ್ನಾಟಕ ಸರ್ಕಾರ | 2018–19ರ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ATMA)ಯೋಜನೆಯ ಏಕಕಾಲಿಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ. |
| 18 | ಅರಣ್ಯ ಇಲಾಖೆ | "ಮಾನವ ಆನೆ ಸಂಘರ್ಷ" ತಗ್ಗಿಸುವಿಕೆಗಾಗಿ ಬಳಸಿದ ವಿಧಾನಗಳು ಮತ್ತು ಸಂಘರ್ಷ ನಿರ್ಣಯದ ಮೇಲೆ ಅದರ ಪ್ರಭಾವ ಇವುಗಳ ಮೇಲಿನ ಅಧ್ಯಯನ (ಸಂಘರ್ಷಕ್ಕೆ ಕಾರಣಗಳು, ತಡೆಗೋಡೆಯ ಪರಿಣಾಮಕಾರಿತ್ವ, ಸಂಘರ್ಷದ ತಾಣಗಳು, ಅನುಗ್ರಹ ಪೂರ್ವಕ ಪಾವತಿಗಳು, ಪ್ರಾದೇಶಿಕ ಮತ್ತು ತಾತ್ಕಾಲಿಕ ಪ್ರಸರಣದಂತಹ ವಿಷಯಗಳನ್ನು ಒಳಗೊಂಡಿರುತ್ತದೆ). |

| | | |
|---|---|---|
| 19 | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮತ್ತು ಕರ್ನಾಟಕ ಉದ್ಯೋಗ ಮಿತ್ರ | ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಹೂಡಿಕೆದಾರ ಸ್ನೇಹಿ ವ್ಯಾಪಾರ ವಾತಾವರಣವನ್ನು ಉತ್ತೇಜಿಸುವಲ್ಲಿ (ವ್ಯವಹಾರವನ್ನು ಸುಲಭಗೊಳಿಸುವುದು) ಪ್ರಮುಖ ಸರ್ಕಾರಿ ಇಲಾಖೆಗಳ ಉದ್ಯಮ ಸಂಬಂಧಿತ ಸೇವಾ ಘಟಕಗಳ ಕಾರ್ಯವೈಖರಿ ಮತ್ತು ಪರಿಣಾಮಕಾರಿತ್ವದ ಮೌಲ್ಯಮಾಪನ (2018–19). |
| 20 | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ, ಕರ್ನಾಟಕ | ಅಲ್ಪಾವಧಿಯ ಮತ್ತು ಸಣ್ಣ ರೈತರು, ಕೃಷಿ ಕಾರ್ಮಿಕರು, ವಿಧವೆಯರು, ದೇವದಾಸಿಯರು ಮತ್ತು ತೊಂದರೆಗೀಡಾದ ಮಹಿಳೆಯರ ಜೀವನೋಪಾಯದ ಸುರಕ್ಷತೆಯ ಮೇಲೆ ಪಶು ಭಾಗ್ಯ ಯೋಜನೆಯ ಪರಿಣಾಮದ ಮೌಲ್ಯಮಾಪನ (2015–16 ರಿಂದ 2018–19). |

| | | |
|---|---|---|
| 21 | ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ | ಕರ್ನಾಟಕದ ಹುಲಿ ಪ್ರತಿಷ್ಠಾನಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು. |
| 22 | | ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಸಮವಸ್ತ್ರಧಾರಿ ಕಾರ್ಯಕರ್ತರಿಗೆ ಪ್ರವೇಶ ತರಬೇತಿ ಕಾರ್ಯಕ್ರಮದ ಮೌಲ್ಯಮಾಪನ. |
| 23 | ರಾಷ್ಟ್ರೀಯ ಬೀಜ ಯೋಜನೆ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು | 2017 ರಿಂದ 2020 ರ ಅವಧಿಯಲ್ಲಿ ಜಾರಿಗೆ ತರಲಾದ ಪ್ರಾಯೋಗಿಕ ಸುಸ್ಥಿರ ಮಾದರಿ ಬೀಜ ಯೋಜನೆಯ ಮೌಲ್ಯಮಾಪನ. |

| | | |
|---|---|---|
| 24 | ಕೃಷಿ ಕಾಲೇಜ್, ಬೆಂಗಳೂರು | 2012 ರಿಂದ 2015 ರ ಅವಧಿಯಲ್ಲಿ ಬೆಂಗಳೂರು, ಮಂಡ್ಯ ಚಿಂತಾಮಣಿ ಮತ್ತು ಹಿರಿಯೂರು ಈ ನಾಲ್ಕು ಕೇಂದ್ರಗಳಲ್ಲಿ ಜಾರಿಗೆ ತರಲಾದ ಕೃಷಿಯಲ್ಲಿ ಬಳಸಬಹುದಾದ ಜೈವಿಕ ವಿಘಟನೀಯ ನಗರ ಮತ್ತು ಪುರಸಭೆಯ ತ್ಯಾಜ್ಯದ ಮರುಬಳಕೆ ಯೋಜನೆಯ ಮೌಲ್ಯಮಾಪನ. |
| 25 | ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ–ಬೆಂಗಳೂರು | ಕರ್ನಾಟಕದ 15 ದಕ್ಷಿಣ ಜಿಲ್ಲೆಗಳಲ್ಲಿ 2011–12 ರಿಂದ 2015–16ರ ಅವಧಿಯಲ್ಲಿ ಜಾರಿಗೆ ತರಲಾದ ಸಮಗ್ರ ಕೃಷಿ ಪದ್ಧತಿಯ ಪ್ರದರ್ಶನಗಳ ಪರಿಣಾಮದ ಮೌಲ್ಯಮಾಪನ. |

| | | |
|---|---|---|
| 26 | ಕೃಷಿ ಇಲಾಖೆ (ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ– ಬೆಂಗಳೂರು) | ಮಂಡ್ಯದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯವು 2013–2019ರ ಅವಧಿಯಲ್ಲಿ ಜಾರಿಗೆ ತಂದ ಕಾವೇರಿ ಅಚ್ಚುಕಟ್ಟು ಪ್ರದೇಶದ ಜಲ ತಂತ್ರಜ್ಞಾನ ಕೇಂದ್ರದ ಮೌಲ್ಯಮಾಪನ. |
| 27 | ಕೃಷಿ ಇಲಾಖೆ (ರೇಷ್ಮೆ ಕಾಲೇಜ್, ಚಿಂತಾಮಣಿ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ– ಬೆಂಗಳೂರು) | ಸಮುದಾಯ ಗುಂಪು ವಿಧಾನದ ಮೂಲಕ ರೇಷ್ಮೆಗಾರಿಕೆಯಲ್ಲಿ ಉತ್ಪಾದಕತೆ ವರ್ಧನೆ ಯೋಜನೆಯ ಮೌಲ್ಯಮಾಪನ. |
| 28 | ಕೃಷಿ ಇಲಾಖೆ ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು | ರಾಜ್ಯದಲ್ಲಿ ಸಾವಯವ ಕೃಷಿಯ ಉತ್ತೇಜನ ಕುರಿತು ಸಂಶೋಧನಾ ಸಂಸ್ಥೆಯಲ್ಲಿ ಕೈಗೊಂಡ ಸಾವಯವ ಕೃಷಿ ಸಂಶೋಧನೆಯ ಪರಿಣಾಮದ ಮೌಲ್ಯಮಾಪನ (2016–17). |

| | | |
|---|---|---|
| 29 | ಕೃಷಿ ಇಲಾಖೆ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ರಾಯಚೂರು | ಸಣ್ಣ ಮತ್ತು ಅಲ್ಪಾವಧಿ ರೈತರಿಗೆ ಕಡಿಮೆ–ವೆಚ್ಚದ ಕೃಷಿ ಉಪಕರಣಗಳು ಮತ್ತು ಸಲಕರಣೆಗಳ ವಿನ್ಯಾಸ ಮತ್ತು ಅವುಗಳನ್ನು ಅಭಿವೃದ್ಧಿಪಡಿಸಿದ ಬಗ್ಗೆ ಬಳಕೆ ಮತ್ತು ಪರಿಣಾಮದ ಮೌಲ್ಯಮಾಪನ. |
| 30 | | ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಮುಖ ಕೃಷಿ ಬೆಳೆಗಳ ಮೇಲೆ ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮ. |
| 31 | | ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನ್ಯಾನೊ ತಂತ್ರಜ್ಞಾನದ ಅಳವಡಿಕೆಯ ಪರಿಣಾಮ. |
| 32 | | ಸೌರ ಮತ್ತು ಇತರ ನವೀಕರಿಸಬಹುದಾದ ಇಂಧನದ ಅಭಿವೃದ್ಧಿ, ಮತ್ತು ಪ್ರದರ್ಶನದ ಮೌಲ್ಯಮಾಪನ. |
| 33 | | ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪೌಷ್ಠಿಕಾಂಶದ |

| | | |
|---|---|---|
| | | ಸುರಕ್ಷತೆಗಾಗಿ ಸಿರಿಧಾನ್ಯಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ತಂತ್ರಜ್ಞಾನದ ಮೇಲೆ ಮೌಲ್ಯಮಾಪನ. |
| 34 | | ಇ–ಎಸ್‌ಎಪಿ ಮೂಲಕ ಆಯ್ದ ಬೆಳೆ ಪರಿಸರ ವ್ಯವಸ್ಥೆಗಳಲ್ಲಿ ಇ–ಕೀಟ ಕಣ್ಗಾವಲು ಯೋಜನೆಯ ಮೌಲ್ಯಮಾಪನ. |
| 35 | | ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕೀಟನಾಶಕ ಅವಶೇಷಗಳ ವಿಶ್ಲೇಷಣೆ ಪ್ರಯೋಗಾಲಯ ಸ್ಥಾಪನೆ ಯೋಜನೆಯ ಪರಿಣಾಮದ ಮೌಲ್ಯಮಾಪನ |
| 36 | | ಕೀಟಗಳು ಮತ್ತು ಹುಳಗಳನ್ನು ನಿಯಂತ್ರಿಸಲು ಕೀಟನಾಶಕ / ಹುಳಗಳ ಅಣುಗಳ ಹೈಥ್ರೂಪಟ್ ಕ್ರಿಯಾತ್ಮಕ ಗುಣಲಕ್ಷಣದ ಪರಿಣಾಮ. |

| | | |
|---|---|---|
| 37 | | ಆಯ್ದ ಕ್ಷೇತ್ರ ಬೆಳೆಗಳಿಗೆ ನಿಖರವಾದ ಕೃಷಿ ತಂತ್ರಗಳ ಪರಿಣಾಮದ ಮೌಲ್ಯಮಾಪನ. |
| 38 | | ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರದ ಪ್ರಭಾವ. |
| 39 | | ಹೈದರಾಬಾದ್–ಕರ್ನಾಟಕದಲ್ಲಿ ಸಾವಯವ ಕೃಷಿ ಕುರಿತು ಸಂಶೋಧನಾ ಸಂಸ್ಥೆ ಸ್ಥಾಪನೆ ಯೋಜನೆಯ ಮೌಲ್ಯಮಾಪನ. |
| 40 | ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ, ಧಾರವಾಡ | ಸಾವಯವ ಕೃಷಿ ಸಂಶೋಧನಾ ಸಂಸ್ಥೆ ಯೋಜನೆಯ ಮೌಲ್ಯಮಾಪನ. |
| 41 | | ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದಲ್ಲಿ ಹವಾಮಾನ ಬದಲಾವಣೆಯ ಕುರಿತು ಕೃಷಿ |

| | | |
|---|---|---|
| 42 | | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಕರ್ನಾಟಕದ ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರಿನ ಉತ್ಪಾದಕತೆಯನ್ನು ಹೆಚ್ಚಿಸುವ ಯೋಜನೆಯ ಮೌಲ್ಯಮಾಪನ |
| 43 | | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ ಕೃಷಿ ಯಂತ್ರೋಪಕರಣಗಳ ಪರೀಕ್ಷಾ ಕೇಂದ್ರ ಸ್ಥಾಪನೆ ಯೋಜನೆಯ ಕುರಿತು ಮೌಲ್ಯಮಾಪನ. |
| 44 | | ಸ್ಥಾಪಿತ ಬೆಲ್ಲದ ಸಮೂಹ ಉದ್ಯಮಗಳ ಮೂಲಕ ಸಾವಯವ ಬೆಲ್ಲದ ಉತ್ಪಾದನೆ, ಮೌಲ್ಯವರ್ಧನೆ, ಮಾರಾಟ ಮತ್ತು ಜನಪ್ರಿಯೀಕರಣ ಕುರಿತು ಪರಿಣಾಮದ ಮೌಲ್ಯಮಾಪನ |
| 45 | | ಪ್ರಮುಖ ಕೃಷಿ ಬೆಳೆಗಳಿಗೆ ಬೆಳೆ ಜೀವ ವೈವಿಧ್ಯ ಕೇಂದ್ರ ಸ್ಥಾಪನೆ ಕುರಿತ ಪರಿಣಾಮದ ವಿಶ್ಲೇಷಣೆ |

| | | |
|---|---|---|
| 46 | | ಬೆಳೆ ಸುಧಾರಣೆ ಮತ್ತು ಬೆಳೆ ಸಾಕಾಣಿಕೆ ಪದ್ಧತಿಗಳಲ್ಲಿ ನ್ಯಾನೊ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಮಧ್ಯಸ್ಥಿಕೆಗಳ ಕುರಿತು ಮೌಲ್ಯಮಾಪನ |
| 47 | | ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಲ್ಲಿ ಆಣ್ವಿಕ ನೆರವಿನ ಆಯ್ಕೆಯ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸಲು ಪ್ರಮುಖ ಕ್ಷೇತ್ರ ಬೆಳೆಗಳಲ್ಲಿ ಜೈವಿಕ ಒತ್ತಡ ಮತ್ತು ಬರ ಸಹಿಷ್ಣುತೆಗಾಗಿ ತಳಿ ಯೋಜನೆಯ ಪರಿಣಾಮ ವಿಶ್ಲೇಷಣೆ ಮಾಡುವುದು. |
| 48 | | ಬೆಳೆ ಸಸ್ಯಗಳಲ್ಲಿ ಬರ ಒತ್ತಡ ಮತ್ತು ರೋಗ ನಿರ್ವಹಣೆಗೆ ಅನುವಂಶಿಕತೆಯ ವಿಧಾನಗಳ ಮೌಲ್ಯಮಾಪನ. |
| 49 | | ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ–ಅರಣ್ಯ |

| | | |
|---|---|---|
| | | ಆಧಾರಿತ ಮೌಲ್ಯ ಸರಪಳಿ ವ್ಯವಸ್ಥೆಗಳ ಪರಿಣಾಮದ ಮೌಲ್ಯಮಾಪನ. |
| 50 | | ಗುರುತಿಸುವಿಕೆಯ ನೆರವಿನ ಆಯ್ಕೆಯ ಮೂಲಕ ನೆಲಗಡಲೆ ಮತ್ತು ಪ್ರಮುಖ ಕ್ಷೇತ್ರ ಬೆಳೆಗಳಲ್ಲಿ ರೋಗ / ಬರ ಸಹಿಷ್ಣುತೆಗಳಲ್ಲಿ ಕೃಷಿ ಮತ್ತು ಕಾಡು ಪ್ರಭೇದಗಳನ್ನು ಬಳಸಿಕೊಂಡು ಎಲೆಗಳ ರೋಗ ನಿರೋಧಕತೆಗಾಗಿ ಪರಿಚಯಾತ್ಮಕ ತಳಿಗಳ ಮೌಲ್ಯಮಾಪನ. |
| 51 | | ಆಣ್ವಿಕ ತಳಿಗಳ ಮೂಲಕ ನೆಲಗಡಲೆ, ಜೋಳ, ಬಟಾಣಿ ಮತ್ತು ಅಕ್ಕಿ ಇವುಗಳ ಉತ್ಪಾದಕತೆಯನ್ನು ಹೆಚ್ಚಿಸುವ ಯೋಜನೆಯ ಮೌಲ್ಯಮಾಪನ. |
| 52 | | ಪರಾವಲಂಬಿ ಕಳೆಗಳ ನಿರ್ವಹಣೆಯಲ್ಲಿ ನವೀನ ಜೈವಿಕ ಸಾಧನದ ಅಭಿವೃದ್ಧಿಯ ಪರಿಣಾಮದ ಮೌಲ್ಯಮಾಪನ. |

| | | |
|---|---|---|
| 53 | | ಉಪ್ಪು ಪೀಡಿತ ಮಣ್ಣಿನ ಜೈವಿಕ ಸುಧಾರಣೆಗೆ ಹ್ಯಾಲೊಫೈಟ್ಗಳು ಮತ್ತು ಉಪ್ಪು ನಿರೋಧಕ ವಂಶವಾಹಿಗಳ ಪರಿಶೋಧನೆಯ ಪರಿಣಾಮ |
| 54 | | ಬೇಳೆಕಾಳುಗಳಲ್ಲಿನ ಇಳುವರಿಯಲ್ಲಿ ಇರುವ ಅಡೆತಡೆಗಳನ್ನು ನಿವಾರಿಸಲು ಆಣ್ವಿಕ ಸಂತಾನೋತ್ಪತ್ತಿ ಮತ್ತು ಆನುವಂಶಿಕ ವರ್ಧನೆಯ ಪರಿಣಾಮ |

## 7. ಗುಣಮಟ್ಟದ ಉಪಕ್ರಮಗಳು

ಮೌಲ್ಯಮಾಪನ ಅಧ್ಯಯನಗಳ ಉಪಯುಕ್ತತೆಯನ್ನು ಹೆಚ್ಚಿಸಲು ಮತ್ತು ಸರ್ಕಾರದ ಪುರಾವೆ ಆಧಾರಿತ ನೀತಿ ತಯಾರಿಕೆ ಉಪಕ್ರಮಗಳನ್ನು ಬೆಂಬಲಿಸಲು, ಧ್ವನಿ ವಿಧಾನ ಮತ್ತು ನೆಲದ ವಾಸ್ತವತೆಗಳ ಆಧಾರದ ಮೇಲೆ ಗುಣಮಟ್ಟದ ಮೌಲ್ಯಮಾಪನ ವರದಿಗಳನ್ನು ತಯಾರಿಸುವುದು ಅಗತ್ಯವಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ತನ್ನ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಬಾಹ್ಯ ಲೆಕ್ಕ ಪರಿಶೋಧನೆಗೆ ಒಳಪಡಿಸಿತು ಮತ್ತು ಐಎಸ್‌ಒ 9001:2015 ಪ್ರಮಾಣ ಪತ್ರವನ್ನು ಪಡೆದು ಕೊಂಡಿತು. ಈ ನಿಟ್ಟಿನಲ್ಲಿ ಸದರಿ ಪ್ರಮಾಣ ಪತ್ರವನ್ನು ಮುಂದುವರೆಸಲು ದಿನಾಂಕ:11.03.2018 ರಂದು ಕಣ್ಗಾವಲು ಲೆಕ್ಕ ಪರಿಶೋಧನೆ ನಡೆಸಲಾಯಿತು. ಅಲ್ಲದೆ ದಿನಾಂಕ:11.03.2019 ರಂದು ಐಎಸ್‌ಒ ಮರು ಪ್ರಮಾಣೀಕರಣ ಕೈಗೊಂಡು ದಿನಾಂಕ:11.03.2019 ರಿಂದ 10.03.2022 ರವರೆಗೆ ಐಎಸ್‌ಒ 9001:2015 ಪ್ರಮಾಣಪತ್ರವನ್ನು ಮರು ಪ್ರಮಾಣೀಕರಿಸಲಾಯಿತು.

ಗುಣಮಟ್ಟದ ಮೌಲ್ಯಮಾಪನವನ್ನು ಉತ್ತೇಜಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಪ್ರಮುಖ ಕ್ರಮಗಳನ್ನು ಕೆಳಗೆ ಪ್ರಸ್ತುತಪಡಿಸಲಾಗಿರುತ್ತದೆ.

- ಆಡಳಿತ ಮಂಡಳಿಯನ್ನು ಮೌಲ್ಯಮಾಪನ ತಜ್ಞರೊಂದಿಗೆ ಪುನರ್‌ರಚಿಸಲಾಗಿರುತ್ತದೆ ಮತ್ತು ತಾಂತ್ರಿಕ ಸಮಿತಿಯನ್ನು ವಿವಿಧ ಕ್ಷೇತ್ರಗಳ ತಜ್ಞರೊಂದಿಗೆ ಪುನರ್‌ನಿರ್ಮಿಸಲಾಗಿರುತ್ತದೆ.
- ವಿವಿಧ ಹಂತಗಳಲ್ಲಿ ಉಲ್ಲೇಖ ನಿಯಮ, ದತ್ತಾಂಶ ಹಂಚಿಕೆ ಮತ್ತು ಸಲಹೆಗಳನ್ನು ವಿನ್ಯಾಸಗೊಳಿಸಲು ಇಲಾಖೆಗಳೊಂದಿಗೆ ನಡೆಸುವ ಸಭೆಗಳು.
- ಯೋಜನೆ / ಮಧ್ಯಸ್ಥಿಕೆಗಳ ಪರಿಣಾಮಗಳ ಎಲ್ಲಾ ಆಯಾಮಗಳನ್ನು ಸೆರೆಹಿಡಿಯಲು ಸಮಗ್ರ ಉಲ್ಲೇಖ ನಿಯಮಗಳು.

## ಮೌಲ್ಯಮಾಪನ ಅಧ್ಯಯನಕ್ಕಾಗಿ ಉತ್ತಮ ಸಮಾಲೋಚಕ ಸಂಸ್ಥೆಗಳ ಆಯ್ಕೆ

ವಾಸ್ತವಿಕ ಕ್ಷೇತ್ರ ದತ್ತಾಂಶದ ಆಧಾರದ ಮೇಲೆ ಉತ್ತಮ ಗುಣಮಟ್ಟದ ವರದಿಗಾಗಿ ಪರಿಣಿತ ಸಮಾಲೋಚಕ ಸಂಸ್ಥೆಯನ್ನು ಪಡೆಯಲು

ಪ್ರಸ್ತಾವನೆ ವಿನಂತಿ (RFP) ದಾಖಲೆಯನ್ನು ನಿಯಮಿತವಾಗಿ ನವೀಕರಿಸಲಾಗುತ್ತದೆ. ಅದರ ಕೆಲವು ಸೂಚಕಗಳು ಕೆಳಗಿನಂತಿವೆ.

- ಹೊಸ ಅಧ್ಯಯನಗಳಿಗೆ ಟೆಂಡರ್ ಪ್ರಸ್ತಾವನೆಯನ್ನು ಸಲ್ಲಿಸುವ ಸಮಯದಲ್ಲಿ ಮೌಲ್ಯಮಾಪನ ಸಮಾಲೋಚಕ ಸಂಸ್ಥೆಯಲ್ಲಿ ಎರಡು ಅಥವಾ ಹೆಚ್ಚಿನ ಅಧ್ಯಯನಗಳು ಬಾಕಿ ಉಳಿದಿರಬಾರದು.
- ತಂಡದ ಸದಸ್ಯರ ಶೈಕ್ಷಣಿಕ ಅರ್ಹತೆಯ ಜೊತೆಗೆ ಸಾಂಸ್ಥಿಕ ಮೌಲ್ಯಮಾಪನ ಸಾಮರ್ಥ್ಯಕ್ಕೆ ಒತ್ತನ್ನು ನೀಡಲು ಪ್ರಸ್ತಾವನೆಗಾಗಿ ವಿನಂತಿಯನ್ನು ಮಾರ್ಪಡಿಸಲಾಗಿರುತ್ತದೆ. ಸಮಾಲೋಚಕ ಸಂಸ್ಥೆಯ ಆಯ್ಕೆಯ ಪ್ರಕ್ರಿಯೆಯಲ್ಲಿ, ತಾಂತ್ರಿಕ ತೂಕವನ್ನು ಸಂಸ್ಥೆಯ ಸ್ಕೋರ್ – 25% ಮತ್ತು ಅಧ್ಯಯನ ತಂಡದ ಶೈಕ್ಷಣಿಕ ಅರ್ಹತೆಗೆ– 75% ಎಂಬಂತೆ ತಾಂತ್ರಿಕ ಪ್ರಸ್ತಾಪದ ಭಾಗ –2 (ಎ) ಅಡಿಯಲ್ಲಿ ಪರಿಷ್ಕರಿಸಲಾಗಿರುತ್ತದೆ. ಹೀಗಾಗಿ, ಸಂಸ್ಥೆಯ ಸಂಪನ್ಮೂಲ ಆಧಾರ ಮತ್ತು ಮೌಲ್ಯಮಾಪನದಲ್ಲಿನ ಅನುಭವ, ಮತ್ತು ಸಾಮರ್ಥ್ಯ ನಿರ್ಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
- ಪ್ರಧಾನ ಶೋಧಕರಿಗೆ ಗರಿಷ್ಠ ಅಂಕಗಳನ್ನು ಪರಿಷ್ಕರಿಸಲಾಗಿದ್ದು, ಅಧ್ಯಯನ ತಂಡದ ಅರ್ಹತೆ ಮತ್ತು ಅನುಭವದ ಒಟ್ಟು

ಅಂಕಗಳಲ್ಲಿ (ಗರಿಷ್ಠ 100) ಇವರಿಗೆ ಶೇ.40 ರಷ್ಟು ಹಾಗೂ ತಂಡದ ಉಳಿದ ಪ್ರಮುಖ ಸದಸ್ಯರಿಗೆ ಶೇ.60 ರಷ್ಟು ತೂಕದಂತೆ ಅಂಕಗಳ ಮಾನದಂಡವನ್ನು ಪರಿಷ್ಕರಿಸಲಾಗಿದೆ. ಅರ್ಹತೆ ಮತ್ತು ಅನುಭವವು ಮುಖ್ಯವಾಗಿ ಮೌಲ್ಯಮಾಪನದಲ್ಲಿನ ಪರಿಣತಿಯನ್ನು ಪರಿಗಣಿಸುತ್ತದೆ.

- ಪ್ರಾರಂಭಿಕ ವರದಿಯು ಅಧ್ಯಯನಕ್ಕೆ ಆಧಾರವಾಗಿದ್ದು, ಇದು ದತ್ತಾಂಶ, ಸೂಚಕಗಳು ಮತ್ತು ವಿಶ್ಲೇಷಣೆಯ ವಿಧಾನಗಳ ವಿವರಗಳನ್ನು ಸೆರೆಹಿಡಿಯುತ್ತದೆ. ಪ್ರಾರಂಭಿಕ ವರದಿ, ಅನುಮೋದನೆ ಹಾಗೂ ಸಮಯಾನುಕ್ರಮವನ್ನು ಪ್ರಕ್ರಿಯೆಗೊಳಿಸಲು ಪ್ರಸ್ತಾವನಾ ಕೋರಿಕೆಯಲ್ಲಿ ಹೊಸ ಷರತ್ತು ಸೇರಿಸಲಾಗಿರುತ್ತದೆ.
- ವಿತರಣೆಗಳ ಪರಿಷ್ಕರಣೆ ಮತ್ತು ಅಧ್ಯಯನದ ಮೌಲ್ಯಮಾಪನವನ್ನು ಕೈಗೊಳ್ಳಲು ಒಂದು ಸಮಯಾನುಕ್ರಮವನ್ನು ನಿಗದಿಪಡಿಸುವುದು.
- ಪ್ರಸ್ತಾವನೆಯ ಕೋರಿಕೆಯಲ್ಲಿನ ಹಿತಾಸಕ್ತಿ ಸಂಘರ್ಷದ ಷರತ್ತಿನ ಪರಿಷ್ಕರಣೆ ಮಾಡುವುದು.
- ಸಂಪನ್ಮೂಲಗಳ ಗರಿಷ್ಠ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾವನಾ ಕೋರಿಕೆಯ ಹಣಕಾಸು ಪ್ರಸ್ತಾವನೆಯ ಕೋಷ್ಟಕ 4

ಬಿ ಅಡಿಯಲ್ಲಿ ಹಣಕಾಸಿನ ಮಾನದಂಡಗಳ ಪರಿಷ್ಕರಣೆ ಮಾಡುವುದು.

- ಸಾಮರಸ್ಯ ಮತ್ತು ಸ್ವಾಯತ್ತತೆಯನ್ನು ಖಚಿತಪಡಿಸಿಕೊಳ್ಳಲು ಗುತ್ತಿಗೆ ಒಪ್ಪಂದದಲ್ಲಿನ ದಂಡ, ಸಮಾಲೋಚನಾ ಶುಲ್ಕ ಮತ್ತು ಪಾವತಿ ವೇಳಾಪಟ್ಟಿ, ಹೊಣೆಗಾರಿಕೆಗೆ ಮಿತಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಷರತ್ತುಗಳ ಮಾರ್ಪಡಿಸುವಿಕೆ.
- ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳು ಪ್ರಸ್ತಾವನೆಯ ಪ್ರಸ್ತುತಿಯನ್ನು ಇಲಾಖೆಯ ಸದಸ್ಯರು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳು ಹಾಗೂ ವಿಶೇಷ ಆಹ್ವಾನಿತರಾದ ಕ್ಷೇತ್ರ ಜ್ಞಾನವನ್ನು ಹೊಂದಿರುವ ವಿಷಯ ತಜ್ಞರುಗಳನ್ನು ಹೊಂದಿರುವ ಟೆಂಡರ್ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸಬೇಕಾಗುತ್ತದೆ.
- ಕೆಳಗಿನಂತೆ ನಿಯತಾಂಕಗಳನ್ನು ಆಧರಿಸಿ ಪ್ರಸ್ತುತಿಯನ್ನು ನಿರ್ಣಯಿಸಲಾಗುತ್ತದೆ.
- ಸಾಮಾನ್ಯ ಮಾನದಂಡ

   i. ಮೌಲ್ಯಮಾಪನ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಆಯಾಮಗಳ ಬಗ್ಗೆ ತಿಳುವಳಿಕೆ (20 ಅಂಕಗಳು)
   ii. ಕಾರ್ಯಕ್ರಮದ ಬಗ್ಗೆ ಪರಿಕಲ್ಪನಾ ಸ್ಪಷ್ಟತೆ, ಅದರ ಸಂದರ್ಭದ ಉದ್ದೇಶಗಳು ಮತ್ತು ಭಾಗಿಯಾದ ಮಧ್ಯಸ್ಥಗಾರರು (20 ಅಂಕಗಳು)

- ನಿರ್ದಿಷ್ಟ ಮಾನದಂಡ
   i. ಈ ಅಧ್ಯಯನಕ್ಕೆ ಸಂಬಂಧಿಸಿದ ಹಿಂದಿನ ಸಾಹಿತ್ಯ ಮತ್ತು ಹಿಂದಿನ ಮೌಲ್ಯಮಾಪನ ಅಧ್ಯಯನಗಳ ವಿಮರ್ಶೆ (10 ಅಂಕಗಳು)
   ii. ಮೌಲ್ಯಮಾಪನ ರೀತಿ (20 ಅಂಕಗಳು)
   iii. ಅಧ್ಯಯನಕ್ಕಾಗಿ ಪ್ರಸ್ತಾಪಿಸಲಾದ ಮೌಲ್ಯಮಾಪನ ವಿಧಾನ (25 ಅಂಕಗಳು)
   iv. ಸ್ಥಳೀಯ ಭಾಷೆಯೊಂದಿಗೆ ಪರಿಚಯ ಮತ್ತು ಸಂವಹನ ಕೌಶಲ್ಯಗಳು (5 ಅಂಕಗಳು)

ಮತ್ತು ಅಂಕಗಳನ್ನು ಸಮಿತಿ ಸದಸ್ಯರು ನೀಡುತ್ತಾರೆ. ಕಾರ್ಯಕ್ಷಮತೆ ಶ್ರೇಯಾಂಕಕ್ಕಾಗಿ ಸರಾಸರಿ ಅಂಕಗಳನ್ನು ಪರಿಗಣಿಸಲಾಗುತ್ತದೆ.

## ಅಧ್ಯಯನದ ವಿವಿಧ ಹಂತಗಳಲ್ಲಿ ಗುಣಮಟ್ಟದ ಪರಿಶೀಲನೆ

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳಿಗೆ ಮೌಲ್ಯಮಾಪನದ ವಿವಿಧ ಹಂತಗಳಲ್ಲಿ ಒಳಹರಿವು / ಸಲಹೆಗಳನ್ನು ನೀಡಲು ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಂತೆ ತಜ್ಞರ ಸಮಗ್ರ ಪಟ್ಟಿಯನ್ನು ತಯಾರಿಸಲಾಗಿರುತ್ತದೆ.
- ವಿವಿಧ ಮೌಲ್ಯಮಾಪನ ಅಧ್ಯಯನಗಳ ಉಲ್ಲೇಖ ನಿಯಮಗಳಲ್ಲಿ ಸೂಕ್ತ ಮಾದರಿ ವಿನ್ಯಾಸವನ್ನು ರೂಪಿಸಲು ಸರ್ಕಾರಿ ಆದೇಶ ಸಂಖ್ಯೆ: ಪಿಡಿ 102 ಪಿಎಸ್‌ಡಿ 2015, ಬೆಂಗಳೂರು, ದಿನಾಂಕ:04.01.2016ರನ್ವಯ ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿರುವ ಸಮಿತಿಯಿಂದ ಅಧ್ಯಯನಕ್ಕಾಗಿ ಯಾದೃಚ್ಛಿಕ ಮಾದರಿಯು ರಚಿಸಲ್ಪಡುತ್ತದೆ.
- ಈ ಸಮಿತಿಯು ಮೌಲ್ಯಮಾಪನ ಸಮಲೋಚಕ ಸಂಸ್ಥೆಯು ತಯಾರಿಸಿದ ಪ್ರಶ್ನಾವಳಿಗಳನ್ನು ಸಹ ಸಿದ್ಧಪಡಿಸುತ್ತದೆ / ಪರಿಶೀಲಿಸುತ್ತದೆ. ಸಮಿತಿಯು 2018–19ರ ಅವಧಿಯಲ್ಲಿ

ಮೌಲ್ಯಮಾಪನ ಅಧ್ಯಯನಕ್ಕಾಗಿ ಮಾದರಿ ವಿನ್ಯಾಸದಲ್ಲಿ ತೊಡಗಿಸಿಕೊಂಡಿರುತ್ತದೆ.

- ಅಧ್ಯಯನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮತ್ತು ತಜ್ಞರ ಸಲಹೆಗಳನ್ನು ನೀಡಲು ಪ್ರತಿ ತಿಂಗಳು ವಿಮರ್ಶಾ ಸಭೆಗಳನ್ನು ನಡೆಸಲಾಗುತ್ತಿದೆ.
- ಕರಡು ಮೌಲ್ಯಮಾಪನ ವರದಿಯು ಕರ್ನಾಟಕ ಮೌಲ್ಯಮಾಪನದ ಪ್ರಾಧಿಕಾರದ ತಂಡ ಮತ್ತು ಸ್ವತಂತ್ರ ಮೌಲ್ಯಮಾಪಕ / ವಿಷಯ ತಜ್ಞರಿಂದ ನಿರ್ಣಯಿಸಲ್ಪಡುತ್ತದೆ. ಅಭಿಪ್ರಾಯ / ಸಲಹೆಗಳಿಗಾಗಿ ಇದನ್ನು ಇಲಾಖೆಗೆ ಕಳುಹಿಸಲಾಗುತ್ತದೆ. ಎಲ್ಲರೂ ನೀಡಿದ ಅಭಿಪ್ರಾಯಗಳ ಪ್ರಕಾರ ವರದಿಯನ್ನು ಪರಿಷ್ಕರಿಸಲಾಗುತ್ತದೆ. ಅದರ ಅನುಮೋದನೆ / ಪರಿಷ್ಕರಣೆಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನಕ್ಕಾಗಿ ಅದನ್ನು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಎಲ್ಲಾ ಪರಿಷ್ಕರಣೆಗಳನ್ನು ನಡೆಸಿದ ನಂತರ, ವರದಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪರಿಶೀಲಿಸಿ ಅನುಮೋದಿಸುತ್ತದೆ.
- ಅಧ್ಯಯನದಲ್ಲಿ ಮಾಡಿದ ಶಿಫಾರಸ್ಸುಗಳಿಗಾಗಿ ಕ್ರಮ ಕೈಗೊಂಡ ವರದಿಗಳನ್ನು ಸರ್ಕಾರದ ಅಪರ ಮುಖ್ಯ ಕಾಯದರ್ಶಿಗಳು,

ಯೋಜನಾ ಇಲಾಖೆ ಇವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ಪರಿಶೀಲಿಸುತ್ತದೆ.

# 8. ಮೌಲ್ಯಮಾಪನಗಳ ಪರಿಣಾಮ

ಮೌಲ್ಯಮಾಪನದ ಫಲಿತಾಂಶವು ಯೋಜನೆಯ ಮಾರ್ಗಸೂಚಿಗಳಲ್ಲಿನ ಮಧ್ಯಾವಧಿಯ ತಿದ್ದುಪಡಿಗಳು, ಅನುಷ್ಠಾನ ಪ್ರಕ್ರಿಯೆಗಳಿಂದ ವರ್ಧಿತ ಸಾಧನೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ ಮೌಲ್ಯಮಾಪನ ಅಧ್ಯಯನಗಳಲ್ಲಿ ಶಿಫಾರಸ್ಸುಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ಮೌಲ್ಯಮಾಪನದ ಪ್ರಾಧಿಕಾರವು ನಿರಂತರವಾಗಿ ಪ್ರಯತ್ನಿಸುತ್ತಿದೆ. ಇಲಾಖೆಗಳಿಂದ ಕ್ರಮ ಕೈಗೊಂಡ ವರದಿಗಳನ್ನು ಪಡೆಯುವವರೆಗೆ ಸಂಬಂಧಪಟ್ಟ ಇಲಾಖೆಗಳ ಜೊತೆಗೆ ಅನುಸರಣೆಯು ಮುಂದುವರಿಯುತ್ತದೆ.

03–08–2019 ರಂದು ನಡೆದ 19ನೇ ಆಡಳಿತ ಮಂಡಳಿಯ ಸಭೆಯ ಅನುಮೋದನೆಯಂತೆ, ಮೌಲ್ಯಮಾಪನ ಅಧ್ಯಯನಗಳ ಬಗ್ಗೆ ಕ್ರಮ ಕೈಗೊಂಡ ವರದಿಗಳನ್ನು ಪರಿಶೀಲಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯ ಅಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಪಿಡಿ 66 ಪಿಎಸ್‌ಡಿ 2019, ದಿನಾಂಕ: 06–09–2019ರನ್ವಯ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಮೊದಲ ಸಭೆಯು ದಿನಾಂಕ: 13–09–2019 ರಂದು ಜರುಗಿದ್ದು, ಮೌಲ್ಯಮಾಪನಗಳ ಶಿಫಾರಸುಗಳ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಸಲ್ಲಿಸುವಂತೆ

ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ನೀಡಲಾಗಿದೆ ಮತ್ತು ಈ ಪ್ರಕ್ರಿಯೆಯನ್ನು ಇಲಾಖೆಗಳೊಂದಿಗೆ ನಿರಂತರವಾಗಿ ಅನುಸರಿಸಲಾಗುತ್ತಿದೆ. ಒಟ್ಟು 137 ಮೌಲ್ಯಮಾಪನ ಅಧ್ಯಯನಗಳಲ್ಲಿ, 103 ಕ್ರಮ ಕೈಗೊಂಡ ವರದಿಗಳನ್ನು ಸ್ವೀಕರಿಸಲಾಗಿದೆ.

- ಸಿ–ಸ್ಟೆಪ್ ಮೂಲಕ ನಡೆಸಿದ ಸಂಶೋಧನಾ ಅಧ್ಯಯನಗಳು ಈಗ ವಿವಿಧ ಇಲಾಖೆಗಳಲ್ಲಿ ಕಾರ್ಯಗತವಾಗುವ ಪ್ರಕ್ರಿಯೆಯಲ್ಲಿವೆ. ಸೌರ ಆಧಾರಿತ ಉತ್ಪಾದನೆಯನ್ನು ಬಳಸಿಕೊಂಡು ನೀರಾವರಿ ಪಂಪ್ ಸೆಟ್‌ಗಳಿಗಾಗಿ ಮೀಸಲಾದ ಫೀಡರ್‌ಗಳ ಯೋಜನೆಯನ್ನು ಇಂಧನ ಇಲಾಖೆಯು ಅನುಷ್ಠಾನಕ್ಕೆ ತೆಗೆದುಕೊಂಡಿರುತ್ತದೆ. ಇಂಧನ ಉಳಿತಾಯಕ್ಕಾಗಿ 5 ಲಕ್ಷ ನೀರಾವರಿ ಪಂಪ್ ಸೆಟ್‌ಗಳನ್ನು ಬದಲಿಸುವುದು ಸಹ ಇಲಾಖೆಯ ಪರಿಗಣನೆಯಲ್ಲಿರುತ್ತದೆ.
- ಕರ್ನಾಟಕದಲ್ಲಿ '104 ಆರೋಗ್ಯ ಸಹಾಯವಾಣಿ'– ಆರೋಗ್ಯ ಮಾಹಿತಿ ಸಹಾಯವಾಣಿಯ ಏಕಕಾಲೀನ ಮೌಲ್ಯಮಾಪನದಲ್ಲಿ ನೀಡಲಾದ ಸಲಹೆಗಳನ್ನು ಮತ್ತು ಅದರ ವರ್ಧನೆ ಮತ್ತು ಮಾರ್ಪಾಡುಗಳಿಂದ ಕೇಂದ್ರಿತವಾದ ಮೌಲ್ಯಮಾಪನವನ್ನು ಜಾರಿಗೆ ತರಲಾಗುತ್ತಿದೆ ಮತ್ತು ಕೋವಿಡ್ –19 ರಲ್ಲಿನ ಆರೋಗ್ಯ

ಸಮಸ್ಯೆಗಳನ್ನು ಪರಿಹರಿಸಲು ಈ ಸಹಾಯವಾಣಿಯನ್ನು ಬಳಸಲಾಗುತ್ತಿದೆ.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅನುಷ್ಟಾನಗೊಳಿಸಲಾದ ಕರ್ನಾಟಕದಲ್ಲಿ ಕೌಟುಂಬಿಕ ಹಿಂಸಾಚಾರದಿಂದ ಮಹಿಳೆಯರ ರಕ್ಷಣೆಯ ಅಧಿನಿಯಮ 2005ರ ಮೌಲ್ಯಮಾಪನದಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸಿಬ್ಬಂದಿಯನ್ನು ನೇಮಿಸುವ ಮೂಲಕ ಅಧಿನಿಯಮದ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಮಹಿಳೆಯರಲ್ಲಿ ಕಾನೂನು ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸುತ್ತಿದೆ.
- ಮೂಢ ನಂಬಿಕೆಗಳ ಕುರಿತಾದ ಅಧ್ಯಯನವು ಕಾನೂನನ್ನು ರೂಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತದೆ.
- ಸಂರಕ್ಷಿತ ಕೃಷಿಯಡಿಯಲ್ಲಿ ಹಸಿರುಮನೆ ಕೃಷಿ ಅಧ್ಯಯನದಿಂದ ಏಕಗ್ರಾಮ ಸಮೂಹಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸುರಂಗ ಕೃಷಿ ತಂತ್ರಗಳನ್ನು ಪರಿಗಣಿಸಲಾಗುತ್ತಿದೆ. ತೋಟಗಾರಿಕೆ ಬೆಳೆ ರಚನೆಗಳಿಗಾಗಿ ಮೌಲ್ಯ ಸರಪಳಿ ಮತ್ತು ಶೀತಲ ಸರಪಳಿ ರಚಿಸುವ

ಕುರಿತು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಅಧ್ಯಯನ ವರದಿಯನ್ನು ಪ್ರಾರಂಭಿಸಲಾಗಿರುತ್ತದೆ. ಎಚ್‌ಬಿಎಂಎಸ್ ಎಂಬ ಹೊಸತಂತ್ರಾಂಶವನ್ನು ಆನ್‌ಲೈನ್ ನೋಂದಣಿಗೆ ಪರಿಚಯಿಸಲಾಗಿರುತ್ತದೆ.

- ಮೇವು ಅಭಿವೃದ್ಧಿ ಕಾರ್ಯಕ್ರಮದ ಅಧ್ಯಯನವು ಮೇವಿನ ಭದ್ರತಾ ನೀತಿಗೆ ಶಿಫಾರಸ್ಸು ಮಾಡಿರುತ್ತದೆ. ಅದು ಸರ್ಕಾರದ ಪರಿಗಣನೆಯಲ್ಲಿದೆ.
- ಪೌಷ್ಟಿಕಾಂಶ ಪುನರ್ವಸತಿ ಕೇಂದ್ರದ ಕುರಿತಾದ ಅಧ್ಯಯನವು ರಾಜ್ಯ ಪೌಷ್ಟಿಕಾಂಶ ಭದ್ರತಾ ನೀತಿಗೆ ಶಿಫಾರಸ್ಸು ಮಾಡಿರುತ್ತದೆ.
- ಭಾಗಲ್ಯಕ್ಷ್ಮಿ ಯೋಜನೆಯ ಮೌಲ್ಯಮಾಪನವು ಯೋಜನೆಯ ದೃಷ್ಟಿಕೋನದಲ್ಲಿ ಬದಲಾವಣೆ ತರಲು ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕೆ 6, 8, 10, 12 ನೇ ತರಗತಿಗಳ ಮತ್ತು ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಪ್ರೋತ್ಸಾಹ ಧನ ನೀಡಲು ಮಾರ್ಗಸೂಚಿಗಳಲ್ಲಿ ಬದಲಾವಣೆ ತರಲು ಸಲಹೆ ಮಾಡಿರುತ್ತದೆ.

# 9. ವಿಸ್ತರಿತ ಚಟುವಟಿಕೆಗಳು

ಆಡಳಿತ ಮಂಡಳಿಯ 19ನೇ ಸಭೆಯಲ್ಲಿ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯ ಮೂಲಕ ಅಭಿವೃದ್ಧಿ ಫಲಿತಾಂಶಗಳನ್ನು ಗರಿಷ್ಠ ಗೊಳಿಸಲು ಹೊಸ ಕಾರ್ಯಕ್ರಮಗಳ ಯೋಜನೆ ಮತ್ತು ಆಯವ್ಯಯ ಕಾಯ್ದಿರಿಸುವಿಕೆ, ಅಸ್ತಿತ್ವದಲ್ಲಿರುವ ಯೋಜನೆಗಳ ಪುನರ್ರಚಿಸುವಿಕೆ, ಪರಿಣಾಮಕಾರಿ ಫಲಾನುಭವಿ ಆಧಾರಿತ ವಿನ್ಯಾಸಗಳು ಮತ್ತು ನವೀನ ಅನುಷ್ಠಾನ ಸಾಧನಗಳ ಸಮಗ್ರ ವಿಶ್ಲೇಷಣೆಯ ಆಧಾರದ ಮೇಲೆ ಸರ್ಕಾರಕ್ಕೆ ನೀತಿ ಒಳ ಹರಿವುಗಳನ್ನು ಒದಗಿಸುವ ಸಾಮರ್ಥ್ಯ ನಿರ್ಮಾಣದ ಮೂಲಕ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಥಿಂಕ್‌ಟ್ಯಾಂಕ್ ಆಗಿ ಗ್ರಹಿಸಬಹುದು ಎಂಬುದಾಗಿ ಸಲಹೆ ನೀಡಲಾಯಿತು.

ಈ ಹಿನ್ನೆಲೆಯಲ್ಲಿ ಅಗತ್ಯಾನುಸಾರ ಕ್ಷೇತ್ರ ತಜ್ಞರುಳ್ಳ ಕೆಲವು ಉಪಸಮಿತಿಗಳನ್ನು ರಚಿಸುವ ನಿರ್ಧರಿಸಲಾಯಿತು. ಈ ಕೆಳಗಿನ ಉಪ ಸಮಿತಿಗಳನ್ನು ಈಗ ರಚಿಸಲಾಗಿರುತ್ತದೆ.

1. ಒಟ್ಟು ರಾಜ್ಯ ಆಂತರಿಕ ಉತ್ಪನ್ನದ (GSDP) ಅಂದಾಜು
2. ಶಿಕ್ಷಣ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ
3. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

4. ಕರ್ನಾಟಕದ ಸಂತೋಷ ಸೂಚ್ಯಂಕದ ಅಂದಾಜು

ಒಟ್ಟು ರಾಜ್ಯ ಆಂತರಿಕ ಉತ್ಪನ್ನದ (GSDP) ಅಂದಾಜು

| ಕ್ರಮ ಸಂಖ್ಯೆ | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2 | ಡಾ. ವಸುಂಧರಾದೇವಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | ಸದಸ್ಯರು |
| 3 | ಡಾ. ಭಾನುಮೂರ್ತಿ | ಸದಸ್ಯರು |
| 4 | ಡಾ. ಮಾಧೇಸ್ವರನ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು | ಸದಸ್ಯರು |

| | | |
|---|---|---|
| 5 | ಡಾ. ಎಂ. ಆರ್. ನಾರಾಯಣ, ವಿತ್ತೀಯ ನೀತಿ ಸಂಸ್ಥೆ, ಬೆಂಗಳೂರು | ಸದಸ್ಯರು |
| 6 | ಡಾ. ವಾಣಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು | ಸದಸ್ಯರು |
| 7 | ಡಾ. ಗೋಪಾಲ ನಾಯಕ್, ಭಾರತೀಯ ನಿರ್ವಹಣಾ ಸಂಸ್ಥೆ, ಬೆಂಗಳೂರು | ಸದಸ್ಯರು |
| 8 | ಡಾ. ಛಾಯಾ ಕೆ. ದೇಗಾಂವ್ಕರ್ | ಸದಸ್ಯರು |
| 9 | ಶ್ರೀ ಫಣಿ ಎನ್ | ಸದಸ್ಯರು |

## ಶಿಕ್ಷಣ, ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| 3 | ಡಾ. ರಿಷಿಕೇಶ್, ಅಜಿಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ | ಸದಸ್ಯರು |
| 4 | ಡಾ. ಮಾಧೇಸ್ವರನ್ | ಸದಸ್ಯರು |
| 5 | ಡಾ. ಅಬ್ದುಲ್ ಅಜೀಜ್ | ಸದಸ್ಯರು |
| 6 | ಡಾ. ನರೇಂದ್ರ ಫಣಿ | ಸದಸ್ಯರು |

| | | |
|---|---|---|
| 7 | ಡಾ. ಕೆ. ಗಾಯತ್ರಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು | ಸದಸ್ಯರು |
| 8 | ಡಾ. ಅನಿತಾ ಕುರುಪ್, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ | ಸದಸ್ಯರು |
| 9 | ಡಾ. ಛಾಯಾ ಕೆ. ದೇಗಾಂವ್ಕರ್ | ಸದಸ್ಯರು |

## ಮಹಿಳೆಯರು ಮತ್ತು ಮಕ್ಕಳಿಗೆ ಕಾನೂನುಗಳು ಮತ್ತು ಕಾನೂನು ಅರಿವು

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |

| | | |
|---|---|---|
| 2 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| 3 | ಡಾ. ಸರಸು ಥಾಮಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ | ಸದಸ್ಯರು |
| 4 | ಡಾ. ನಿರಂಜನ್ ಆರಾಧ್ಯ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ | ಸದಸ್ಯರು |
| 5 | ಡಾ. ಸೋನಿ ಪೆಳ್ಳಿಸೆನಿ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ | ಸದಸ್ಯರು |
| 6 | ಡಾ. ಮೀನಾಕ್ಷಿ ರಾಜೀವ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ | ಸದಸ್ಯರು |
| 7 | ಡಾ. ಛಾಯಾ ಕೆ. ದೇಗಾಂವ್ಕರ್ | ಸದಸ್ಯರು |

## ಕರ್ನಾಟಕದ ಸಂತೋಷ ಸೂಚ್ಯಂಕ

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | ಸದಸ್ಯ ಕಾರ್ಯದರ್ಶಿಗಳು |
| 3 | ಡಾ. ಟಿ. ಆರ್. ಚಂದ್ರಶೇಖರ್ | ಸದಸ್ಯರು |
| 4 | ಡಾ. ಅಬ್ದುಲ್ ಅಜೀಜ್ | ಸದಸ್ಯರು |
| 5 | ಡಾ. ವಾಣಿ ಬಿ.ಪಿ. | ಸದಸ್ಯರು |
| 6 | ಡಾ. ಮಾಧೇಸ್ವರನ್ | ಸದಸ್ಯರು |
| 7 | ಡಾ. ಛಾಯಾ ಕೆ. ದೇಗಾಂವ್ಕರ್ | ಸದಸ್ಯರು |

## ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂವಹನ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನಿರಂತರವಾಗಿ ಜ್ಞಾನವನ್ನು ಹುಡುಕುವುದರಲ್ಲಿ ಮತ್ತು ಅನ್ವೇಷಣೆಗಳ ವಿನಿಮಯದಲ್ಲಿ ತೊಡಗಿದೆ. ಈ ವರ್ಷದಲ್ಲಿ ವಿಶೇಷ ವ್ಯಕ್ತಿಗಳೊಂದಿಗಿನ ಭೇಟಿಗಳು ಪರಸ್ಪರ ಲಾಭಕ್ಕೆ ಕಾರಣವಾಗಿವೆ.

ಆಗಸ್ಟ್ 7, 2019ರಂದು, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಡಾ. ಎ ಕೆ ಶಿವಕುಮಾರ್ ಅವರು ಉಪ ರಾಷ್ಟ್ರೀಯ ಮಟ್ಟದಲ್ಲಿ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನಕ್ಕಾಗಿ ದೇಶದ ಮಾದರಿಗಳನ್ನು ಗಮನಿಸುವ ಹಿನ್ನೆಲೆಯಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಭೇಟಿ ನೀಡಿದರು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಮೌಲ್ಯಮಾಪನ ಪ್ರಕ್ರಿಯೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಯೋಜನೆ ಮತ್ತು ಅನುಷ್ಠಾನದಲ್ಲಿ ಮಾತ್ರ ಇಲಾಖೆಗೆ ಪ್ರಾಧಿಕಾರದ ಬೆಂಬಲದ ಬಗ್ಗೆ ಚರ್ಚಿಸಿದರು. ಗುಣಮಟ್ಟದ ವರ್ಧನೆಗಾಗಿ ಅವರು ಅನೇಕ ಸಲಹೆಗಳನ್ನು



ನೀಡಿದ್ದು, ಅದನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪರಿಣಾಮಕಾರಿಯಾಗಿ ಜಾರಿಗೆ ತಂದಿರುತ್ತದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯವೈಖರಿಯನ್ನು ಅರ್ಥಮಾಡಿಕೊಳ್ಳಲು ಮೆಕ್ಸಿಕೊ ಕನೆವಾಲ್ ತಂಡ ಮತ್ತು ನೀತಿ ಆಯೋಗ ತಂಡದ ಭೇಟಿ

ಮೆಕ್ಸಿಕನ್ ಅರ್ಥಶಾಸ್ತ್ರಜ್ಞ ಮತ್ತು ಬಡತನ ವಿಶ್ಲೇಷಿತ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಕಾರ್ಯಕ್ರಮ ಮೌಲ್ಯಮಾಪನ ಕ್ಷೇತ್ರದಲ್ಲಿ ಪ್ರಖ್ಯಾತ



ವಿದ್ವಾಂಸರಾದ ಡಾ. ಗೊನ್ಜಾಲೋ ಹೆರ್ನಾಂಡೆಜ್ ಲಿಕೊನಾ ಅವರ ಫೆಬ್ರವರಿ 26, 2020 ರಂದು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ನೀಡಿದ ವಿಶಿಷ್ಠ ಭೇಟಿಯಾಗಿರುತ್ತದೆ. ಅವರು ಸಾಮಾಜಿಕ ಅಭಿವೃದ್ಧಿ ನೀತಿಯ ಮೌಲ್ಯಮಾಪನಕ್ಕಾಗಿ ರಚಿಸಲಾದ ರಾಷ್ಟ್ರೀಯ ಮಂಡಳಿಯ (CONEVAL)ಸ್ಥಾಪಕರಾಗಿದ್ದಾರೆ. ಅವರೊಂದಿಗೆ ನಿರ್ದೇಶಕ ಅಲೋಕ್ ಮಿಶ್ರಾ, ಅಭಿವೃದ್ಧಿಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಚೇರಿ (DEMO) ಮತ್ತು ಯೂನಿಸೆಫ್‌ನ ಪ್ರತಿನಿಧಿಗಳು ಇದ್ದರು. ಕರ್ನಾಟಕಕ್ಕೆ

ನೀಡಿದ ಉದ್ದೇಶಿತ ಭೇಟಿಯು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಇಲಾಖೆಗಳಲ್ಲಿ ಬೆಂಬಲಿತ ಘಟಕಗಳೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಯೋಜನೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನುಳ್ಳ ದೇಶದ ಪ್ರಮುಖ ರಾಜ್ಯವಾದ ಕರ್ನಾಟಕದ ಉದಾಹರಣೆಯನ್ನು ಪ್ರದರ್ಶಿಸುವುದಾಗಿರುತ್ತದೆ.

ಸುಸ್ಥಿರ ಅಭಿವೃದ್ಧಿ ಗುರಿ –2030ನ್ನು ಸಾಧಿಸಲು ಸಾಕ್ಷಾಧಾರಿತ ನೀತಿ ತಯಾರಿಕೆ ಮತ್ತು ಉತ್ಪನ್ನ–ಫಲಿತಾಂಶ ಆಧಾರಿತ ಮಾದರಿಯತ್ತ ರಾಜ್ಯವು ಸ್ಥಿರವಾಗಿ



ಸಾಗುತ್ತಿರುವುದರಿಂದ ಮೌಲ್ಯಮಾಪನಗಳನ್ನು ಸಾಂಸ್ಥೀಕರಣಗೊಳಿಸುವ ಮತ್ತು ಸ್ಥಳೀಯ ಸಂಯೋಜನೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಬಲಪಡಿಸುವ ಕ್ಷೇತ್ರದಲ್ಲಿ ಡಾ. ಗೊನ್ಜಾಲೊ ಅವರ ಶ್ರೀಮಂತ ಅನುಭವವು ರಾಜ್ಯಕ್ಕೆ ಉಪಯುಕ್ತವಾಗಿದೆ.

ಅಭಿವೃದ್ಧಿಯ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಚೇರಿ ನಿರ್ದೇಶಕ ಅಲೋಕ್ ಮಿಶ್ರಾ ಅವರು ಕೂಡ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕಾರ್ಯವೈಖರಿಯನ್ನು ಗಮನಿಸಿದರು ಮತ್ತು ಭವಿಷ್ಯದ ನಡೆಗಳಲ್ಲಿ ಕರ್ನಾಟಕ

ಮೌಲ್ಯಮಾಪನ ಪ್ರಾಧಿಕಾರದ ಜೊತೆಗೂಡಲು ತೀವ್ರ ಆಸಕ್ತಿ ತೋರಿಸಿದರು. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಂಪಾನಲ್ಮೆಂಟ್ ಮತ್ತು ಮೌಲ್ಯಮಾಪನ ಕೈಪಿಡಿಗಳನ್ನು ತಮ್ಮ ಕಚೇರಿಯಲ್ಲಿ ಅಳವಡಿಸಿಕೊಳ್ಳಲು ಗಮನ ಹರಿಸಲಾಗುವುದು ಎಂದು ಅವರು ತಿಳಿಸಿದರು.

# 10. ಅತ್ಯುತ್ತಮ ಅಭ್ಯಾಸಗಳು

## ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಸಹಭಾಗಿತ್ವ

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯ ಸಭೆಯಲ್ಲಿ, ಸಂಶೋಧನೆ ಮತ್ತು ಮೌಲ್ಯಮಾಪನದಲ್ಲಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮೌಲ್ಯಮಾಪನ ಅಧ್ಯಯನಗಳಲ್ಲಿ ರಾಜ್ಯ ವಿಶ್ವವಿದ್ಯಾಲಯಗಳು / ಸಂಶೋಧನಾ ಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳಬೇಕು ಎಂದು ತೀರ್ಮಾನಿಸಲಾಗಿರುತ್ತದೆ. ಇದರನ್ವಯ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಮತ್ತು ಸರ್ಕಾರವು ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಗುಣಮಟ್ಟದ ಮೌಲ್ಯಮಾಪನವನ್ನು ನಿರೀಕ್ಷಿಸಬಹುದು ಮತ್ತು ಉತ್ತಮ ಫಲಿತಾಂಶಗಳನ್ನು ಸಾಧಿಸಲು ಪ್ರತಿಕ್ರಿಯೆಯನ್ನು ಪಡೆಯಬಹುದು. ಮುಂದಿನ ಎರಡು ವರ್ಷಗಳಲ್ಲಿ ಕೈಗೊಳ್ಳಬೇಕಾದ 50 ಮೌಲ್ಯಮಾಪನ ಅಧ್ಯಯನಗಳಲ್ಲಿ 25 ಅಧ್ಯಯನಗಳನ್ನು ವಿಶ್ವವಿದ್ಯಾಲಯಗಳು/ ಸಂಶೋಧನಾ ಸಂಸ್ಥೆಗಳ ಮೂಲಕ ಮಾಡಬಹುದಾಗಿರುತ್ತದೆ.

## ಉದ್ದೇಶಗಳು

- ಸಂಶೋಧನೆ ಮತ್ತು ನೀತಿ ವಿಶ್ಲೇಷಣೆಯ ಕೇಂದ್ರಗಳಾಗಿ ವಿಶ್ವವಿದ್ಯಾಲಯಗಳು/ಸಂಶೋಧನಾ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಣ ತಜ್ಞರು ಮತ್ತು ನೀತಿ ನಿರೂಪಕರ ನಡುವಿನ ಅಂತರವನ್ನು ಕಡಿಮೆ ಮಾಡುವುದು.
- ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಮೌಲ್ಯಮಾಪನದಲ್ಲಿ ವಿಶ್ವವಿದ್ಯಾಲಯಗಳು/ಸಂಶೋಧನಾ ಸಂಸ್ಥೆಗಳನ್ನು ಒಳಪಡಿಸುವುದು ಮತ್ತು ಕಾರ್ಯಕ್ರಮಗಳು/ಯೋಜನೆಗಳನ್ನು ಮರುವಿನ್ಯಾಸಗೊಳಿಸಲು ಸಲಹೆಗಳು ಮತ್ತು ಪ್ರತಿಕ್ರಿಯೆಗಳನ್ನು ಪಡೆಯುವುದು ಹಾಗೂ ವರ್ಧಿತ ಫಲಿತಾಂಶಗಳಿಗಾಗಿ ಯೋಜನೆಯ ಅನುಷ್ಠಾನವನ್ನು ಸುಧಾರಿಸುವುದು.
- ವಿಶ್ವವಿದ್ಯಾನಿಲಯಗಳು/ಸಂಶೋಧನಾ ಸಂಸ್ಥೆಗಳು ಸಮುದಾಯದೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಅವುಗಳ ಸಾಮಾಜಿಕ ಹೊಣೆಗಾರಿಕೆಯನ್ನು ಉತ್ತೇಜಿಸುವುದು.
- ರಾಜ್ಯ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಪ್ರಮುಖ ವಿಷಯಗಳ ಬಗ್ಗೆ ಸರ್ಕಾರ ಮತ್ತು ಸಮಾಜಕ್ಕೆ ಸಮಾಲೋಚನೆ ಒದಗಿಸಲು

ವಿಶ್ವವಿದ್ಯಾಲಯಗಳು/ಸಂಶೋಧನಾ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.

- ಹೆಚ್ಚಿನ ಯೋಗ್ಯತೆ ದರ ಮತ್ತು ದರ್ಜೆಯನ್ನು ಪಡೆಯಲು ಸಂಶೋಧನೆ ಮತ್ತು ಮೌಲ್ಯಮಾಪನ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು ವಿಶ್ವವಿದ್ಯಾಲಯಗಳು/ಸಂಶೋಧನಾ ಸಂಸ್ಥೆಗಳಿಗೆ ಸಹಾಯ ಮಾಡುವುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000ದ 4 (ಜಿ) ಷರತ್ತು ಅಡಿಯಲ್ಲಿ ವಿನಾಯಿತಿ ಮತ್ತು ಕೆಟಿಪಿಪಿ ಅಧಿನಿಯಮದಡಿ ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ (QCBS) ವಿಧಾನದಿಂದ ಅಧ್ಯಯನಗಳನ್ನು (ವಿಶೇಷ ಮತ್ತು ತಾಂತ್ರಿಕ ಅಧ್ಯಯನಕ್ಕಾಗಿ) ಆಹ್ವಾನಿಸುವ ಮೂಲಕ ಅವುಗಳನ್ನು ನಿಯೋಜಿಸಲು ಆಳವಡಿಸಿಕೊಂಡ ವಿಧಾನವು ಸುಲಭವಾಗಿರುತ್ತದೆ.

1. ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

   'ಕರ್ನಾಟಕದಲ್ಲಿ ಬೇಟಿ ಬಚಾವೊ, ಬೇಟಿ ಪಡಾವೊ ಯೋಜನೆ ಮೌಲ್ಯಮಾಪನ'

   ವರದಿಯ ಆವಿಷ್ಕಾರಗಳನ್ನು ನೀತಿ ಆಯೋಗದೊಂದಿಗೆ ಹಂಚಿಕೊಳ್ಳಲಾಗಿರುತ್ತದೆ.

2. ಹಾಸ್ ಸ್ಕೂಲ್ ಆಫ್ ಬ್ಯುಸಿನೆಸ್, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿ
   ಕರ್ನಾಟಕದ ವಿಶೇಷ ಉಲ್ಲೇಖದೊಂದಿಗೆ ಭಾರತೀಯ ನಾಗರಿಕ ಸೇವೆಯಲ್ಲಿ ಗೈರುಹಾಜರಿಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಕಡಿಮೆ ಮಾಡುವುದು'
3. ಕನ್ನಡ ವಿಶ್ವವಿದ್ಯಾಲಯ, ಹಂಪಿ
   'ಸುಸ್ಥಿರ ಅಭಿವೃದ್ಧಿ ಗುರಿ –2030 ಕರ್ನಾಟಕದ ಕಾರ್ಯತಂತ್ರಗಳು ಮತ್ತು ಕ್ರಿಯಾ ಯೋಜನೆ'
   ವರದಿಯ ಕನ್ನಡ ಅನುವಾದ

ನವೀನ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರಿಗೆ ಇಂಟರ್ನ್‌ಶಿಪ್ –"ಕೋವಿಡ್ ನಂತರದ ಸವಾಲುಗಳು ಮತ್ತು ಮುಂದಿನ ಹಾದಿ"

ಕರ್ನಾಟಕ ಸರ್ಕಾರವು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಕರ್ನಾಟಕದ ಯುವ ಸ್ನಾತಕೋತ್ತರ ವಿದ್ಯಾರ್ಥಿಗಳ/ ಸಂಶೋಧನಾ ವಿದ್ವಾಂಸರನ್ನು ದತ್ತಾಂಶ ವಿಶ್ಲೇಷಣೆ, ನವೀನ ಆಲೋಚನೆಗಳು ಮತ್ತು ಪುರಾವೆ ಆಧಾರಿತ ನೀತಿ ಒಳಹರಿವುಗಳಿಗೆ ಬೆಂಬಲ ನೀಡುವ ಮೂಲಕ ಕೋವಿಡ್–19 ರ ಸಂದರ್ಭದಲ್ಲಿ ಕರ್ನಾಟಕದಲ್ಲಿ ಉದ್ಭವಿಸಿದ ಸಮಸ್ಯೆಗಳು ಮತ್ತು ಸವಾಲುಗಳನ್ನು ನಿಭಾಯಿಸಲು ಸರ್ಕಾರದೊಂದಿಗೆ

ಇಂಟರ್ನ್‌ಗಳಾಗಿ ಕೆಲಸ ಮಾಡಲು ಆಹ್ವಾನಿಸಿರುತ್ತದೆ. ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿನ ಯುವ ಮನಸ್ಸುಗಳಿಗೆ ಉದಾತ್ತ ಉದ್ದೇಶಕ್ಕೆ ಕೊಡುಗೆ ನೀಡಲು ಮತ್ತು 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಸಾಧಿಸಲು ಇದು ಒಂದು ಅವಕಾಶವಾಗಿದ್ದು, ಈ ಕಾರ್ಯಕ್ರಮವನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಂಯೋಜಿಸುತ್ತಿದೆ.

ಅಭಿವೃದ್ಧಿ ಅಧ್ಯಯನಗಳು/ನಿರ್ವಹಣೆ/ದತ್ತಾಂಶ ವಿಜ್ಞಾನ ಮತ್ತು ದತ್ತಾಂಶ ವಿಶ್ಲೇಷಣೆ/ಆರೋಗ್ಯ ನಿರ್ವಹಣೆ/ಸಾಮಾಜಿಕ ಅಂಕಿಅಂಶ/ ಅನ್ವಯಿಕ ಅಂಕಿಅಂಶ/ ಅರ್ಥಶಾಸ್ತ್ರ ಮತ್ತು ಇತರ ಯಾವುದೇ ಸಂಬಂಧಿತ ವಿಭಾಗಗಳ ಹಿನ್ನೆಲೆಯೊಂದಿಗೆ ಉತ್ತಮ ಶೈಕ್ಷಣಿಕ ದಾಖಲೆ ಹೊಂದಿರುವ ವಿದ್ಯಾರ್ಥಿಗಳನ್ನು ಇಂಟರ್ನ್‌ಶಿಪ್‌ಗೆ ಆಹ್ವಾನಿಸಲಾಗಿರುತ್ತದೆ. ಈ ಇಂಟರ್ನ್‌ಶಿಪ್ ಪಾವತಿಸದ ಆಧಾರದಲ್ಲಿದೆ. ಆದರೆ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಸರ್ಕಾರದ ಅಧಿಕಾರಿಗಳು / ಪ್ರಖ್ಯಾತ ಸಂಶೋಧಕರು ಮತ್ತು ಶಿಕ್ಷಣ ತಜ್ಞರುಗಳೊಂದಿಗೆ ಕೆಲಸ ಮಾಡಲು ಅವಕಾಶ ಸಿಗುತ್ತದೆ. ಎಂಟು ವಾರಗಳ ಅವಧಿಗೆ ಅವರಿಗೆ ನೀಡಲಾದ ನಿಯೋಜನೆಯಲ್ಲಿ ಅವರು ಆನ್‌ಲೈನ್ ಮೂಲಕ ಕೆಲಸ ಮಾಡುತ್ತಿದ್ದಾರೆ. ಅವರ ಅಮೂಲ್ಯ ಕೊಡುಗೆಗಾಗಿ ಅವರಿಗೆ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಕರ್ನಾಟಕದ ಸೇವಾ ಸಿಂಧು ಪೋರ್ಟಲ್‌ನಲ್ಲಿ

http://sevasindhu.karnataka.gov.in ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಡಿಯಲ್ಲಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿರುತ್ತಾರೆ.

## ಪ್ರಕ್ರಿಯೆ

ಸುಮಾರು 600 ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ ಮತ್ತು ಇಂಟರ್ನಿಗಳನ್ನು ಅವರ ವಿಶೇಷತೆ ಮತ್ತು ಆಸಕ್ತಿಯ ಕ್ಷೇತ್ರವನ್ನು ಆಧರಿಸಿ 16 ಸುಸ್ಥಿರ ಅಭಿವೃದ್ಧಿ ಗುರಿ ಸಮಿತಿಗಳು ಮತ್ತು ಸಮಿತಿಯ ತಜ್ಞ ಸದಸ್ಯರೊಂದಿಗೆ ಜೋಡಿಸಲಾಗಿರುತ್ತದೆ. ಇಂಟರ್ನಿಗಳು ಭಾರತದ ಎಲ್ಲ ಕಡೆಯಿಂದ ಮತ್ತು ಐಐಟಿಗಳು, ಐಐಎಂಗಳು ಮತ್ತು ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳಿಂದ ಬಂದಿರುತ್ತಾರೆ. ಅಮೆರಿಕಾದ ಸಂಯುಕ್ತ ಸಂಸ್ಥಾನ ಮತ್ತು ಯುನೈಟೆಡ್ ಕಿಂಗ್‌ಡಂ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಸಹ ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕೆ ಸೇರಿರುತ್ತಾರೆ. ಕೋವಿಡ್–19 ರ ಸಂದರ್ಭದಲ್ಲಿ ಪರಿಷ್ಕೃತ ಕಾರ್ಯತಂತ್ರಗಳು ಮತ್ತು ಸಮಸ್ಯೆಗಳನ್ನು ಚರ್ಚಿಸುವ ಗುರಿಗಳ ಕುರಿತು ಈ ಇಂಟರ್ನಿಗಳನ್ನು ವೆಬ್‌ನಾರ್‌ಗಳಿಗೆ ಆಹ್ವಾನಿಸಲಾಗಿರುತ್ತದೆ ಮತ್ತು ಇಂಟರ್ನ್‌ಗಳು ನಿರ್ದಿಷ್ಟ ವಿಷಯದ ಕುರಿತು ಕೆಲಸ ಮಾಡಲು ಇಚ್ಛೆಯನ್ನು ವ್ಯಕ್ತಪಡಿಸಿದ್ದು,

ಮಾರ್ಗದರ್ಶಕರು ಮತ್ತು ಇಲಾಖೆಯೊಂದಿಗೆ ಸಂಪರ್ಕವನ್ನು ಹೊಂದಿದ್ದಾರೆ.

**ಇಂಟರ್ನ್‌ಗಳು ತೆಗೆದುಕೊಂಡ ಕೆಲವು ಯೋಜನೆಗಳು**

- ಕೃಷಿಯಲ್ಲಿ ಸರಬರಾಜು ಸರಪಳಿ ನಿರ್ವಹಣೆ
- ಕರಾವಳಿ ಪ್ರದೇಶದಲ್ಲಿ ನೀರಿನ ಗುಣಮಟ್ಟದ ಸೂಚ್ಯಂಕ
- ವಲಸಿಗರಿಗೆ ಮತ್ತು ಉದ್ಯೋಗಗಳಿಗೆ ಹೊಂದಾಣಿಕೆಯ ವೇದಿಕೆ
- ಪೌಷ್ಟಿಕಾಂಶ ಯೋಜನೆಯಲ್ಲಿ ಸ್ವಸಹಾಯ ಗುಂಪುಗಳ ಪಾಲುದಾರಿಕೆಯನ್ನು ಉತ್ತೇಜಿಸುವುದು.
- ಕರ್ನಾಟಕದಲ್ಲಿ ನ್ಯಾಯ–ಮುಕ್ತ ಕಾನೂನು ನೆರವು ಯೋಜನೆಗೆ ಪ್ರವೇಶ
- ಮಹಿಳೆಯರ ಮೇಲಿನ ದೌರ್ಜನ್ಯ– ಕೋವಿಡ್ ನಂತರದ ಚಿತ್ರಣ
- ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದು
- ಕೌಶಲ್ಯ ಅಂತರ ಮತ್ತು ಕೌಶಲ್ಯ ಅಗತ್ಯತೆಗಳು – ಕೋವಿಡ್ ನಂತರದ ವಿಶ್ಲೇಷಣೆ
- ಬಾಲ ಕಾರ್ಮಿಕತೆ – ಕೋವಿಡ್ ನಂತರದ ಸವಾಲುಗಳು
- ಉನ್ನತ ಶಿಕ್ಷಣದಲ್ಲಿನ ಸವಾಲುಗಳು

**ಫಲಿತಾಂಶಗಳು**

- ಯುವಕರ ಸಾಮರ್ಥ್ಯ ವೃದ್ಧಿ
- ಸರ್ಕಾರದೊಂದಿಗೆ ಕೆಲಸ ಮಾಡಿದ ಅನುಭವ
- ನೀತಿ ನಿರ್ಧಾರಗಳಿಗಾಗಿ ದತ್ತಾಂಶ ವಿಶ್ಲೇಷಣೆ

## ಸಾಕ್ಷ್ಯಾಧಾರಿತ ನೀತಿ ತಯಾರಿಕೆಗಾಗಿ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಜ್ಞಾನ ಪಾಲುದಾರಿಕೆಯ ಮೂಲಕ ಸರ್ಕಾರಕ್ಕೆ ಬೆಂಬಲ

**ಪರಿಚಯ**

ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ಮಾನವ ಅಭಿವೃದ್ಧಿ ಫಲಿತಾಂಶಗಳನ್ನು ಸುಧಾರಿಸುವ ಉದ್ದೇಶದಿಂದ ನಿಯೋಜಿಸಲಾದ ನಿಧಿಗಳ ಎದುರಿಗೆ ಮಾನವ ಅಭಿವೃದ್ಧಿ ಸೂಚಕಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ದೊಡ್ಡ ಪ್ರಮಾಣದ ದತ್ತಾಂಶವನ್ನು ತಯಾರಿಸುತ್ತದೆ. ಕರ್ನಾಟಕ ಸರ್ಕಾರವು ಇದನ್ನು ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳೊಂದಿಗೆ ಜೋಡಿಸುತ್ತಿದೆ ಮತ್ತು ಉತ್ತಮ ಅಭಿವೃದ್ಧಿ ಫಲಿತಾಂಶಗಳಿಗಾಗಿ ಮತ್ತು 2030 ರ ವೇಳೆಗೆ ಸುಸ್ಥಿರ ಅಭಿವೃದ್ಧಿ

ಗುರಿಗಳನ್ನು ಸಾಧಿಸಲು ದತ್ತಾಂಶ ವಿಶ್ಲೇಷಣಾ ಅನ್ವಯಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಈ ಉದ್ದೇಶಕ್ಕಾಗಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಅಂತರ್‌ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನದ ಸಂಸ್ಥೆ, ಬೆಂಗಳೂರು ಮತ್ತು ಸಾರ್ವಜನಿಕ ವ್ಯವಹಾರ ಕೇಂದ್ರದಂತಹ ವಿಶೇಷ ಶೈಕ್ಷಣಿಕ ಸಂಸ್ಥೆಗಳಿಂದ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದಂತಹ ಮೀಸಲಾದ ಸಂಸ್ಥೆಯ ಮೂಲಕ ಸಹಾಯವು ಅಗತ್ಯವಾಗಿರುತ್ತದೆ.

ಸುಸ್ಥಿರ ಅಭಿವೃದ್ಧಿ ಗುರಿ ಮತ್ತು ಫಲಿತಾಂಶಗಳನ್ನು ಸಾಧಿಸಲು ಪರಿಣಾಮಕಾರಿ ಮತ್ತು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಬೆಂಬಲಿಸಲು 2019–2020 ರಿಂದ 2023–24ರವರೆಗೆ ಮುಂದಿನ ಐದು ವರ್ಷಗಳಿಗೆ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಜ್ಞಾನ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಯಿರುತ್ತದೆ. ಇದಕ್ಕಾಗಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನೋಡಲ್ ಏಜೆನ್ಸಿಯಾಗಿರುತ್ತದೆ.

## ಉದ್ದೇಶಗಳು

**ಮೂಲ ಉದ್ದೇಶಗಳು ಹೀಗಿವೆ:**

- ಸಾಕ್ಷ್ಯಾಧಾರಿತ ಮತ್ತು ದತ್ತಾಂಶ ಚಾಲಿತ ನೀತಿ ರೂಪಣೆ; ಕಾರ್ಯಕ್ರಮ ವಿನ್ಯಾಸ; ಸಂಪನ್ಮೂಲ ಹಂಚಿಕೆ

ನಿರ್ಧಾರಗಳಿಗಾಗಿ ಸರ್ಕಾರದಾದ್ಯಂತದ ಸಂಬಂಧಿತ ದತ್ತಾಂಶ ವಿಜ್ಞಾನ ಅನ್ವಯಿಕೆಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸುವುದು.

- ವಿಶೇಷವಾಗಿ ಆರೋಗ್ಯ, ಶಿಕ್ಷಣ ಮತ್ತು ಜೀವನೋಪಾಯ ಕ್ಷೇತ್ರಗಳಲ್ಲಿ ಮುನ್ಸೂಚಕ ವಿಶ್ಲೇಷಣೆಯನ್ನು ಸಕ್ರಿಯಗೊಳಿಸಲು ದತ್ತಾಂಶ ವಿಶ್ಲೇಷಣೆಯನ್ನು ಬಳಸಿಕೊಂಡು ಗಣನೀಯ ಪ್ರಮಾಣದ ಧನಸಹಾಯದೊಂದಿಗೆ ಸರ್ಕಾರದ ಆಯ್ದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಫಲಿತಾಂಶ–ಆಧಾರಿತ ಪ್ರಭಾವ ಬೀರುವ ಮೌಲ್ಯಮಾಪನವನ್ನು ಕೈಗೊಳ್ಳುವುದು.
- ವೈಜ್ಞಾನಿಕ ಮೌಲ್ಯಮಾಪನವನ್ನು ಸ್ಥಾಪಿಸುವ ಮತ್ತು ದತ್ತಾಂಶ ವಿಜ್ಞಾನ ತಂತ್ರಗಳ ಅನ್ವಯಿಕೆಯ ಮೇಲ್ವಿಚಾರಣೆಯನ್ನು ಮಾಡುವ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿಯ ಯಶಸ್ವಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು.
- ಐದು ವರ್ಷಗಳ ಮೊದಲ ಹಂತದಲ್ಲಿ ಅನುಷ್ಠಾನಕ್ಕೆ ಆದ್ಯತೆಯ ಕ್ಷೇತ್ರಗಳು ಮಾನವ ಅಭಿವೃದ್ಧಿಗೆ ಸಂಬಂಧಿಸಿದ

ಏಳು ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿದ್ದು, ಆಡಳಿತದಲ್ಲಿ ಕೃತಕ ಬುದ್ಧಿಮತ್ತೆಯ ಮಧ್ಯಸ್ಥಿಕೆಗಳಿಗಾಗಿ ನೀತಿ ಆಯೋಗದ ಪ್ರಮುಖ ಗಮನ ಕ್ಷೇತ್ರಗಳಾಗಿ ಪರಿಗಣಿಸಲ್ಪಡುತ್ತವೆ, ಈ ಏಳು ಕ್ಷೇತ್ರಗಳೆಂದರೆ – 1) ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ, 2) ಪ್ರಾಥಮಿಕ ಆರೋಗ್ಯ, 3) ವಲಸೆ, ಕೌಶಲ್ಯ ಮತ್ತು ಜೀವನೋಪಾಯ, 4) ಶಾಲಾ ಶಿಕ್ಷಣ, 5) ಕೃಷಿ ಮತ್ತು ಹವಾಮಾನ ಬದಲಾವಣೆ, 6) ಸಮಾಜ ಕಲ್ಯಾಣ ಮತ್ತು ಅಂತರ್ಗತ ಅಭಿವೃದ್ಧಿ ಮತ್ತು 7) ನಗರಾಭಿವೃದ್ಧಿ.

- ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಇತರ ಮೂಲಗಳಿಂದ 1000+ ದತ್ತಾಂಶ ನಿಯತಾಂಕಗಳನ್ನು ಒಳಗೊಂಡ 169 ಸೂಚಕಗಳಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ದತ್ತಾಂಶ ವಿಶ್ಲೇಷಣೆಯನ್ನು ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರವು ನಿರ್ದಿಷ್ಟವಾಗಿ ಒದಗಿಸಬೇಕಾಗಿರುತ್ತದೆ. ದತ್ತಾಂಶ ಸೆಟ್‌ಗಳು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ಸುಸ್ಥಿರ ಅಭಿವೃದ್ಧಿ ಗುರಿಗಳ ಸಮೀಕ್ಷೆಗಳು ಮತ್ತು ಆನ್‌ಲೈನ್ ದತ್ತಾಂಶ ಪೋರ್ಟಲ್‌ಗಳಿಂದ

ಸಂಗ್ರಹಿಸಲಾದ ಸ್ಥಿರ ಮತ್ತು ಕ್ರಿಯಾತ್ಮಕ ದತ್ತಾಂಶ ಸೆಟ್‌ಗಳನ್ನು ಒಳಗೊಂಡಿರುತ್ತವೆ ಮತ್ತು ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಆಕಾಂಕ್ಷಿತ ಜಿಲ್ಲೆಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯತ್ತ ಗಮನಹರಿಸಿ ವಿಶೇಷ ಅಭಿವೃದ್ಧಿ ಯೋಜನೆಗೆ ದತ್ತಾಂಶ ವಿಶ್ಲೇಷಿಸುವುದು.

- ಸರ್ಕಾರಿ ಇಲಾಖೆಗಳಲ್ಲಿ ದತ್ತಾಂಶ ವಿಜ್ಞಾನ ಅನ್ವಯಿಕೆಗಳನ್ನು ತಮ್ಮ ನಿಯಮಿತ ಕಾರ್ಯಾಚರಣೆಗಳಲ್ಲಿ ಬಳಸಲು ಸಾಮರ್ಥ್ಯವನ್ನು ಬೆಳೆಸುವುದು ಮತ್ತು ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಉಚಿತವಾಗಿ ವಿಶ್ಲೇಷಣಾ ಸೇವೆಗಳನ್ನು ಒದಗಿಸುವುದು.

## ನಿರೀಕ್ಷಿತ ಫಲಿತಾಂಶಗಳು

- ದತ್ತಾಂಶ ಗಣಿಗಾರಿಕೆಯ ವೇದಿಕೆ
- ದತ್ತಾಂಶ ಏಕೀಕರಣ–ಜನರು, ಭೂಮಿ ಮತ್ತು ಹಣಕಾಸು
- ಸಾಕ್ಷ್ಯಾಧಾರಿತ ನೀತಿ
- ಉತ್ತಮ ಆಡಳಿತ
- ಸುಸ್ಥಿರ ಅಭಿವೃದ್ಧಿ ಗುರಿ–2030 ಗುರಿಗಳ ಸಾಧನೆ

ಉತ್ತಮ ಆಡಳಿತ ಮತ್ತು ಸುಸ್ಥಿರ ಅಭಿವೃದ್ಧಿ ಗುರಿ–2030 ಕಾರ್ಯಸೂಚಿಯನ್ನು ಉತ್ತೇಜಿಸಲು ಸರ್ಕಾರಕ್ಕೆ ಸಹಾಯ ಮಾಡುವಲ್ಲಿ ಸರ್ಕಾರದ ದತ್ತಾಂಶ, ದತ್ತಾಂಶ ವಿಜ್ಞಾನ ತಂತ್ರಜ್ಞಾನಗಳು, ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಆಡಳಿತದ ಅನ್ವಯಿಕೆಗಳನ್ನು ಒಟ್ಟುಗೂಡಿಸುವ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರವು ಈ ರೀತಿಯ ಮೊದಲ ಕೇಂದ್ರವಾಗಿರುತ್ತದೆ.

## ಆರ್ಥಿಕ ಪ್ರಗತಿ

| ಕ್ರ. ಸಂ. | ರಶೀದಿಗಳು | | ಕ್ರ. ಸಂ | ಖರ್ಚು | |
|---|---|---|---|---|---|
| | **ವಿವರಗಳು** | **ಮೊಬಲಗು ರೂ. ಗಳಲ್ಲಿ** | | **ವಿವರಗಳು** | **ಮೊಬಲಗು ರೂ.ಗಳಲ್ಲಿ.** |
| 1 | ಪ್ರಾರಂಭಿಕ ಶಿಲ್ಕು (1.04.2019) | 8,76,04,055.00 | 1 | ಯೋಜನೆಗಳ ಮೌಲ್ಯಮಾಪನ ವೆಚ್ಚಗಳು. | 2,65,62,146.00 |
| 2 | ಸರ್ಕಾರದಿಂದ ಸಹಾಯಾನುದಾನ | 1,44,00,000.00 | 2 | ಸಂಬಳ ಮತ್ತು ಭತ್ಯೆಗಳು. | 69,34,685.00 |
| 3 | ಬ್ಯಾಂಕ್ ಠೇವಣಿ ಮೇಲಿನ ಬಡ್ಡಿ (ಸ್ಥಿರ ಠೇವಣಿ | 84,89,639.00 | 3 | ಹೊರಗುತ್ತಿಗೆ ಸಿಬ್ಬಂದಿಗೆ ಸಂಬಳ | 78,81,327.00 |

| | | | | | |
|---|---|---|---|---|---|
| | ಹೊರತುಪಡಿಸಿ ) | | | | |
| 4 | ಇತರೆ (ಅರ್ಜಿ ಶುಲ್ಕ ಇತ್ಯಾದಿ) | 27,788.00 | 4 | ಪ್ರವಾಸ ಭತ್ಯೆ ಬಿಲ್ಲುಗಳು | 8,17,325.00 |
| 5 | ಸಂಸ್ಥೆಗಳಿಂದ ಮುಂಗಡ ಹಣ ಠೇವಣಿ | 8,00,000.00 | 5 | ಕಾರ್ಯಾಗಾರ, ತರಬೇತಿ, ವಿಚಾರ ಸಂಕಿರಣ ಮತ್ತು ಸಭೆ | 5,03,643.00 |
| 6 | ಸಂಸ್ಥೆಗಳಿಂದ ವಸೂಲಿ ಮಾಡಿದ ದಂಡ | 1,60,480.00 | 6 | ಮೌಲ್ಯಮಾಪನ ಪ್ರಾಧಿಕಾರದ ಸಭಾ ವೆಚ್ಚಗಳು | 2,89,061.00 |
| 7 | ಸಂಸ್ಥೆಗಳಿಂದ ಮುಂಗಡ ಹಣ ಠೇವಣಿ | 8,40,000.00 | 7 | ಸಭೆಯಲ್ಲಿ ಭಾಗವಹಿದ ಬಗ್ಗೆ ಶುಲ್ಕ, ವಾಹನ ಮತ್ತು ಪ್ರಯಾಣ ವೆಚ್ಚಗಳು | 1,93,380.00 |
| 8 | ಮೈಸೂರಿನ ಆಡಳಿತ ತರಬೇತಿ | 90,00,000.00 | 8 | ಅಧಿಸೂಚನೆ ವೆಚ್ಚಗಳು | 3,13,285.00 |

| | | | | | |
|---|---|---|---|---|---|
| | ಸಂಸ್ಥೆಯಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ತರಬೇತಿಗಾಗಿ ಸರ್ಕಾರದಿಂದ ಅನುದಾನ | | | | |
| 9 | ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ | 3,60,00,000.00 | 9 | ಮುದ್ರಣ ಮತ್ತು ಲೇಖನ ಸಾಮಗ್ರಿಗಳು ಮತ್ತು ಉಪಭೋಗ್ಯಗಳು | 4,48,491.00 |
| 10 | ಸಾರ್ವಜನಿಕ ಉದ್ಯಮಗಳ ಇಲಾಖೆ | 30,00,000.00 | 10 | ದೂರವಾಣಿ ಮತ್ತು ದಿನಪತ್ರಿಕೆ | 97,041.00 |
| 11 | ಕೃಷಿ ಇಲಾಖೆ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆಯ ಯೋಜನೆಗಾಗಿ | 24,89,201.00 | 11 | ಕಚೇರಿ ವೆಚ್ಚಗಳು ಮತ್ತು ಅಂಚೆ ವೆಚ್ಚಗಳು | 1,64,316.00 |
| 12 | ಯೋಜನಾ ಮಂಡಳಿ | 3200000.00 | 12 | ವಾಹನ ನಿರ್ವಹಣೆ | 82,303.00 |
| | | | 13 | ಕರ್ನಾಟಕ ಮೌಲ್ಯಮಾ | 26,33,396.00 |

| | | | | | |
|---|---|---|---|---|---|
| | | | | ಪನ ಪ್ರಾಧಿಕಾರದ ಸಲಕರಣೆಗಳು, ಪೀಠೋಪಕರಣಗಳು, ಪ್ರತಿಷ್ಠಾಪಿಸಿದ ವಸ್ತುಗಳು | |
| | | | 14 | ವಾಹನ ಬಾಡಿಗೆ | 11,27,031.00 |
| | | | 15 | ಪೆಟ್ರೋಲ್ ಬಿಲ್‌ಗಳು | 1,85,467.00 |
| | | | 16 | ಮುಂಗಡ ಹಣ ಠೇವಣಿಯ ಮರುಪಾವತಿ | 3,30,000.00 |
| | | | 17 | ಲೆಕ್ಕಪರಿಶೋಧನೆ ಶುಲ್ಕಗಳು | 77,899.00 |
| | | | 18 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ | 64,450.00 |

| | | | | | |
|---|---|---|---|---|---|
| | | | | ಸಂಘದ ನವೀಕರಣ | |
| | | | 19 | ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರಕ್ಕೆ ಪಾವತಿ | 2,00,00,000.00 |
| | | | 20 | ಸುಸ್ಥಿರ ಅಭಿವೃದ್ಧಿ ಗುರಿಗಳು (ಸಂಭಾವನೆ, ಸಭೆ ಮತ್ತು ಸಭೆಯಲ್ಲಿ ಭಾಗವಹಿದ ಬಗ್ಗೆ ಶುಲ್ಕ) | 30,57,687.00 |
| | | | 21 | ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ತರಬೇತಿ | 90,00,000.00 |
| | | | 22 | ಯೋಜನಾ ಇಲಾಖೆಯ ಡಿಸಿಷನ್ | 79,49,106.00 |

| | | | | | |
|---|---|---|---|---|---|
| | | | | ಸಪೋರ್ಟ್ ಸಿಸ್ಟಮ್ (ಪಿಎಂಐ ವಿಭಾಗಕ್ಕೆ) | |
| | ಒಟ್ಟು | 16,60,11,163.00 | | | 8,87,12,039.00 |
| | | | | ಬದ್ಧ ಖರ್ಚು | 7,95,46,000.00 |

## ಮುಂದಿನ ಮಾರ್ಗ

- ಪ್ರಮುಖ ಕಾರ್ಯಕ್ರಮಗಳ ಪರಿಣಾಮಕಾರಿ ಫಲಿತಾಂಶಗಳಿಗಾಗಿ ಸರ್ಕಾರಕ್ಕೆ ಸಾಕಷ್ಟು ಒಳಹರಿವು ಒದಗಿಸಲು ಮತ್ತು ಸುಸ್ಥಿರ ಅಭಿವೃದ್ಧಿ ಗುರಿ –2030 ಕಾರ್ಯಸೂಚಿಯನ್ನು ಸಾಧಿಸಲು ವಾರ್ಷಿಕ ರೂ. 100 ಕೋಟಿಗಳಿಗಿಂತ ಹೆಚ್ಚಿನ ಹಣ ವಿನಿಯೋಗವನ್ನು ಹೊಂದಿರುವ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನ ಮತ್ತು ಫಲಾನುಭವಿಗಳ ವಿಶಾಲ ವ್ಯಾಪ್ತಿಯನ್ನು ಕೇಂದ್ರೀಕರಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರಸ್ತಾಪಿಸಿದೆ.
- ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳಲು ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳೊಂದಿಗೆ

ಸಹಯೋಗ ಮತ್ತು ಪರಸ್ಪರ ಲಾಭಕ್ಕಾಗಿ ಶಿಕ್ಷಣ ತಜ್ಞರು ಮತ್ತು ಸರ್ಕಾರವನ್ನು ಒಂದೇ ವೇದಿಕೆಯಲ್ಲಿ ತರುವುದು.

- ಸಂಬಂಧಿಸಿದ ಇಲಾಖೆಗಳು ಮತ್ತು ಮೌಲ್ಯಮಾಪನ ಸಮಾಲೋಚಕ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗಾಗಿ ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ಮೌಲ್ಯಮಾಪನ ಅಧ್ಯಯನಗಳ ಗುಣಮಟ್ಟವನ್ನು ಸುಧಾರಿಸುವುದು.
- ಯುವ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ಹೆಚ್ಚಿಸಲು ಆಂತರಿಕ ಅಧ್ಯಯನವನ್ನು ಕೈಗೊಳ್ಳುವುದು. ಇದು ಮೌಲ್ಯಮಾಪನ ವರದಿಗಳಲ್ಲಿ ಕ್ಷೇತ್ರದ ನೈಜತೆಗಳನ್ನು ಒಳಗೊಂಡಿದೆಯೆ ಎಂದು ಖಚಿತಪಡಿಸಿ ನೈಜ ಸಮಯದ ದತ್ತಾಂಶ ಸಂಗ್ರಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಸಹ ಅಭಿವೃದ್ಧಿಪಡಿಸುತ್ತದೆ.
- ಯುವ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರ ಸಾಮರ್ಥ್ಯ ವೃದ್ಧಿಗಾಗಿ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಬಲಪಡಿಸುವುದು.

- ಸಾಕ್ಷ್ಯಾಧಾರಿತ ನೀತಿಗಾಗಿ ವೈಜ್ಞಾನಿಕ ಫಲಿತಾಂಶಗಳನ್ನು ಸೆಳೆಯಲು ಮೌಲ್ಯಮಾಪನ ಅಧ್ಯಯನ ಮತ್ತು ದತ್ತಾಂಶ ವಿಶ್ಲೇಷಣೆಯಲ್ಲಿ ದ್ವಿತೀಯ ಮತ್ತು ಪ್ರಾಥಮಿಕ ದತ್ತಾಂಶವನ್ನು ಸಂಯೋಜಿಸಲು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮ, ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರ ಇವುಗಳೊಂದಿಗೆ ಕೆಲಸ ಮಾಡುತ್ತದೆ.
- ಮಹತ್ವಾಕಾಂಕ್ಷೆಯ ಜಿಲ್ಲೆಗಳ ಮೇಲೆ ಕೇಂದ್ರೀಕರಿಸಿ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ನವೀನ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಮತ್ತು ಕಾರ್ಯಗತಗೊಳಿಸಲು ಯೋಜನಾ ಇಲಾಖೆಯ ಹೊಸ ಉಪಕ್ರಮಗಳನ್ನು ಬೆಂಬಲಿಸುವುದು.
- ವಿವಿಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳಿಗೆ ಉತ್ಪನ್ನ – ಫಲಿತಾಂಶ ವಿಶ್ಲೇಷಣೆಯ ಚೌಕಟ್ಟು ದಾಖಲೆಯನ್ನು ತಯಾರಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.
- ಸುಸ್ಥಿರ ಅಭಿವೃದ್ಧಿ ಗುರಿ 2030ರ ನಿಗದಿತ ಗುರಿಗಳನ್ನು ಸಾಧಿಸಲು ಸುಸ್ಥಿರ ಅಭಿವೃದ್ಧಿ ಗುರಿಗಳ ಕಾರ್ಯತಂತ್ರಗಳು, ಕ್ರಿಯಾ ಯೋಜನೆಗಳು ಮತ್ತು ಸ್ಥಳೀಕರಣವನ್ನು ವಿನ್ಯಾಸಗೊಳಿಸುವಲ್ಲಿ

ಸುಸ್ಥಿರ ಅಭಿವೃದ್ಧಿ ಗುರಿಗಳ ಸಮನ್ವಯ ಕೇಂದ್ರವನ್ನು ಬೆಂಬಲಿಸುವುದು.

- ಅಭೂತಪೂರ್ವ ಜಾಗತಿಕ ಜೈವಿಕ ವಿಪತ್ತು, ಕೋವಿಡ್–19 ಸಾಂಕ್ರಾಮಿಕವು, ಜನರ ಜೀವ ಮತ್ತು ಜೀವನೋಪಾಯದ ಮೇಲೆ ಪರಿಣಾಮ ಬೀರುವ ಸವಾಲುಗಳನ್ನು ಎದುರಿಸಲು ಪರಿಣಾಮಕಾರಿ ಕಾರ್ಯತಂತ್ರಗಳು ಮತ್ತು ನೀತಿಯನ್ನು ರೂಪಿಸಲು ರಾಜ್ಯವನ್ನು ಬೆಂಬಲಿಸುವುದು.

## 11. ಅನುಬಂಧ I

### ಸಮಿತಿಗಳು

**ಸಾಮಾನ್ಯ ಮಂಡಳಿ**

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು–01. | ಅಧ್ಯಕ್ಷರು |
| 2 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು–01. | ಸದಸ್ಯರು |
| 3 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚಗಳು) ಅಥವಾ ಇವರ ನಾಮನಿರ್ದೇಶಿತರು. ವಿಧಾನ ಸೌಧ, ಬೆಂಗಳೂರು–01. | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 6 | ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು. | ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಕಾಸಸೌಧ, ಬೆಂಗಳೂರು–01. | ಸದಸ್ಯರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 10 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು–01. | ಸದಸ್ಯರು |
| 11 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | ಸದಸ್ಯರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| | ಅಥವಾ ಇವರ ನಾಮನಿರ್ದೇಶಿತರು., ವಿಧಾನ ಸೌಧ, ಬೆಂಗಳೂರು–01. | |
| 12 | ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಪಂಚಮುಖಿ ಗಣೇಶ ದೇವಸ್ಥಾನದ ಬಳಿ, ಕೆಂಗೇರಿ ಅಂಚೆ, ಬೆಂಗಳೂರು–ಮೈಸೂರು ರಸ್ತೆ, ಬೆಂಗಳೂರು– 560 060. | ಸದಸ್ಯರು |
| 13 | ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 14 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯ ಕಾರ್ಯದರ್ಶಿಗಳು |
| 15 | ಆಡಳಿತಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, | ಖಜಾಂಜಿಗಳು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| | ಬಹುಮಹಡಿ ಕಟ್ಟಡ, ಬೆಂಗಳೂರು–01. | |
| (2) ಮೇಲಿನ ಉಪ–ಕಂಡಿಕೆ (1) ಕ್ಕೆ ಒಳಪಟ್ಟಂತೆ, ಈ ಕೆಳಗಿನವರನ್ನು ಸೊಸೈಟಿಯ ಸದಸ್ಯರನ್ನಾಗಿ ಮಾಡಬಹುದು. | | |
| 16 | ಎ. ಅಧ್ಯಕ್ಷರು ನಾಮನಿರ್ದೇಶನ ಮಾಡಿದ, ಮೌಲ್ಯಮಾಪನ ಮತ್ತು ಸಂಶೋಧನಾ ವೈಧಾನಿಕತೆಯ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ಇಬ್ಬರು ಶೈಕ್ಷಣಿಕ ತಜ್ಞರು. | ಸದಸ್ಯರು |
| 17 | ಬಿ. ಅಧ್ಯಕ್ಷರಿಂದ ನಾಮನಿರ್ದೇಶನಗೊಂಡ, ಸಲಹಾ ಸಂಗ್ರಹಣೆ, ಮೌಲ್ಯಮಾಪನ ವೈಧಾನಿಕತೆ ಇತ್ಯಾದಿಗಳ ಬಗ್ಗೆ ಜ್ಞಾನ ಹೊಂದಿರುವ ಮತ್ತು ಪರಿಣಾಮಕಾರಿ ಮೌಲ್ಯಮಾಪನವನ್ನು ಮುನ್ನಡೆಸಲು ಕಾರಣವಾಗುವಂತಹ ಇತರ ಯಾವುದೇ ವ್ಯಕ್ತಿ. | ಸದಸ್ಯರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 18–20 | ಸಿ. ಯೋಜನಾ ಆಯೋಗದ ಪ್ರತಿನಿಧಿ (ಈಗ ಭಾರತವನ್ನು ಪರಿವರ್ತಿಸುವ ರಾಷ್ಟ್ರೀಯ ಸಂಸ್ಥೆ), ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ, ವಿಶ್ವಸಂಸ್ಥೆಯ ಮಕ್ಕಳ ನಿಧಿ ಅಧ್ಯಕ್ಷರು ಮಾಡಿದ ನಾಮನಿರ್ದೇಶಿತರು. | ಸದಸ್ಯರು |
| 21 | ಡಿ. ಅಧ್ಯಕ್ಷರು ನಾಮನಿರ್ದೇಶನ ಮಾಡಿದ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗಿಂತ ಶ್ರೇಣಿಯಲ್ಲಿ ಕೆಳಗಿರದ ನಿವೃತ್ತ ಐಎಎಸ್ ಅಧಿಕಾರಿಗಳು. | ಸದಸ್ಯರು |
| 22–25 | ಸಾಮಾನ್ಯ ಮಂಡಳಿಯ ಅಧ್ಯಕ್ಷರು ಅನುಮೋದಿಸಿದಂತೆ ಮೇಲಿನ ವರ್ಗಗಳ ಯಾವುದೇ ಇತರ ಸದಸ್ಯರು. | ಸದಸ್ಯರು |
| | ಇ. ಪದನಿಮಿತ್ತ ಸದಸ್ಯರು ಅವರು ಹುದ್ದೆಯನ್ನು ಅಲಂಕರಿಸುವ ಮೂಲಕ ಸದಸ್ಯರಾಗಿರುತ್ತಾರೆ. | |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| | ಹೊಸ ಸ್ಥಾನಿಕರು ಆ ಸ್ಥಾನಕ್ಕೆ ಸೇರ್ಪಡೆಗೊಂಡ ತಕ್ಷಣ, ಅವರು ಈ ಸಂಘದ ಪದ ನಿಮಿತ್ತ ಸದಸ್ಯರಾಗುತ್ತಾರೆ, ಮತ್ತು ಮೊದಲಿದ್ದವರು ನಿವೃತ್ತರಾಗುತ್ತಾರೆ. | |

## ಆಡಳಿತ ಮಂಡಳಿ

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 1 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಅಧ್ಯಕ್ಷರು |
| 2 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯ ಕಾರ್ಯದರ್ಶಿಗಳು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚಗಳು) ಅಥವಾ ಇವರ ನಾಮನಿರ್ದೇಶಿತರು, ವಿಧಾನ ಸೌಧ, ಬೆಂಗಳೂರು–01. | ಸದಸ್ಯರು |
| 4 | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಥವಾ ಇವರ ನಾಮನಿರ್ದೇಶಿತರು, ವಿಧಾನ ಸೌಧ, ಬೆಂಗಳೂರು–01. | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 6 | ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು. | ಸದಸ್ಯರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯರು |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಕಾಸಸೌಧ, ಬೆಂಗಳೂರು–01. | ಸದಸ್ಯರು |
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು–01. | ಸದಸ್ಯರು |
| 10 | ಆಡಳಿತಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಖಜಾಂಜಿಗಳು |
| 11 | ಉಪಕುಲಪತಿ, ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರು ಅಥವಾ ಇವರಿಂದ ನಾಮನಿರ್ದೇಶಿತರು. | ತಜ್ಞರು |

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಪದನಾಮ |
|---|---|---|
| 12 | ಪ್ರೊ. ಮಾದೇಶ್ವರನ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು. | ತಜ್ಞರು |
| 13 | ಡಾ. ಹೆಚ್. ಎನ್. ಚಾಣಕ್ಯ, ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು. | ತಜ್ಞರು |
| 14 | ಪ್ರೊ. ಅಬ್ದುಲ್ ಅಜೀಜ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಬೆಂಗಳೂರು ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರು. | ತಜ್ಞರು |

## ತಾಂತ್ರಿಕ ಸಮಿತಿ

ಪುನರ್ ಸಂಘಟನೆಯ ನಂತರದ ತಾಂತ್ರಿಕ ಸಮಿತಿಯು ಈ ಕೆಳಗಿನ ಸದಸ್ಯರು ಮತ್ತು ಜೊತೆಗೆ ಆಯ್ಕೆಯಾದ 4 ತಜ್ಞ ಸದಸ್ಯರನ್ನು ಹೊಂದಿರುತ್ತದೆ:

| ಕ್ರ.ಸಂ. | ಪದನಾಮ ಮತ್ತು ವಿಳಾಸ | ಸಮಿತಿಯಲ್ಲಿ ಪದನಾಮ |
|---|---|---|
| 1 | ಸರ್ಕಾರದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಅಧ್ಯಕ್ಷರು |
| 2 | ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು ಅಥವಾ ಇವರಿಂದ ನಾಮನಿರ್ದೇಶಿತರು. | ಸದಸ್ಯರು |
| 3 | ನಿರ್ದೇಶಕರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು | ಸದಸ್ಯರು |

| | | |
|---|---|---|
| 4 | ಮುಖ್ಯಸ್ಥರು, ಸಾರ್ವಜನಿಕ ನೀತಿ ವಿಭಾಗ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು. | ಸದಸ್ಯರು |
| 5 | ಉಪ ಮಹಾನಿರ್ದೇಶಕರು, ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ, ಪ್ರಾದೇಶಿಕ ಕಚೇರಿ, ಬೆಂಗಳೂರು. | ಸದಸ್ಯರು |
| 6 | ಮುಖ್ಯ ಮೌಲ್ಯಮಾಪನ ಅಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು–01. | ಸದಸ್ಯ ಕಾರ್ಯದರ್ಶಿಗಳು |
| | **ಜೊತೆಗೆ ಆಯ್ಕೆಯಾದ ತಜ್ಞ ಸದಸ್ಯರು** | |
| 7 | ಡಾ. ಸರಸು ಥಾಮಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು. | ಸದಸ್ಯರು |
| 8 | ಡಾ. ಎಸ್. ಅಯ್ಯಪ್ಪನ್, ಐಸಿಎಆರ್ ಮಾಜಿ ಮಹಾನಿರ್ದೇಶಕರು, ಕುಲಪತಿ, ಕೇಂದ್ರ ಕೃಷಿ ವಿಶ್ವವಿದ್ಯಾಲಯ, | ಸದಸ್ಯರು |

| | | |
|---|---|---|
| | ಇಂಫಾಲ್ ನಬಾರ್ಡ್ ಚೇರ್ ಪ್ರೊಫೆಸರ್ | |
| 9 | ಡಾ. ಎಸ್ ಆರ್ ಕೇಶವ, ಬೆಂಗಳೂರು ವಿಶ್ವವಿದ್ಯಾಲಯ | ಸದಸ್ಯರು |
| 10 | ಪ್ರೊ. ಸ್ಮಿತಾ ಶ್ರೀನಿವಾಸ್, ಇಂಡಿಯನ್ ಕೌನ್ಸಿಲ್ ಫಾರ್ ರಿಸರ್ಚ್ ಆನ್ ಇಂಟರ್ನ್ಯಾಷನಲ್ ಎಕನಾಮಿಕ್ ರಿಲೇಶನ್ಸ್, ಬೆಂಗಳೂರು. | ಸದಸ್ಯರು |

# 12. ಅನುಬಂಧ–II

| ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧಿಕಾರಿಗಳು / ಸಿಬ್ಬಂದಿಗಳ ವಿವರಗಳು | | |
|---|---|---|
| ಕ್ರ.ಸಂ. | ಹೆಸರು | ಪದನಾಮ |
| 1 | ಶ್ರೀ ಸುದರ್ಶನ್. ಜಿ.ಎ. | ಮುಖ್ಯ ಮೌಲ್ಯಮಾಪನ ಅಧಿಕಾರಿ |
| 2 | ಡಾ. ಛಾಯಾ. ಕೆ. ದೇಗಾಂವ್ಕರ್. | ಅಪರ ಮುಖ್ಯ ಮೌಲ್ಯಮಾಪನ ಅಧಿಕಾರಿ |
| 3 | ಶ್ರೀಮತಿ ರಜನಿ. ಕೆ. ಎಸ್. | ನಿರ್ದೇಶಕ (ಸಂಗ್ರಹಣೆ) |
| 4 | ಡಾ. ಎ.ವಿ. ಮಂಜುನಾಥ್. | ನಿರ್ದೇಶಕ (ಮೌಲ್ಯಮಾಪನ) |
| 5 | ಶ್ರೀಮತಿ ಸವಿತಾ ದಯಾನಂದ. | ಆಡಳಿತಾಧಿಕಾರಿ |
| 6 | ಶ್ರೀಮತಿ ಜ್ಯೋತಿ. ಎಸ್ ಜೆನ್ನಿ. | ಸಹ ನಿರ್ದೇಶಕ |

| | | |
|---|---|---|
| 7 | ಶ್ರೀ ದಿನೇಶ. ಎಸ್. | ಸಮಲೋಚಕ (ಅನುವಾದ ಮತ್ತು ತರಬೇತಿ) |
| 8 | ಶ್ರೀ ನಾರಾಯಣಪ್ಪ. ಎಚ್ | ಲೆಕ್ಕಾಧಿಕಾರಿ |
| 9 | ಶ್ರೀಮತಿ ಭವ್ಯಾ. ಎನ್ | ಮಾಹಿತಿ ನಿರ್ವಹಣಾ ವ್ಯವಸ್ಥೆ / ವೆಬ್ ಮ್ಯಾನೇಜರ್ |
| 10 | ಶ್ರೀಮತಿ ರಶ್ಮಿ ಸಿ.ಕೆ. | ರಿಸರ್ಚ್ ಫೆಲೋ |
| 11 | ಶ್ರೀಮತಿ ಅನುಶ್ರೀ. ಕೆ. ಎನ್. | ರಿಸರ್ಚ್ ಫೆಲೋ |
| 12 | ಶ್ರೀ ಎಂ. ಪ್ರಭು. | ರಿಸರ್ಚ್ ಫೆಲೋ |
| 13 | ಡಾ. ರಶ್ಮಿ ಹೆಗ್ಡೆ. | ರಿಸರ್ಚ್ ಫೆಲೋ |
| 14 | ಡಾ. ರೂಪಾ. ಡಿ. | ರಿಸರ್ಚ್ ಫೆಲೋ |
| 15 | ಶ್ರೀಮತಿ ಜಯ. ಎಸ್. ಕೆ. | ಆಪ್ತ ಕಾರ್ಯದರ್ಶಿ |
| 16 | ಶ್ರೀಮತಿ ಶ್ರುತಿ. ಎಸ್. ಕೊಪ್ಪದ | ಆಪ್ತ ಕಾರ್ಯದರ್ಶಿ |
| 17 | ಶ್ರೀ ಮಂಜುನಾಥ್. ಎಂ. | ಕಛೇರಿ ಸಹಾಯಕ (ಪ್ರೊಕ್ಯೂರ್ಮೆಂಟ್) |
| 18 | ಶ್ರೀಮತಿ ಅರುಂಧತಿ. ಪಿ. | ಡಿಟಿಪಿ ಆಪರೇಟರ್ |

| | | |
|---|---|---|
| 19 | ಶ್ರೀಮತಿ ಇಂದ್ರಾಣಿ. ಬಿ. ಎ. | ಕಛೇರಿ ಸಹಾಯಕಿ |
| 20 | ಶ್ರೀಮತಿ ಪ್ರಮಿಳಾ. ಕೆ. | ಕಛೇರಿ ಸಹಾಯಕಿ |
| 21 | ಕುಮಾರಿ ಗೀತಾ. ಆರ್. | ಕಛೇರಿ ಸಹಾಯಕಿ |
| 22 | ಶ್ರೀ ಚೇತನ್. ಜೆ. | ಗ್ರೂಪ್ ಡಿ |
| 23 | ಶ್ರೀ ಮಂಜುನಾಥ್. ಕೆ. ಸಿ. | ಗ್ರೂಪ್ ಡಿ |
| 24 | ಶ್ರೀ ಗಂಗಾಧರ್. ಪಿ. | ಗ್ರೂಪ್ ಡಿ |
| 25 | ಶ್ರೀಮತಿ ಅರುಣಾ. ಸಿ. ಎನ್. | ಗ್ರೂಪ್ ಡಿ |
| 26 | ಶ್ರೀ ಸುಮಂತ್. ಎನ್. ಜಾಧವ್. | ಗ್ರೂಪ್ ಡಿ |
| 27 | ಶ್ರೀ ಸುನಿಲ್. | ಚಾಲಕ |
| 28 | ಶ್ರೀ ಸಂತೋಷ್. | ಚಾಲಕ |
| 29 | ಶ್ರೀ ಯತೀಶ್. | ಚಾಲಕ |
| 30 | ಶ್ರೀ. ರವಿ. | ಚಾಲಕ |

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
Karnataka Evaluation Authority

# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

# ವಾರ್ಷಿಕ ವರದಿ 2019 - 2020

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಕೊಠಡಿ ಸಂ. 542, ಎರಡನೇ ಹಂತ, 5ನೇ ಮಹಡಿ,
ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ
ಬೆಂಗಳೂರು - 560 001
ಜಾಲತಾಣ: kmea.karnataka.gov.in
ಮಿಂಚಂಚೆ: keagok@karnataka.gov.in
ದೂರವಾಣಿ: 080 2235 3938, 080 22032561